ಕನ್ನಡ ವಿಶ್ವವಿದ್ಯಾಲಯ
ಹಂಪಿ

೨೦೦೯-೧೦ನೇ ಸಾಲಿನ ಎಂ.ಫಿಲ್ ಪದವಿಯ ಪರೀಕ್ಷೆಗೆ ಸಂಬಂಧಿಸಿದಂತೆ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲಾಗುತ್ತಿರುವ ಸಂಶೋಧನಾ ನಿಬಂಧ

ಬೇಂದ್ರೆಯವರ ಸಾಹಿತ್ಯದಲ್ಲಿ ಸ್ವಾತಂತ್ರ್ಯ ಹೋರಾಟದ ಪರಿಕಲ್ಪನೆ

ನಿಬಂಧಕಾರರು

ಹೆಚ್.ಎಸ್.ತಿಪ್ಪೇಸ್ವಾಮಿ
ಕನ್ನಡ ಎಂ.ಫಿಲ್. ವಿದ್ಯಾರ್ಥಿ (ಹಂಪಿ, ಕವಿವಿ)
ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

ಮಾರ್ಗದರ್ಶಕರು

ಡಾ. ಪ್ರಧಾನ್ ಗುರುದತ್ತ
ನಿವೃತ್ತ ಪ್ರಾಧ್ಯಾಪಕರು
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

೨೦೦೯-೧೦

ಶ್ರೀ [illegible]

[illegible]

[illegible]

ಕನ್ನಡ ವಿಶ್ವವಿದ್ಯಾಲಯ
ಹಂಪಿ

೨೦೦೯-೧೦ನೇ ಸಾಲಿನ ಎಂ.ಫಿಲ್ ಪದವಿಯ ಪರೀಕ್ಷೆಗೆ ಸಂಬಂಧಿಸಿದಂತೆ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಲಾಗುತ್ತಿರುವ ಸಂಶೋಧನಾ ನಿಬಂಧ

ಬೇಂದ್ರೆಯವರ ಸಾಹಿತ್ಯದಲ್ಲಿ ಸ್ವಾತಂತ್ರ್ಯ ಹೋರಾಟದ ಪರಿಕಲ್ಪನೆ

ನಿಬಂಧಕಾರರು

ಹೆಚ್.ಎಸ್.ತಿಪ್ಪೇಸ್ವಾಮಿ

ಕನ್ನಡ ಎಂ.ಫಿಲ್. ವಿದ್ಯಾರ್ಥಿ (ಹಂಪಿ, ಕ.ವಿ.ವಿ)
ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

ಮಾರ್ಗದರ್ಶಕರು

ಡಾ. ಪ್ರಧಾನ್ ಗುರುದತ್ತ

ನಿವೃತ್ತ ಪ್ರಾಧ್ಯಾಪಕರು
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

೨೦೦೯-೧೦

826A

ದೃಢೀಕರಣ ಪತ್ರ

೨೦೦೯-೧೦ನೇ ಸಾಲಿನಲ್ಲಿ ಕ್ರಮಸಂಖ್ಯೆ **KVTMKS-00418**ರ ಹಂಪಿ ವಿಶ್ವವಿದ್ಯಾಲಯದ ಎಂ.ಫಿಲ್. ಪದವಿಯ ವಿದ್ಯಾರ್ಥಿಯಾದ ಹೆಚ್.ಎಸ್.ತಿಪ್ಪೇಸ್ವಾಮಿ ಅವರು ನನ್ನ ಮಾರ್ಗದರ್ಶನದಲ್ಲಿ **"ಬೇಂದ್ರೆಯವರ ಸಾಹಿತ್ಯದಲ್ಲಿ ಸ್ವಾತಂತ್ರ್ಯ ಹೋರಾಟದ ಪರಿಕಲ್ಪನೆ"** ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ಎಂ.ಫಿಲ್. ಪದವಿಗಾಗಿ ರಚಿಸಿ ಕನ್ನಡ ವಿಶ್ವವಿದ್ಯಾಲಯಕ್ಕೆ ಒಪ್ಪಿಸಲು ಸಿದ್ಧಪಡಿಸಿದ್ದಾರೆ.

ಈ ನಿಬಂಧವನ್ನು ಈ ಹಿಂದೆ ಈ ವಿಶ್ವವಿದ್ಯಾಲಯಕ್ಕೆ ಅಥವಾ ಬೇರೆ ವಿಶ್ವವಿದ್ಯಾನಿಲಯಗಳ ಪದವಿ, ಡಿಪ್ಲೊಮೊ ಅಥವಾ ಯಾವುದೇ ಪರೀಕ್ಷೆಗಾಗಿ ಸಲ್ಲಿಸಿಲ್ಲವೆಂದು ದೃಢೀಕರಿಸುತ್ತೇನೆ.

ಪ್ರಧಾನ್ ಗುರುದತ್ತ

ಮೈಸೂರು
೧೧-೦೮-೨೦೧೦

(ಪ್ರಧಾನ್ ಗುರುದತ್ತ)
ಮಾರ್ಗದರ್ಶಕರು

ಅಭ್ಯರ್ಥಿಯ ಘೋಷಣಾ ಪತ್ರ

"ಬೇಂದ್ರೆಯವರ ಸಾಹಿತ್ಯದಲ್ಲಿ ಸ್ವಾತಂತ್ರ್ಯ ಹೋರಾಟದ ಪರಿಕಲ್ಪನೆ" ಎಂಬ ಶೀರ್ಷಿಕೆಯ ಈ ನಿಬಂಧವನ್ನು ಕನ್ನಡ ಎಂ.ಫಿಲ್. ಪದವಿಯ ಕ್ರಮಸಂಖ್ಯೆ **KVTMKS-00418**ರ ವಿದ್ಯಾರ್ಥಿಯಾದ ನಾನು ೨೦೦೯-೧೦ನೇ ಸಾಲಿನ ಪರೀಕ್ಷೆಗಾಗಿ ಡಾ. ಪ್ರಧಾನ್ ಗುರುದತ್ತ (ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷರು, ಬೆಂಗಳೂರು-೫೬೦೦೫೬) ಅವರ ಸೂಕ್ತ ಸಲಹೆ ಮತ್ತು ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ.

ಪ್ರಸ್ತುತ ಸಂಪ್ರಬಂಧವನ್ನು ಈ ಹಿಂದೆ ಈ ವಿಶ್ವವಿದ್ಯಾಲಯಕ್ಕೆ ಅಥವಾ ಬೇರೆ ವಿಶ್ವವಿದ್ಯಾನಿಲಯಗಳ ಪದವಿ, ಡಿಪ್ಲೊಮೊ ಅಥವಾ ಯಾವುದೇ ಪರೀಕ್ಷೆಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಮೈಸೂರು
ದಿನಾಂಕ: ೧೧-೦೮-೨೦೧೦

(ಹೆಚ್.ಎಸ್.ತಿಪ್ಪೇಸ್ವಾಮಿ)
೨೦೦೯-೧೦ನೇ ಸಾಲಿನ ಎಂ.ಫಿಲ್ ವಿದ್ಯಾರ್ಥಿ
ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

[illegible]

[illegible]

[illegible]

[illegible]

ಪರಿವಿಡಿ

***

ಅಧ್ಯಾಯ – ೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ದ.ರಾ.ಬೇಂದ್ರೆಯವರು ಕವಿಗಳು, ರಸಿಕರು, ವಿಮರ್ಶಕರು, ಭಾವಜೀವಿಗಳು, ಬದುಕಿನ ಕುಲುಮೆಯಲ್ಲಿ ಬೆಂದು ನೊಂದು ಅಪಾರ ಸಾಹಿತ್ಯವನ್ನು ಸೃಷ್ಟಿಸಿದರು.

ಆಡು ಮುಟ್ಟದ ಸೊಪ್ಪಿಲ್ಲವೆಂಬಂತೆ ಬೇಂದ್ರೆ ಕೈ ಹಾಕದ ಪ್ರಕಾರವಿಲ್ಲ. ಮುಟ್ಟಿದ ಮಣ್ಣನ್ನು ಚಿನ್ನ ಮಾಡುವ ಕೈಚಳಕ ಅವರದು. ಕನ್ನಡ ಸಾಹಿತ್ಯಕ್ಕೆ ಉದಾತ್ತವಾದ ಕಾವ್ಯ ಸಂಪತ್ತನ್ನು ನೀಡಿರುವ ವರಕವಿ ಬೇಂದ್ರೆಯವರ ಕಾವ್ಯಪ್ರಕಾರಗಳಿಂದ ಕಾವ್ಯ, ಕತೆ, ನಾಟಕ, ವಿಮರ್ಶೆಗಳಲ್ಲಿ ದೇಶಾಭಿಮಾನ, ನಾಡಿನಭಿಮಾನ, ಸಾಮಾಜಿಕ ಸಮಸ್ಯೆ, ನಗು, ಆನಂದ ದರ್ಶನ ತತ್ವವನ್ನು ಕಾಣಬಹುದು; ಜೊತೆಗೆ ಅವರ ಬದುಕಿನಲ್ಲೂ ಕಾಣಬಹುದು. ಇದು ಅವರ ಕಾವ್ಯಗಳಿಂದಲೇ ತಿಳಿದುಬರುತ್ತದೆ.

ಅವರೇ ಒಂದು ಕಡೆ ಹೇಳಿಕೊಳ್ಳುವಂತೆ "ಜೀವನವೇ ಸಾಹಿತ್ಯ, ಸಾಹತ್ಯದಲ್ಲಿಯೇ ತನ್ನ ಜೀವನ ತಲ್ಲೀನ" ಎಂದಿದ್ದಾರೆ. ಇದು ಸತ್ಯ ಕೂಡ ಹೌದು. ಇವರು ಕನ್ನಡ ಸಾಹಿತ್ಯಲೋಕಕ್ಕೆ ೧೯೭೪ರಲ್ಲಿ "ನಾಕುತಂತಿ" ಕವನಸಂಕಲನಕ್ಕೆ ಜ್ಞಾನಪೀಠ ಪ್ರಶಸ್ತಿಯನ್ನು ತಂದುಕೊಟ್ಟ ಮಹಾಕವಿ. ಇಂಥ ಮಹಾಕವಿ ಹುಟ್ಟಿದ್ದು ಜನವರಿ ೩೧, ೧೮೯೬ರಲ್ಲಿ, ಜನ್ಮಸ್ಥಳ ಧಾರವಾಡ, ತಂದೆ ರಾಮಚಂದ್ರ ಬೇಂದ್ರೆ, ತಾಯಿ ಅಂಬಕ್ಕನವರ ಹಿರಿಯ ಪುತ್ರರಾಗಿ, ಆಧುನಿಕ ಕನ್ನಡ ಸಾಹಿತ್ಯ ರತ್ನತ್ರಯರಲ್ಲಿ ಒಬ್ಬರಾದ ಬೇಂದ್ರೆಯವರು, ರವೀಂದ್ರನಾಥ ಠಾಗೋರ್, ಎಮರ್ಸನ್, ಕೀಟ್ಸ್ ಹಾಗೂ ಅರವಿಂದರ ತತ್ವಜ್ಞಾನವನ್ನು ಅರಗಿಸಿಕೊಂಡು, ಜಾನಪದ ಶೈಲಿಯನ್ನು ಬಳಸಿಕೊಂಡು ಕನ್ನಡ ಕಾವ್ಯವನ್ನು ಶ್ರೀಮಂತಗೊಳಿಸಿದ್ದಾರೆ. ಬೇಂದ್ರೆಗೆ ಕಾವ್ಯದ ಅಮಲು ಹಿಡಿಸಿದಾತ ಸಂಸ್ಕೃತದ ಜಗನ್ನಾಥ ಪಂಡಿತ. ಕವಿ ಬೇಂದ್ರೆಯವರನ್ನು ಸರ್ವಜ್ಞ ಮತ್ತು ಲಕ್ಷ್ಮೀಶ ಕನ್ನಡಕ್ಕೆ ಸೆಳೆದ ಕವಿಗಳು.

ಪಟ್ಟಪಾಡೆಲ್ಲವನ್ನು ಹಾಡಾಗಿಸುವ ಪ್ರತಿಭೆ ಬೇಂದ್ರೆಯವರದು. ಅಂತ ಪಾಡುಗಳು ಏನಾದರೂ ಒತ್ತಟ್ಟಿಗಿರಲಿ

"ಎನ್ನಪಾಡೆನಗಿರಲಿ ಅದರ ಹಾಡನ್ನಷ್ಟೇ
ನೀಡುವೆನು ರಸಿಕ! ನಿನಗೆ!

ಕಲ್ಲುಸಕ್ಕರೆಯಂಥ ನಿನ್ನೆದೆಯು ಕರಗಿದರೆ
ಆ ಸವಿಯ ಹಣಿಸು ನನಗೆ"!

ಇವರು ಎಂಥ ಕಷ್ಟದ ಸನ್ನಿವೇಶಗಳನ್ನೇ ಅನುಭವಿಸಿದರು. ಅದನ್ನು ಹಾಡಾಗಿಸಿ ರಸಿಕರಾದ ಸಹೃದಯರಿಗೆ ಕೊಡುಗೆಯಾಗಿ ಕೊಟ್ಟಿದ್ದಾರೆ.

ಬೇಂದ್ರೆಯವರು ಕವಿ ಎಂದರೆ ಯಾರು ಎಂಬುದನ್ನು ಸೊಗಸಾಗಿ ಕೊಟ್ಟಿದ್ದಾರೆ. "ನುಡಿದು ಬೇಸತ್ತಾಗ ದುಡಿದುಡಿದು ಸತ್ತಾಗ ಜನಕೆ ಹಿಗ್ಗಿನ ಹಾಡು ನೀಡಾಂವ" ದುಡಿಯುವ ಜನರಿಗೆ ಬೇಸರವಾದಾಗ ಅವರ ಸಂತೋಷಕ್ಕೆ ಹಾಡನ್ನು ನೀಡುವ ಕವಿ ತನಗೆ ಬೇಸರವಾದಾಗ ಏನು ಮಾಡಬಹುದು ಎಂಬುದನ್ನು ಸಹ ತಿಳಿಸಿಕೊಟ್ಟಿದ್ದಾರೆ.

"ಕವಿ ಬೇಸರ ಹರಿಸಾಕ
ಹಾಡಿನುಡಿಸಾಕ ಹೆಚ್ಚಿಗೇನು ಬೇಕು
ಒಂದು ಹೂತ ಹುಣಸೀಮರಸಾಕು."

ಎಂದು ಹೇಳುತ್ತಾರೆ. ಬೇಂದ್ರೆಯವರು ಸಹೃದಯರ ಬಗ್ಗೆ ಮತ್ತೊಂದು ಅಮೂಲ್ಯವಾದ ಮಾತನ್ನು ವ್ಯಕ್ತಪಡಿಸಿದ್ದಾರೆ.

"ಹದ ಇಲ್ದ ಒಳಗ
ಪದ ಬರೋದಿಲ್ಲ
ಕದ ತೆಗೆಯೋದಿಲ್ಲ ಅಂತಃಕರಣ"

ಎಂಥ ಶ್ರೇಷ್ಠ ಕವಿಯೇ ಆಗಲಿ, ಅವರ ಬಗ್ಗೆ ಹೊಗಳಿಕೆ ತೆಗಳಿಕೆಗಳು ಇದ್ದೇ ಇರುತ್ತವೆ. ಹಾಗೆಯೇ ಬೇಂದ್ರೆಯವರ ಕವನಗಳು ಸಹ ಅರ್ಥವಾಗುವುದಿಲ್ಲ ಎಂಬ ವಿಮರ್ಶಕರ ನುಡಿಗಳು ಬಂದಾಗ ಬೇಂದ್ರೆ ಈ ಕೆಳಗಿನಂತೆ ಪ್ರತಿಕ್ರಿಯಿಸಿದ್ದಾರೆ.

"ಅಂಬಿಕಾತನಯದತ್ತ ಮಾಡಿದ ಕಗ್ಗ
ಜಗ್ಗಬೇಡ ನೀ ಹಿಗ್ಗಾಮುಗ್ಗಾ
ಮಿರಿ ಅಯ್ತಿ ಒಳಗ ಬಂದಿಲ್ಲೋಹಗ್ಗ"

ಬೇಂದ್ರೆಯವರ ಕೆಲವು ಕವನಗಳು ವಿಮರ್ಶಕರಿಗೆ ಅರ್ಥವಾಗುವುದಿರಲಿ ಬೇಂದ್ರೆಯವರಿಗೇ ಎಷ್ಟೋ ಕವನಗಳು ಅರ್ಥವಾಗಿಲ್ಲವಂತೆ ಇನ್ನು ಸಹೃದಯರಿಗೆ ಹೇಗೆ ಅರ್ಥವಾದವು. ಅರ್ಥವಾಗುವುದಿಲ್ಲ ಎಂಬುದರ ಬಗ್ಗೆ ಬೇಂದ್ರೆಯವರಿಗೆ ಅಸಮಾಧಾನವಿಲ್ಲವಂತೆ ಒಮ್ಮೆ ವಾಮನ ಬೇಂದ್ರೆ ಕೇಳಿದರಂತೆ ಅಪ್ಪಾಜಿ ನನಗೆ ಕೆಲವು

ಕವನಗಳು ಅರ್ಥವಾಗುತ್ತಿಲ್ಲವಲ್ಲ ಎಂದು ಅದಕ್ಕೆ ಬೇಂದ್ರೆಯವರು ಹೇಳಿದರಂತೆ, "ನಿನಗೆ ಏನ್‌ತಿಳಿತದಾ ಅಷ್ಟು ಓದು ತಿಳಿಯದ್ದನ್ನು ಮತ್ತೆ ಮತ್ತೆ ಓದು ನನಗೆ ಕೇಳಬ್ಯಾಡ ಅದು ತಿಳಿಯೋ ಕಾಲಕ್ಕೆ ತಿಳಿತಾದ ನನಗೂ ಎಲ್ಲಾ ತಿಳಿದಿಲ್ಲಾ ನನಗೂ ಹ್ಯಾಂಗ ಹ್ಯಾಂಗ ಏನೇನು ತಿಳಿತಾದ ಹಾಂಗ ಹಾಂಗ ನಾ ಹೇಳಿಕೋತ ಹೋಗುತ್ತೀನಿ" ಅಂದರಂತೆ.

ಹಾಗೆಯೇ ಏನು ನೀವು ಮೊದಮೊದಲು ಜನಪದ ಶೈಲಿ ಬರೆದು ನಂತರ ನಾಕುತಂತಿಯೊಳಗೊಂಡಂತೆ ಈಚೆಗೆ ಗ್ರಾಂಥಿಕ ಶೈಲಿಯಲ್ಲಿ ಬರೆದಿರಲ್ಲಾ ಎಂಬ ಪ್ರಶ್ನೆಗಳು ಬಂದಾಗ ನೋಡಿ ಜನಪದ ಶೈಲಿಯ ಮಾತೂ ಅಷ್ಟೆ ಗ್ರಾಂಥಿಕ ಶೈಲಿಯಲ್ಲಿ ಬರೆದಾಗಲೂ ಜನಪದದ ಹಸಿರು ಮಾತುಗಳು ಅಲ್ಲಲ್ಲಿ ಮೊದಲಿನಿಂದಲೂ ತಾವಾಗಿ ಬರುತ್ತವೆ ಎನ್ನುತ್ತಾರೆ.

ಕವಿ ಬೇಂದ್ರೆಯವರ ಕಾವ್ಯಸಂಚಯದಲ್ಲಿ ಅಲ್ಲಲ್ಲಿ ಸ್ಫುರಿಸಿರುವ ಪ್ರತಿಮಾ ಸಂಪತ್ತು ಅಪಾರವಾಗಿದೆ, ಮೆಲುಕು ಹಾಕುವಂಥದಾಗಿದೆ:

"ಮೂಡಲ ಮನೆಯ ಮುತ್ತಿನ ನೀರಿನ
ಎರಕ್ಕವ ಹೊಯ್ದಾ – ನುಣ್ಣನೆರಕ್ಕವ ಹೊಯ್ದಾ
ಬಾಗಿಲು ತೆರೆದೂ, ಬೆಳಕೂ ಹರಿದೂ
ಜಗವೆಲ್ಲಾ ತೊಯ್ದೊ – ಹೋಯ್ತೋ ಜಗವೆಲ್ಲಾ ತೊಯ್ದಾ

ಈ ಕವನದಲ್ಲಿ ಬೆಳಗಿನ ಒಂದು ನೋಟ ಪ್ರತಿಫಲಿತವಾಗಿದೆ. ಮೇಲುನೋಟಕ್ಕೆ ಇದು ಒಂದು ಬೆಳಗಿನ ಬಣ್ಣನೆಯಾಗಿ ಕಂಡುಬರುತ್ತದೆ. ಆದರೆ ಇಷ್ಟಕ್ಕೇ ಈ ಕವಿತೆ ಪರಿಮಿತವಾಗಿಲ್ಲ. ಕವಿಬೇಂದ್ರೆಯವರೆ ಸ್ವತಃ 'ಸಂದರ್ಭಸೂಚಿ'ಯಲ್ಲಿ, ಭಕ್ತನೊಬ್ಬನ ಅನುಭಾವದ ಸೂರ್ಯೋದಯದ ಪ್ರತಿಮೆ ಇದಾಗಿದೆಯೆಂದು ನಿರ್ವಚಿಸಿದ್ದಾರೆ. ಸಹೃದಯ ವಿಮರ್ಶಕರಾದ ಪ್ರೊ. ಕೀರ್ತಿನಾಥ ಕುರ್ತಕೋಟಿಯವರು, ಕವಿಮನದಿಂದ ಉದ್ಭವಿಸುವ 'ಕಾವ್ಯೋದಯ'ದ ವರ್ಣನೆಯೂ ಅಡಕವಾಗಿದೆ ಎಂದಿದ್ದಾರೆ". ದಿವಂಗತ ಕವಿ ಡಿ.ಎಸ್.ಕರ್ಕಿಯವರು, ಇದರಲ್ಲಿ ನಾಡಿನ ಸ್ವಾತಂತ್ರ್ಯೋತ್ಸವದ ವರ್ಣನೆ ಇದೆ ಎಂದಿದ್ದಾರೆ"[೧]

೧. ಬೇಂದ್ರೆ ಸಾಹಿತ್ಯ ಸಮಾಲೋಚನೆ – ಸಂ.: ರಾಗೌ, ಪು. ೩.

ಇದೇ ಮೇರೆಗೆ ಬೇಂದ್ರೆಯವರ "ಪಾತರಗಿತ್ತಿಪಕ್ಕ, ನೋಡಿದೇನ, ಅಕ್ಕ" ಎಂಬ ಕವಿತೆಯೂ ಅರ್ಥಪೂರ್ಣ ಪ್ರತಿಮೆಯಾಗಿದೆ.

ಗಾಳಿ ಕೆನಿಲೇನ
ಮಾಡಿದ್ದಾರ ತಾನ
. . . .
ಇನ್ನು ಎಲ್ಲಿ ಓಟ
ನಂದನವನದ ತೋಟ!

ಮೇಲುನೋಟಕ್ಕೆ ಇದೂ ಒಂದು ಮಕ್ಕಳ ಪದ್ಯವೆಂಬಂತೆ ಕಂಡುಬಂದರೂ ಇದೊಂದು ಪ್ರತಿಮೆ ಎಂದು ದಿವಂಗತ ತೀ.ನಂ.ಶ್ರೀಕಂಠಯ್ಯನವರು ಎತ್ತಿತೋರಿದ್ದಾರೆ. "ಇನ್ನು ಎಲ್ಲಿ ಓಟ, ನಂದನವನದ ತೋಟ!" ಎಂಬುದು ಆತ್ಮನ ಜನ್ಮಜನ್ಮಾಂತರದ ಲೀಲಾವಿಲಾಸವನ್ನು ಧ್ವನಿಸುತ್ತದೆ ಎಂದು ವಿವರಿಸಿದ್ದಾರೆ. ಹೀಗೆ ಬೇಂದ್ರೆಯವರ ಭಾವಗೀತಗಳಲ್ಲಿ ಅಲ್ಲಲ್ಲಿ ಪುಷ್ಕಳ ಪ್ರತಿಮೆಗಳು ಹರಡಿಕೊಂಡಿವೆ. ಇವುಗಳ ವೈವಿಧ್ಯ, ವೈಶಿಷ್ಟ್ಯ, ಅರ್ಥಕಾಂತಿಗಳ ಪ್ರತ್ಯೇಕ ಅಧ್ಯಯನ ನಡೆಯಬೇಕಿದೆ ಎಂದು ಡಾ. ಎಂ.ಅಕಬರ ಅಲಿ ತಮ್ಮ ಭಾಷಣದಲ್ಲಿ ಹೇಳಿದ್ದಾರೆ.

ಹೀಗೆ ಬೇಂದ್ರೆಯವರ ಭಾವಗೀತಗಳಲ್ಲಿ ಒಡಮೂಡಿರುವ ಅರ್ಥದ ಅನೇಕ ಮಜಲುಗಳಿವೆ. ಅವುಗಳ ಅಧ್ಯಯನ, ಅನ್ವೇಷಣೆ ನಡೆಯಬೇಕಿದೆ. ಅವರೇ ಒಂದೆಡೆ ಹೇಳಿರುವಂತೆ "ನಡೆದಷ್ಟಿದೆ ನೆಲ, ಪಡೆದಷ್ಟಿದೆ ಫಲ" ಎಂದು ಹೇಳಿದರೆ ಅತಿಶಯೋಕ್ತಿಯಾಗದು.

ಬೇಂದ್ರೆ ಕಾವ್ಯದ ಮೂಲಬೇರುಗಳು ಎಲ್ಲಿವೆ? ಎಂಬುದೇ ಮುಖ್ಯತಮ ಪ್ರಶ್ನೆ. ಈ ಕುರಿತು ಸ್ವತಃ ಬೇಂದ್ರೆಯವರೇ ಹೇಳಿದ ಎರಡು ಅಭಿಪ್ರಾಯಗಳು ಹೀಗಿವೆ.

"ಸೃಜನದ ಮೂಡು ಒಂದು ಗುಂಗು. ಅದರ ನಾದಲಹರಿಯಲ್ಲಿ ಮಂತ್ರವು ಗುಪ್ತವಾಗಿರುತ್ತದೆ. ಅದರ ಶೃತಿಯಲ್ಲಿಯೂ ರೂಪಸಂಕೇತಗಳು ಮಿಂಚಿ ಮಾಯ ವಾಗುತ್ತವೆ. ಅದರ ನೃತ್ಯ ನಾಟಕ ಹೃದಯವನ್ನು ಆಂದೋಲಿಸುವುದು. ಮುದ್ರೆ ಅರ್ಥ ಪಿಂಡವಾಗಿ ಶಬ್ದಗಳೊಡನೆ ಸಹಜೀವನ ಮಾಡುವುದು. ಆಗ ಅನುಭೂತದಲ್ಲಿ

ಅನುಭವಗೊಂಡು ವೈಖರಿಯ ತಂತಿ–ಮೃದಂಗ ಸೊಲ್ಲುಗೂಡುವುದು ಆಭಾವೋತ್ಥಾನದಲ್ಲಿ ರಚನೆ ಕ್ರಮಗೊಳ್ಳುವುದು; ಲೇಖನಕ್ಕೂ ಪ್ರೇರಿಸುವುದು"[೧]

ಕಾವ್ಯವು ಭಾವದ ದರ್ಶನ, ಪ್ರದರ್ಶನ. ಸುಷುಪ್ತಿಯು ಅಭಾವ ಸ್ಥಿತಿಯಲ್ಲ; ಅದೃಶ್ಯ, ಅದರ್ಶನ ಸ್ಥಿತಿ; ಅಂತೆಯೇ ಅದಕ್ಕೆ ಮತ್ತೆ ಎಚ್ಚರವಿದೆ. ಎಚ್ಚರಕ್ಕೆ ಅರ್ಥಭಾವ; ಸ್ವಪ್ನಕ್ಕೆ ತೇಜದ ಶುದ್ಧಿ; ಸುಷುಪ್ತಿಗೆ ಎಚ್ಚರದ ಹಾದಿ ತೋರಿಸುವ ಈ ಸಾತ್ವಿಕ – ಗುರು, ತುರೀಯ; ನಾಲ್ಕನೆಯವ ಚತುರ. ತೂರ್ಯ ತುತ್ತೂರಿ ಊದಿ ಕವಿಯ ಸದ್ಭಾವಕ್ಕೆ ಜಾಗರಾಭ್ಯಾಸ ಮಾಡಿಸುತ್ತಾನೆ ಆತ. ಅವನ ಭಾವದ ತಂತಿ ಮಿಡಿದಾಗ ಶಬ್ದ – ಅರ್ಥ – ಸಂಕೇತ ಅದರ ಕೇಂದ್ರೀಕರಣ ಕೃತಿಗೆ ಆಕೃತಿ ತಾಳುತ್ತವೆ"[೨] ಎಂದು ಬೇಂದ್ರೆಯವರು ವಿರಾಟ್ ಸ್ವರೂಪದಲ್ಲಿ ಹೇಳಿದ್ದಾರೆ.

ಹೀಗೆ ಬೇಂದ್ರೆಯವರು ತಮ್ಮದೇ ಆದ ಶೈಲಿಯಲ್ಲಿ ಸಾಹಿತ್ಯದ ಸೊಗಡನ್ನು ವಿಶೇಷವಾದ ರೀತಿಯಲ್ಲಿ ಬರೆಯುತ್ತಾರೆ. ಬೇಂದ್ರೆಯವರು ಕನ್ನಡ ಸಾಹಿತ್ಯದಲ್ಲಿ ನಾಡು–ನುಡಿ, ಭಾರತಾಂಬೆಯನ್ನು ಸ್ವತಂತ್ರದೇವಿಯನ್ನಾಗಿ ಕಾಣಬೇಕೆಂಬ ಹಂಬಲದಿಂದ ಅನೇಕ ಕವನಗಳನ್ನು ರಚಿಸುತ್ತಾರೆ. ೧೯೪೭ರಲ್ಲಿ ನಮಗೆ ದೊರೆತ ಸ್ವಾತಂತ್ರ್ಯ, ಯುದ್ಧರಹಿತ ಸ್ವಾತಂತ್ರ್ಯವಾಗಿದ್ದರೂ ಸ್ವಾತಂತ್ರಕ್ಕಾಗಿ ನಡೆದ ಚಳುವಳಿಯ ಹೋರಾಟಗಳಲ್ಲಿ ಮಡಿದವರು ಅನೇಕರು. ಇಂಥ ಹುತಾತ್ಮರನ್ನು ನೆನೆಯಲೇ ಬೇಕು ಎಂದಿದ್ದಾರೆ. ಬೇಂದ್ರೆಯವರು ಸಾಹಿತ್ಯ ಕ್ಷೇತ್ರದಲ್ಲಿ ಅಪಾರವಾದ ಕೆಲಸವನ್ನು ಮಾಡಿದ್ದಾರೆ. ಬೇಂದ್ರೆ ತಮ್ಮ ಸಾಹಿತ್ಯದಲ್ಲಿ ಪ್ರಕೃತಿಯ ರಮ್ಯ ವರ್ಣನೆ, ಗಂಡು ಹೆಣ್ಣಿನ ಪ್ರೇಮಗೀತೆಗಳು, ವಿಡಂಬನೆ ಸಾಮಾಜಿಕ ಪ್ರಜ್ಞೆಯನ್ನೊಳಗೊಂಡಂತೆ ದೇಶಭಕ್ತಿ ಮೊದಲಾದವನ್ನು ವೈವಿಧ್ಯಪೂರ್ಣವಾಗಿ ಹೆಣೆದಿದ್ದಾರೆ. ಭಾರತ ಪರದಾಸ್ಯದ ಶೃಂಖಲೆಯಲ್ಲಿದ್ದಾಗ ಅದರ ಬಿಡುಗಡೆಗಾಗಿ ಎಚ್ಚರಿಸಿ ಸ್ವತಃ ಜೈಲುವಾಸವನ್ನು ಅನುಭವಿಸಿದ ಅದಮ್ಯಚೇನತ ಅಂಬಿಕಾತನಯದತ್ತರು.

ಈ ಎಲ್ಲಾ ಅಂಶಗಳಿಂದ ಕನ್ನಡ ಸಾಹಿತ್ಯದಲ್ಲಿ ದೇಶದ ಸ್ವಾತಂತ್ರ್ಯದ ಪರಿಕಲ್ಪನೆಯಲ್ಲಿ ಸಾಹಿತ್ಯವನ್ನು ರಚಿಸಿರುವುದು ಬೇಂದ್ರೆಯವರ ಹೆಗ್ಗಳಿಕೆ ಎಂದು ಹೇಳಬಹುದಾಗಿದೆ. ಬೇಂದ್ರೆ ಸಾಹಿತ್ಯದಲ್ಲಿ ಸ್ವಾತಂತ್ರ್ಯದ ಪರಿಕಲ್ಪನೆಯನ್ನು ಅವರ

---

೧. ಸಾಹಿತ್ಯದ ವಿರಾಟ್ ಸ್ವರೂಪ – ಬೇಂದ್ರೆ, ಪು. ೬೦.
೨. ಸಾಹಿತ್ಯದ ವಿರಾಟ್ ಸ್ವರೂಪ – ಬೇಂದ್ರೆ, ಪು. ೫೨–೫೮.

ಭಾವಗೀತೆಗಳಲ್ಲಿ ಕಂಡು ಬರುವಂತದ್ದನ್ನು ಪ್ರಸ್ತುತ ಪ್ರಬಂಧದಲ್ಲಿ ತಿಳಿಸಲು ಪ್ರಯತ್ನಿಸಿದ್ದೇನೆ.

ಪ್ರಸ್ತುತ ನಿಬಂಧವನ್ನು ಈ ಕೆಳಕಂಡಂತೆ ಅಧ್ಯಯನವಾರು ವಿಂಗಡಣೆಯ ಮೂಲಕ ಒಟ್ಟು ಐದು ಅಧ್ಯಾಯಗಳಾಗಿ ವಿಂಗಡಿಸಲಾಗಿದೆ. ಮೊದಲನೆ ಅಧ್ಯಾಯ, ಅಧ್ಯಯನದ "ಉದ್ದೇಶ ಮತ್ತು ವ್ಯಾಪ್ತಿ"ಯಾಗಿದ್ದು, ಈ ಪ್ರಸ್ತುತ ನಿಬಂಧದ "ಉದ್ದೇಶ ವ್ಯಾಪ್ತಿ"ಯನ್ನು ತಿಳಿಸಲಾಗಿದೆ. ಎರಡನೇ ಅಧ್ಯಾಯವು "ಬೇಂದ್ರೆಯವರ ಬದುಕು-ಬರಹ" ಎಂದು ಅವರು ಬರೆದ ಕೃತಿಗಳನ್ನು ಹಾಗೂ ಇತರ ಸಂಬಂಧಿಕರ ಜೊತೆಯಲ್ಲಿ ಬೆಳೆದುಬಂದ ಬಗೆಯನ್ನು ಹಾಗೂ ಸಾಹಿತ್ಯ ಕ್ಷೇತ್ರಕ್ಕೆ ಸಲ್ಲಿಸಿದ ಅಪಾರ ಸೇವೆಯನ್ನು ಕುರಿತು ತಿಳಿಸಲಾಗಿದೆ. ಮೂರನೇ ಅಧ್ಯಾಯವು "ಭಾರತೀಯ ಸ್ವಾತಂತ್ರ್ಯ "ಹೋರಾಟದ ಒಂದು ಸಂಕ್ಷಿಪ್ತ ಚಿತ್ರಣ" ಈ ಅಧ್ಯಾಯದಲ್ಲಿ ಭಾರತದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಮಹಾಚೇತನರ ಬಗ್ಗೆ ಅವರು ೧೯೪೨ರ ಕ್ವಿಟ್ ಇಂಡಿಯಾ ಚಳುವಳಿ. ೧೮೫೭ರ ಸಿಪಾಯಿದಂಗೆಯಲ್ಲಿ ಸ್ವಾತಂತ್ರ್ಯ ಹೋರಾಟಕ್ಕಾಗಿ ತಮ್ಮ ಜೀವವನ್ನೇ ಮುಡುಪಾಗಿಟ್ಟ ಮಹಾನಾಯಕರನ್ನು ಕುರಿತು ಸಂಕ್ಷಿಪ್ತವಾಗಿ ಚಿತ್ರಣವನ್ನು ನೀಡಲಾಗಿದೆ. ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಅನೇಕ ಮಹಾನ್ ಚಳುವಳಿಗಾರರು ಹೋರಾಡಿದರೆ, ಕನ್ನಡ ಸಾಹಿತ್ಯದಲ್ಲಿ ಅದು ನವೋದಯ ಸಾಹಿತ್ಯದ ಕವಿಗಳು ತಮ್ಮ ಬರಹದ ಮೂಲಕ ಬ್ರಿಟಿಷರ ವಿರುದ್ಧ ಕವನಗಳನ್ನು ಬರೆಯುವುದರ ಮೂಲಕ ಸ್ವಾತಂತ್ರ್ಯಕ್ಕಾಗಿ ಹೋರಾಟದ ಕವನಗಳನ್ನು ಬರೆದು ಸರೆಮನೆವಾಸವನ್ನು ಅನುಭವಿಸಿದ ಕವಿ ಎಂದರೆ ದತ್ತಾತ್ರೆಯ ರಾಮಚಂದ್ರಬೇಂದ್ರೆಯವರು. ಪ್ರಸ್ತುತ ನಿಬಂಧದ ನಾಲ್ಕನೇ ಅಧ್ಯಾಯವಾಗಿ "ಬೇಂದ್ರೆಯವರ ಸಾಹಿತ್ಯದಲ್ಲಿ ಸ್ವಾತಂತ್ರ್ಯ ಹೋರಾಟದ ಪರಿಕಲ್ಪನೆ" ಎಂಬ ಅಧ್ಯಯನದಲ್ಲಿ ಬೇಂದ್ರೆಯವರು ಬರೆದಂತಹ 'ನರಬಲಿ' ಕವನದಿಂದ ಬ್ರಿಟಿಷರ ಕೆಂಗಣ್ಣಿಗೆ ಬಲಿಯಾಗಿ ಸೆರೆಮನೆವಾಸ ಅನುಭವಿಸಿರುವುದನ್ನು ಪ್ರಸ್ತುತ ಅಧ್ಯಾಯದಲ್ಲಿ ಕಾಣಬಹುದಾಗಿದೆ. ಅವರ ಭಾವಗೀತೆಗಳಲ್ಲಿ ಕಂಡುಬರುವಂತ ಸ್ವಾತಂತ್ರ್ಯ ಹೋರಾಟದ ಪರಿಕಲ್ಪನೆಯನ್ನು ಕಾಣುತ್ತೇವೆ.

ಕೊನೆಯದಾಗಿ ಐದನೇ ಅಧ್ಯಾಯವು ಔಪಚಾರಿಕ ಪೂರ್ವನಿರ್ಧರಿತ ಪ್ರಬಂಧದ ಸಿದ್ಧನೆಲೆಯಾದ ಉಪಸಂಹಾರ ಇದು ಒಟ್ಟು ವಿಷಯದ ಅಧ್ಯಯನ, ಆಸಕ್ತಿ ಒಳಗೊಂಡಿರುವ ವಿಚಾರ, ವಿಶೇಷತೆಯ ಅನಿಸಿಕೆಯನ್ನು ಹೊಂದಿರುತ್ತದೆ.

ಬೇಂದ್ರೆಯವರ ಸಾಹಿತ್ಯದಲ್ಲಿ ಸ್ವಾತಂತ್ರ್ಯಹೋರಾಟದ ಪರಿಕಲ್ಪನೆ ಎಂಬ ವ್ಯಾಪಕ ವಿಷಯವನ್ನು ಹೀಗೆ ಅಧ್ಯಯನ ಮಾಡುತ್ತಿದ್ದು ಬೇಂದ್ರೆಯವರ ಸಾಹಿತ್ಯದ ವ್ಯಾಪಕತೆಯನ್ನು ಸಂಪೂರ್ಣವಾಗಿ ಅಧ್ಯಯನ ಮಾಡಲು ಪ್ರಯತ್ನಿಸಿದರು, ಕೆಲವು ಆಯ್ದಸಾಹಿತ್ಯವನ್ನು ಅಭ್ಯಸಿಸಿರುವುದು ಈ ವಿಷಯದ ಅಧ್ಯಯನದಿಂದ ಸಾಕ್ಷ್ಯವಾಗಿ ಕಾಣಬಹುದಾಗಿದೆ.

ಅಧ್ಯಾಯ – ೨

ಬೇಂದ್ರೆಯವರ ಬದುಕು – ಬರಹ

ಕನ್ನಡ ಸಾಹಿತ್ಯದಲ್ಲಿ ಅಗ್ರಗಣ್ಯ ಮಹಾನ್ ಸಾಹಿತಿಗಳಲ್ಲಿ ಬೇಂದ್ರೆಯವರು ಸಹ ಒಬ್ಬರಾಗಿದ್ದಾರೆ. ಬೇಂದ್ರೆಯವರಿಗೆ ಗೊತ್ತಿಲ್ಲದ ಸಾಹಿತ್ಯವಿಲ್ಲ ಎನ್ನುವ ಹಾಗೆ ತಮ್ಮ ಸಹಜ ಪ್ರತಿಭೆಯಿಂದ ಸು. ಆರು ದಶಕಗಳಿಗೂ ಮೀರಿದ ತಮ್ಮ ಸಾಹಿತ್ಯದ ಬದುಕಿನಲ್ಲಿ ಕಾವ್ಯ, ಹರಟೆ, ನಾಟಕ, ಕತೆ, ವಿಮರ್ಶೆ ಅನುವಾದ, ವಿಚಾರಸಾಹಿತ್ಯ, ಸಂಖ್ಯಾಶಾಸ್ತ್ರ – ಹೀಗೆ ಅನೇಕ ಸಾಹಿತ್ಯ ಪ್ರಕಾರಗಳಲ್ಲಿ ಗಣನೀಯ ಸತ್ವಶಾಲಿಯಾದ ಕೃತಿಗಳನ್ನು ರಚಿಸಿದರು. 'ವೈವಿದ್ಯತೆ' ಬೇಂದ್ರೆ ಬದುಕಿನ 'ಅನನ್ಯತೆ' ನಾವೀನ್ಯತೆಯನ್ನು ತಂದರು. ಕುಮಾರವ್ಯಾಸನ ಭಾಷೆ ಲಕ್ಷ್ಮೀಶನ ನಾದ–ವೈಭವ ಜೊತೆಗೆ ಶುದ್ಧ ದೇಶಿಯ ಧಾರವಾಡ ಕನ್ನಡತನದ ಜಾನಪದೀಯ ಸೊಗಡು– ಇವು ಮೂರನ್ನು ಪರಿಪಕ್ವವಾಗಿ ಹದನಾಗಿಸಿಕೊಂಡು ಕಾವ್ಯವನ್ನು ಆಕರ್ಷಗೊಳಿಸಿ ಜನಪ್ರಿಯಗೊಳಿಸಿದರು. ಬೇಂದ್ರೆ ಕಾವ್ಯಕ್ಕೆ ಅನುರಣನ ಶಕ್ತಿ ಇದೆ. ತೋಡಿದಷ್ಟೂ ಆಳ ಆಳದೊಳಗೆ ಕರೆದೊಯ್ಯುವ ಅವರ ಕಾವ್ಯ ಅಪೂರ್ವವಾದ ಹೊಸದೊಂದು ಅನುಭವ ಲೋಕವನ್ನು ನಿರ್ಮಾಣ ಮಾಡುತ್ತದೆ. ಅವರ ಬದುಕು–ಬರಹವನ್ನು ಈ ಕೆಳಗಿನಂತೆ ನೋಡಬಹುದಾಗಿದೆ.

ಬೇಂದ್ರೆಯವರ ಬದುಕು

"೧೮೯೬ ೩೧ ಜನವರಿ (ಮಾಘವದ್ಯ ಪ್ರತಿಪದಾ 'ಗುರುಪ್ರತಿ ಪದಾ' ಮನ್ಮಥನಾಮ ಸಂವತ್ಸರ) ಧಾರವಾಡದ ಪೋತ್ನಿಸ ಓಣಿಯಲ್ಲಿ ಜನ್ಮವಾಯಿತು. ತಂದೆ– ರಾಮಚಂದ್ರಬೇಂದ್ರೆ, ತಾಯಿ–ಪಾರ್ವತಿ (ಅಂಬಿಕಾ)ಬೇಂದ್ರೆ.

೧೮೯೭ ಮೈಲಿ ತೆಗೆಸಿತು

೧೮೯೮ ತಮ್ಮ ಚಿದಂಬರ ಹುಟ್ಟಿದ, ತೀರಿಕೊಂಡ, ಜ್ಯೋತಿದರ್ಶನವಾಯಿತು

೧೮೯೮ ನೀರಕುತ್ತ ದಾಟಿತು. ಜ್ಯೇಷ್ಠವೂ, ಶ್ರಾವಣವೂ ಇರಬೇಕು, ಹಾಲಗೇರಿಯಲ್ಲಿ ಬಿದ್ದರೂ ಪಾರಾದದ್ದು.

೧೯೦೨ ಕನ್ನಡ ಶಾಲೆ ಬಿನ್ ಇಯತ್ತೆ, ೧ನೆಯ ಇಯತ್ತೆ ೩ ತಿಂಗಳಲ್ಲಿ ಪಾಸು. ಶ್ರೀಧರ ಖಾನೊಳಕರ ಗೆಳೆತನ. ಶ್ರೀ ಗೊಂದವಲೆಕರರ ದರ್ಶನ: ಗೋಕರ್ಣಯಾತ್ರೆ, ನರಗುಂದಕ್ಕೆ ಹೋದದ್ದು, ತಮ್ಮ ರಘೂನ ಜನ್ಮ ಕಾಮನ ಕಟ್ಟೆಯ ಗೋಖಲೆಯವರ ಮನೆಯಲ್ಲಿ ಗೋಖಲೆ ಗೋವಿಂದ ರಾಯರು ತೀರಿದರು

[illegible]

[illegible]

[illegible]

[illegible]

[illegible]

[illegible]

೧೯೦೩ ೨ನೆ ಇಯತ್ತೆ ಮುಗಿಯಿತು. ಚೈತ್ರದಲ್ಲಿ ತಮ್ಮ ಕೃಷ್ಣನ ಜನ್ಮ.

೧೯೦೪ ೩ನೇ ಇಯತ್ತೆ ಮುಗಿಯಿತು

೧೯೦೫ ೪ನೇ ಇಯತ್ತೆ ಮುಗಿಯಿತು

೧೯೦೬ ೫ನೇ ಇಯತ್ತೆ ಮುಗಿಸಿ, ಇಂಗ್ಲಿಷ್ ಶಾಲೆಗೆ ಮೊದಲನೆಯ ಇಯತ್ತೆ ಆರು ತಿಂಗಳಲ್ಲಿ."[೧]

"೧೯೦೭ ಇಂಗ್ಲಿಷ್ ೨ನೇ ಇಯತ್ತೆ ನವೆಂಬರ್‌ನಲ್ಲಿ, ತಂದೆ ತೀರಿಕೊಂಡರು, ಬಿದ್ದು ಕೈಮುರಿಯಿತು. ದ್ಯಾಮವ್ವನ ಜಾತ್ರೆ ಆಯಿತು.

೧೯೦೮ ಇಂಗ್ಲಿಷ್ ೩ನೇ ಇಯತ್ತೆ ಆಯಿತು, ನವೆಂಬರ್‌ನಲ್ಲಿ ನರಗುಂದಕ್ಕೆ ಹೋದಾಗ ವಿಷಮಜ್ವರ

೧೯೦೯ ಇಂಗ್ಲಿಷ್ ೪ನೇ ಇಯತ್ತೆ ಆಯಿತು

೧೯೧೦ ಇಂಗ್ಲಿಷ್ ೫ನೇ ಇಯತ್ತೆ ಆಯಿತು. ತಮ್ಮ ರಾಘು ತೀರಿಕೊಂಡ ನರಸೋಬಾವಾಡಿಯಲ್ಲಿ ವಾಸುದೇವಾನಂದರ ಬೆಟ್ಟಿ..[೨]

"೧೯೧೧ ಇಂಗ್ಲಿಷ್ ೬ನೇ ಇಯತ್ತೆ ಮುಗಿಯಿತು. ಪುಣೆಗೆ ಹೋದದ್ದು. ಶ್ರೀಗೊಂದವಲೇಕರರ ದರ್ಶನ

೧೯೧೨ ಇಂಗ್ಲಿಷ್ ೭ನೇ ಇಯತ್ತೆ, ಕಡಿಮೆ ವಯಸ್ಸಿನ ಮೂಲಕ ಪರೀಕ್ಷೆಗೆ ಕೂಡಲಿಲ್ಲ.

೧೯೧೩ ನವೆಂಬರ್‌ನಲ್ಲಿ ಮೆಟ್ರಿಕ್ ಪಾಸಾಯಿತು. ಅಜ್ಜಿ (ತಾಯಿಯ ಗೋದಬಾಯಿ) ಮರಣ.

೧೯೧೪ ಪುಣೆಯ ಫರ್ಗ್ಯುಸನ್ ಕಾಲೇಜಿಗೆ ಮೊದಲ ವರ್ಷ ಪ್ರಾರಂಭ.

೧೯೧೫ ಮೊದಲ ವರ್ಷ ಪಾಸಾಯಿತು (ಏಪ್ರಿಲ್)

೧೯೧೬ ಇಂಟರ್, ಕವಿತಾ ಲೇಖನ

೧೯೧೭ ಜ್ಯೂನಿಯರ್ ಬಿ.ಎ. ಕವಿತಾ ಲೇಖನ ವಿಪುಲ

---

೧. ಬೇಂದ್ರೆ ಜೀವನ ಪರಿಚಯ – ವಾಮನಬೇಂದ್ರೆ, ಪು. ೨೫೩, ಪ್ರಕಟಣೆ ೧೯೯೮.
೨. ಬೇಂದ್ರೆ ಜೀವನ ಪರಿಚಯ – ವಾಮನಬೇಂದ್ರೆ, ಪು. ೨೫೪, ಪ್ರಕಟಣೆ ೧೯೯೮

೧೯೧೮ ಏಪ್ರಿಲ್‌ನಲ್ಲಿ ಬಿ.ಎ., ಮೇನಲ್ಲಿ ಕಾವ್ಯವಾಚನ, ಜೂನ್‌೧೧ಕ್ಕೆ ಪರೀಕ್ಷೆಯ ಪರಿಣಾಮ ಪಾಸಾಯಿತು. ಜೂನ್ ೪ಕ್ಕೆ ವಿಕ್ಟೋರಿಯಾ ಹೈಸ್ಕೂಲಿನಲ್ಲಿ ಶಿಕ್ಷಕರಾದದ್ದು.

೧೯೧೯ ಮದುವೆ ಆಯಿತು, ಲಕ್ಷ್ಮೀಬಾಯಿ (ರಂಗೂತಾಯಿ) 'ವಾಗ್ಭೂಷಣ' ಸಂಪಾದಕ ವರ್ಗದಲ್ಲಿ.

೧೯೨೦ ಶಾಂತಕವಿ, ಲೋಕಮಾನ್ಯ ತಿಲಕ್ ತೀರಿಕೊಂಡರು

೧೯೨೧ ರಾಷ್ಟ್ರೀಯ ಶಾಲೆಯಲ್ಲಿ ಶಿಕ್ಷಕರಾದದ್ದು."[೧]

"೧೩೨೨ ಮಗ–ಕ್ಷೇಮೇಂದ್ರನ ಜನ್ಮ ಡಿಸೆಂಬರ್‌ನಲ್ಲಿ ದಾವಣಗೇರಿಗೆ ಸಾಹಿತ್ಯ ಸಮ್ಮೇಳನಕ್ಕೆ ಹೋದದ್ದು.

೧೩೨೩ ಮೇ ನಲ್ಲಿ ಕ್ಷೇಮೇಂದ್ರ ತೀರಿಕೊಂಡ. ಜಯಕರ್ನಾಟಕ ಪತ್ರಿಕೆಯೊಂದಿಗೆ ಸಂಬಂಧ ವಿಜಾಪುರ ಸಾಹಿತ್ಯ ಸಮ್ಮೇಳನಕ್ಕೆ ಹೋದದ್ದು.

೧೩೨೪ ತಾಯಿ ತೀರಿದಳು(ಮಾಘವದ್ಯ–೫) ಎರಡನೆಯ ಮಗ ರಾಮ ಹುಟ್ಟಿದ್ದು. ೪–ಜೂನ್ ಔರಂಗಾಬಾದ್, ಸೊಂಡೂರಗಳಿಗೆ ಹೋದದ್ದು ಬೆಳಗಾವಿಯ ಕಾಂಗ್ರೆಸ್ಸು."[೨]

"೧೯೨೫ ಮತ್ತೆ ನ್ಯೂ ಇಂಗ್ಲಿಷ್ ಸ್ಕೂಲಿಗೆ (ಮೊದಲಿನ ವಿಕ್ಟೋರಿಯಾ ಹೈಸ್ಕೂಲ್ ಇದು) ಶಿಕ್ಷಕ ಆದದ್ದು.

೧೯೨೬ 'ಸ್ವಧರ್ಮ' ಪತ್ರಿಕೆ ಕೈಗೊಂಡದ್ದು. ನಾಡಹಬ್ಬ ಪ್ರಾರಂಭಿಸಿದ್ದು.

೧೯೨೭ ವಿಶೇಷ ಸಂಚಿಕೆಗಳ ಸಂಪಾದಕ, ಮೂರನೆ ಮಗ –ಭಾಸ್ಕರ ಹುಟ್ಟಿದ್ದು; ತೀರಿದ್ದು.

೧೯೨೮ ಗ್ವಾಲೇರಕ್ಕೆ ಹೋದದ್ದು. ಮಗ ಪಾಂಡುರಂಗನ ಜನ್ಮ. ಉಪನಿಷದ್ ರಹಸ್ಯ ಪ್ರಕಟಗೊಂಡದ್ದು. "ನನ್ನದು ಈ ಕನ್ನಡ ನಾಡು" ಪ್ರಕಟಗೊಂಡದ್ದು.

೧೯೨೯ ಮನೆಯಲ್ಲಿ ಕಳವು, ಕಕ್ಕಾ–ಕಕ್ಕಿ–ಸಾಧನ ಕೇರಿಯಲ್ಲಿ ಮನೆ ಕೊಡಿಸಿದ್ದು.

---

೧. ಬೇಂದ್ರೆ ಜೀವನ ಪರಿಚಯ – ವಾಮನಬೇಂದ್ರೆ, ಪು. ೨೫೪, ಪ್ರಕಟಣೆ ೧೯೯೮.
೨. ಬೇಂದ್ರೆ ಜೀವನ ಪರಿಚಯ – ವಾಮನಬೇಂದ್ರೆ, ಪು. ೨೫೫, ಪ್ರಕಟಣೆ ೧೯೯೮.

ಬೆಳಗಾವಿಯ ಸಾಹಿತ್ಯ ಸಮ್ಮೇಳನಕ್ಕೆ ಹೋದದ್ದು. "ಹಕ್ಕಿಹಾರುತಿದೆ" ಕವನ ವಾಚನ. ದಿ. ಆಲೂರ ಅವರು 'ಜಯಕರ್ನಾಟಕ' ಪತ್ರಿಕೆಯನ್ನು ಗೆಳೆಯರ ಗುಂಪಿಗೆ ವಹಿಸಿಕೊಟ್ಟಿದ್ದು. ಗ್ವಾಲೇರಕ್ಕೆ ಹೋದದ್ದು.

೧೯೩೦ "ಹಕ್ಕಿ ಹಾರುತಿದೆ" ಕವನ ಸಂಗ್ರಹ ಸಂಪಾದಿತ ಪ್ರಕಟಣೆ. "ಗರತಿಹಾಡು" ಹಸ್ತಪ್ರತಿ ಸಿದ್ಧಪಡಿಸಿದ್ದು.

೧೯೩೧ ಕಾರವಾರ ಸಾಹಿತ್ಯ ಸಮ್ಮೇಳನಕ್ಕೆ ಹೋದದ್ದು."[೧]

"೧೯೩೨ ಗರಿ – ಕವನ ಸಂಗ್ರಹದ ಪ್ರಕಟಣೆ. ಹಿಂಡಲಗಿ ಜೈಲುವಾಸ ಮುಗದದಲ್ಲಿ ನಜರ ಬಂಧಿ.

೧೯೩೩ ಎಂ.ಎ.ಗಾಗಿ ಪುಣೆಗೆ ಪ್ರಯಾಣ (ಏಪ್ರಿಲ್‌ನಲ್ಲಿ)

೧೯೩೪ ಮಗಳು ಲಲಿತಾ ಹುಟ್ಟಿದಳು; ತೀರಿದಳು. ಮೂರ್ತಿ, ಕಾಮ ಕಸ್ತೂರಿ ಪ್ರಕಟಗೊಂಡದ್ದು.

೧೯೩೫ ಎಂ.ಎ. ಪಾಸಾದದ್ದು ಜೂನ್‌ನಲ್ಲಿ ಮಗ – ವಾಮನನ (ಬಾಳ) ಜನ್ಮ, ಮುಂಬೈಯ ಸಾಹಿತ್ಯ ಸಮ್ಮೇಳನದಲ್ಲಿ, ಕವಿ ಸಮ್ಮೇಳನಕ್ಕೆ ಅಧ್ಯಕ್ಷ.

೧೯೩೬ ವಿಜಯನಗರ ಷಟ್‌ಸಾರಿವತ್ಸರಿಕ ಉತ್ಸವದ ಕೆಲಸಕ್ಕಾಗಿ ಹೈದರಾಬಾದ ಪ್ರವಾಸ, ಮೇ ನಲ್ಲಿ ವಿಜಯನಗರ ಉತ್ಸವ.

೧೯೩೭ ಮಗಳು ಪ್ರೇಮಾ ಹುಟ್ಟಿದ್ದು, ಸಖೀಗೀತ–ಪ್ರಕಟಣೆ, ಸಾಹಿತ್ಯ ಮತ್ತು ವಿಮರ್ಶೆ–ಪ್ರಕಟಣೆಗೊಂಡದ್ದು."[೨]

"೧೯೩೮ ನಾದಲೀಲೆ, ಉಯ್ಯಾಲೆ, ಪ್ರಕಟಗೊಂಡದ್ದು, "ಜೀವನ" ಪತ್ರಿಕೆಯ ಸಂಪಾದಕ ಆದದ್ದು.

೧೯೩೯ ಮಗಳು–ಮಂಗಲ ಜನ್ಮ. ನಿರಾಭರಣ ಸುಂದರಿ, ಸಾಹಿತ್ಯ ಮತ್ತು ಸಂಶೋಧನೆ–ಪ್ರಕಟಗೊಂಡದ್ದು.

೧೯೪೦ ಧಾರವಾಡದಲ್ಲಿ ಸಾಹಿತ್ಯ ಸಮ್ಮೇಳನ.

೧೯೪೧ ಗದಗ–ವಿದ್ಯಾದಾನ ಸಮಿತಿ ಹೈಸ್ಕೂಲಿಗೆ –ಹೆಡ್‌ಮಾಸ್ತರ ಆಗಿ ಹೋದದ್ದು.

---

೧. ಬೇಂದ್ರೆ ಜೀವನ ಪರಿಚಯ – ವಾಮನಬೇಂದ್ರೆ, ಪು. ೨೫೫, ಪ್ರಕಟಣೆ ೧೯೯೮.
೨. ಬೇಂದ್ರೆ ಜೀವನ ಪರಿಚಯ – ವಾಮನಬೇಂದ್ರೆ, ಪು. ೨೫೬, ಪ್ರಕಟಣೆ ೧೯೯೮.

೧೯೪೨ ಹುಬ್ಬಳ್ಳಿಯ ನ್ಯೂ ಇಂಗ್ಲಿಷ್ ಸ್ಕೂಲಿಗೆ ಶಿಕ್ಷಕ.

೧೯೪೩ ಫೆಬ್ರವರಿಯಲ್ಲಿ ಪಾಂಡಿಚೆರಿ–ಶ್ರೀ ಮಾತಾರವಿಂದರ ದರ್ಶನ.
ಪೂನಾ ಬಿ.ಎಂ.ಸಿ.ಸಿ. ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕ ಮೇಘದೂತ ಪ್ರಕಟಗೊಂಡದ್ದು.

೧೯೪೪ ಸೊಲ್ಲಾಪುರದ ಡಿ.ವಿ.ವ್ಹಿ. ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕ ಆದದ್ದು.
ಮಗ–ಆನಂದ ಹುಟ್ಟಿದ್ದು ಧಾರಾವಾಡ."[೧]

"೧೯೪೪ ರಾಮ ಹಾಗೂ ಆನಂದ ತೀರಿಕೊಂಡದ್ದು ಸೊಲ್ಲಾಪುರದಲ್ಲಿ.

೧೯೪೫ ಸೊಲ್ಲಾಪುರ ನೀಲಾನಗರದಲ್ಲಿ ವಾಸ ಪ್ರಾರಂಭ.

೧೯೪೬ ಗೆಳೆಯರಿಂದ ಸನ್ಮಾನ ೫೦ನೆಯ ಹುಟ್ಟುಹಬ್ಬ.
ಹಾಡು–ಪಾಡು ಪ್ರಕಟಗೊಂಡದ್ದು.

೧೯೪೭ ಭಾರತಕ್ಕೆ ಸ್ವಾತಂತ್ರ್ಯ ಲಭಿಸಿದ್ದು.

೧೯೪೮ ಗಾಂಧೀ ಮರಣ ಜೆ.ಕೃಷ್ಣಮೂರ್ತಿ ಮತ್ತು ಶ್ರೀ ಗುಳವಣಿ ಮಹಾರಾಜರ ದರ್ಶನ.

೧೯೫೦ ಶ್ರೀ ಅರವಿಂದರ ನಿರ್ವಾಣ ಡಿಸೆಂಬರ್–೫ ಹೆಂಡತಿಗೆ ವಿಷಮಜ್ವರ.

೧೯೫೧ ಗಂಗಾವತರಣ ಪ್ರಕಟಗೊಂಡದ್ದು, ಸಂಖ್ಯಾಯೋಗ ವಿಚಾರ ಮರಾಠಿಯಲ್ಲಿ ವಿಪುಲವಾಗಿ ಬರವಣಿಗೆ.

೧೯೫೨ ಪ್ರಭಾಕರ ಮಹಾರಾಜರ ದರ್ಶನ.

೧೯೫೩ ಗೆಳೆಯ ಚೆನ್ನಮಲ್ಲಪ್ಪ – ಮದುರಚೆನ್ನ – ೧೫ ಆಗಸ್ಟ್‌ರಂದು ಮರಣ

೧೯೫೪ ಶ್ರೀರಾಮದಾಸರ ದರ್ಶನ"[೨]

"೧೯೫೫ ದಿಲ್ಲಿಗೆ ಕವಿಸಮ್ಮೇಳನಕ್ಕಾಗಿ ಹೋದದ್ದು.

೧೯೫೬ ೬೦ನೇ ಹುಟ್ಟುಹಬ್ಬ, ಧಾರವಾಡ ಆಕಾಶವಾಣಿ ಸಾಹಿತ್ಯ ಸಲಹಾಕಾರ,
ಮಗ–ಪಾಂಡುರಂಗನ ವಿವಾಹ. ಡಾ. ಕುವೆಂಪು ಅವರಿಗೆ ಸಾಹಿತ್ಯ

---

೧. ಬೇಂದ್ರೆ ಜೀವನ ಪರಿಚಯ – ವಾಮನಬೇಂದ್ರೆ, ಪು. ೨೫೬, ಪ್ರಕಟಣೆ ೧೯೯೮.
೨. ಬೇಂದ್ರೆ ಜೀವನ ಪರಿಚಯ – ವಾಮನಬೇಂದ್ರೆ, ಪು. ೨೫೭, ಪ್ರಕಟಣೆ ೧೯೯೮.

ಅಕಾಡೆಮಿ ಬಹುಮಾನ.

೧೯೫೭ "ಅರಳು-ಮರಳು" ಪ್ರಕಟಗೊಂಡದ್ದು.

ಡಾ. ರಂ.ಶ್ರೀ.ಮುಗಳಿಯವರಿಗೆ ಸಾಹಿತ್ಯ ಅಕಾಡೆಮಿ ಬಹುಮಾನ.

೧೯೫೮ ಸಾಹಿತ್ಯ ಅಕಾಡೆಮಿ ಬಹುಮಾನ ಯಾರಿಗೂ ಸಿಗಲಿಲ್ಲ.

೧೯೫೮-೫೯ 'ಅರಳು - ಮರಳು' ಸಂಗ್ರಹಕ್ಕೆ ಸಾಹಿತ್ಯ ಅಕಾಡೆಮಿ ಬಹುಮಾನ ಧರ್ಮಸ್ಥಳಕ್ಕೆ ಹೋದದ್ದು, ನಮನ, ಸಂಚಯ ಪ್ರಕಟಗೊಂಡದ್ದು.

೧೯೬೦ ಡಾ. ಕಾರಂತರಿಗೆ ಬಹುಮಾನ"[೧].

೧೯೬೧ ಡಾ. ಗೋಕಾಕರಿಗೆ ಬಹುಮಾನ.

(ಇಲ್ಲಿಯವರೆಗಿನ ಜೀವನ ಘಟನಾವಳಿಗಳನ್ನು ದ.ರಾ.ಬೇಂದ್ರೆಯವರು ತಮ್ಮ ಆತ್ಮಚರಿತ್ರೆಗೆ ಅನುಬಂಧವಾಗಿ ಪ್ರಕಟಿಸಿದ್ದು ನಡೆದುಬಂದ ದಾರಿ ಸಂ. ೩ರಲ್ಲಿ. ಇದಕ್ಕೆ ಐತಿಹಾಸಿಕ ಮಹತ್ವವಿದೆ. ತಮ್ಮ ಸ್ನೇಹಿತರಿಗೆ ಸಿಕ್ಕ ಬಹುಮಾನ ಅಥವಾ ಅವರ ಜೀವನ ಘಟನೆಗಳು ತಮ್ಮ ಜೀವನದ ಪ್ರಮುಖಘಟನೆ ಎಂಬುದಾಗಿ ಬೇಂದ್ರೆ ಭಾವಿಸಿದ್ದು ಅನುಕರಣೀಯ ನಿಲುವು ಆಗಿದೆ. ಸಾಹಿತಿ-ಸಾಹಿತಿ-ಸ್ನೇಹ ಸಂಬಂಧವೇ ಸಂಸ್ಕೃತಿ.)

೧೯೬೨ ತುಮಕೂರಿನ ಪೌರಸಭೆಯ ಸನ್ಮಾನ.

೧೯೬೪ ಮೈಸೂರು ದಸರಾ ಮಹೋತ್ಸವ ಸನ್ಮಾನ.

೧೯೬೫ ಮರಾಠಿ ಸಂವಾದ ಕೃತಿಗೆ ಕೇಳುಕರ ಪ್ರಶಸ್ತಿ.

೧೯೬೬ ಮೈಸೂರು ವಿಶ್ವವಿದ್ಯಾನಿಲಯದಿಂದ ಗೌರವ ಡಾಕ್ಟರೇಟ್. ಹೈದ್ರಾಬಾದಿನ ಹಿಂದೀ ಪ್ರಚಾರ ಸಭಾದ 'ಸಾಹಿತ್ಯ ಆಚಾರ್ಯ' ಪ್ರಶಸ್ತಿ, ಶಿರಹಟ್ಟಿಯಲ್ಲಿ ೭೦ನೇ ಹುಟ್ಟುಹಬ್ಬ, ಮೈಸೂರು ಸರ್ಕಾರದ (ಕರ್ನಾಟಕ) ಆ ಜನ್ಮ ವಿಶ್ರಾಂತಿ ವೇತನ. ಪತ್ನಿ-ಶ್ರೀಮತಿ ಲಕ್ಷ್ಮೀಬಾಯಿಯವರ ನಿಧನ ೧೭-೮-೧೯೬೬.

೧೯೬೮ ದಿಲ್ಲಿಯಿಂದ 'ಪದ್ಮಶ್ರೀ' ಪ್ರಶಸ್ತಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್."[೧]

---

೧. ಬೇಂದ್ರೆ ಜೀವನ ಪರಿಚಯ - ವಾಮನಬೇಂದ್ರೆ, ಪು. ೨೫೭, ಪ್ರಕಟಣೆ ೧೯೯೮.

"೧೯೬೯ ಕೇಂದ್ರ ಸಾಹಿತ್ಯ ಅಕಾಡೆಮಿಯ 'ಫೆಲೊಶಿಪ್' ಗೌರವ - ದಿಲ್ಲಿ.

೧೯೭೨ ಪರ್ಯಾಯದಲ್ಲಿ 'ಉಡುಪಿ ಮಠದ' ವತಿಯಿಂದ ಕರ್ನಾಟಕ ಕವಿ ತಿಲಕ' ಬಿರುದು. ೭೫ನೇ ಹುಟ್ಟುಹಬ್ಬದ ಸವಿನೆನಪಿಗಾಗಿ ವರಕವಿ ಬೇಂದ್ರೆಯವರನ್ನು ಕುರಿತು ರಾಜ್ಯ ಸರ್ಕಾರದ ಸಾಕ್ಷಿ ಚಿತ್ರ ನಿರ್ಮಾಣ.

೧೯೭೩- ೭೪ 'ನಾಕುತಂತಿ' ಕವನಸಂಗ್ರಹಕ್ಕೆ ಜ್ಞಾನಪೀಠ ಪ್ರಶಸ್ತಿ.

೧೯೭೬ ವಾರಣಾಶಿ ಕಾಶೀ ವಿದ್ಯಾಪೀಠದಿಂದ ಗೌರವ ಡಾಕ್ಟರೇಟ್.

೧೯೮೧ ಅಕ್ಟೋಬರ್ ೨೬ರಂದು ಮುಂಬೈಯ ಹರಿಕಿಸನ್ ದಾಸ ಆಸ್ಪತ್ರೆಯಲ್ಲಿ ಮರಣಹೊಂದಿದರು."[೨]

ವರಕವಿ ಡಾ. ದ.ರಾ.ಬೇಂದ್ರೆಯವರು. ೧೮೯೬ ಜನವರಿ ೩೧ರಲ್ಲಿ ಹುಟ್ಟಿದಂದಿನಿಂದ ಹಿಡಿದು ಅವರ ಜೀವನದಲ್ಲಿ ಯಾವ ಯಾವ ವರ್ಷದಲ್ಲಿ ಏನೇನು ಘಟನೆಗಳು ನಡೆದವು. ಅವು ಯಾವುವು ಹೇಗೆ ನಡೆದವು ಎಂಬುದನ್ನು ಅವರ ಬದುಕಿನಲ್ಲಿ ನಾವು ಕಾಣಬಹುದಾಗಿದೆ. ಇವರು ೧೯೮೧ ಅಕ್ಟೋಬರ್ ೨೬ರಂದು ನಿಧನಹೊಂದುವರೆಗೆ ಅವರ ಬದುಕಿನ ಬಗ್ಗೆ ತಿಳಿದುಕೊಂಡೆವು.

ಜ್ಞಾನಪೀಠ ಪ್ರಶಸ್ತಿ ವಿಜೇತರಾದ ವರಕವಿ ಡಾ. ದತ್ತಾತ್ರೇಯ ರಾಮಚಂದ್ರ ಬೇಂದ್ರೆ (ಅಂಬಿಕಾತನಯದತ್ತ)ಯವರು ಯುಗಪುರುಷರು. ತಮ್ಮ ವಿನೂತನ ವಿಶೇಷ ವಿಪುಲ ಸಾಹಿತ್ಯ ರಚನೆಯಿಂದ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ತಮ್ಮದೇ ಮಾರ್ಗವನ್ನು ಸೃಷ್ಟಿಸಿದ ಪಥನಿರ್ಮಾಪಕರು. ವೇದಗಳಿಂದ ಆಧುನಿಕ ವಿಜ್ಞಾನದವರೆಗೆ ಅಧ್ಯಯನ - ಸಂಶೋಧನೆ - ಚಿಂತನೆ ನಡೆಸಿ, ಜಾಗತಿಕ ಜ್ಞಾನ ಭಂಡಾರಕ್ಕೆ "ಸಾಂಖ್ಯದರ್ಶನ'ದ ವಿನೂತನ ಕೊಡುಗೆಯನ್ನು ಕೊಟ್ಟ ವಿಜ್ಞಾನಿಗಳು. ತಮ್ಮ ಸಾಹಿತ್ಯದ ಮೂಲಕ ತಮ್ಮದೇ ಸಿದ್ಧಾಂತವನ್ನು ರೂಪಿಸಿ ಪ್ರತಿಪಾದಿಸಿ ನವಮಾನವ ಅವಿರ್ಭಾವದ ನವಸಮಾಜ ಸಂಸ್ಥಾಪನೆಯ ಕನಸನ್ನು ಕಂಡವರು ದಾರ್ಶನಿಕ ಬೇಂದ್ರೆ. ಇಂಥ ಮಹಾಕವಿ, ಮಹಾಮಾನವನ ಸಾಹಿತ್ಯ ವಿರಾಟ್ ಸ್ವರೂಪದ ಸಂಪೂರ್ಣ ದರ್ಶನ ಪಡೆಯಬೇಕಾದರೆ ಅವರ ಜೀವನ ಸಾಧನೆಗಳ ವಿವಿಧ ಮುಖಗಳ ಸಮ್ಯಕ್

೧. ಬೇಂದ್ರೆ ಜೀವನ ಪರಿಚಯ - ವಾಮನಬೇಂದ್ರೆ, ಪು. ೨೫೮, ಪ್ರಕಟಣೆ ೧೯೯೮.
೨. ಬೇಂದ್ರೆ ಜೀವನ ಪರಿಚಯ - ವಾಮನಬೇಂದ್ರೆ, ಪು. ೨೬೨, ಪ್ರಕಟಣೆ ೧೯೯೮.

ದರ್ಶನವನ್ನು ಅವರು ಬರೆದ ಸಾಹಿತ್ಯದ ವಿವಿಧ ಮಜಲುಗಳ ಪರಿಚಯವನ್ನು ತಿಳಿಯುವುದು ಅವಶ್ಯಕವಾಗುತ್ತದೆ. ಅವುಗಳನ್ನು ಈ ಕೆಳಗಿನಂತೆ ನೋಡಬಹುದು.

ದ.ರಾ.ಬೇಂದ್ರೆಯವರ ಬರಹ (೧೯೧೮ರಿಂದ ೧೯೮೧)

ಕಾವ್ಯ : ೨೬

"೧೯೧೮ – ಪ್ರಥಮ ಪ್ರಕಟಿತ ಕವನ – ತುತ್ತೂರಿ – ಎಚ್ಚರ

೧೯೨೨ – ಕೃಷ್ಣಾಕುಮಾರಿ (ಕಥನಕವನದ ಪ್ರಕಟಣೆ, ಗೆಳೆಯರ ಗುಂಪಿನ ಕನಸು)

೧೯೩೨ – ಗರಿ

೧೯೩೪ – ಮೂರ್ತಿ ಮತ್ತು ಕಾಮ ಕಸ್ತೂರಿ

೧೯೩೭ – ಸಖೀಗೀತ

೧೯೩೮ – ಉಯ್ಯಾಲೆ

೧೯೩೮ – ನಾದಲೀಲೆ

೧೯೪೩ – ಮೇಘದೂತ (ಕಾಳಿದಾಸನ ಕಾವ್ಯದ ಭಾವಾನುವಾದ)

೧೯೪೬ – ಹಾಡು–ಪಾಡು

೧೯೫೧ – ಗಂಗಾವತರಣ

೧೯೫೬ – ಸೂರ್ಯಪಾನ

೧೯೫೭ – ಚೈತ್ಯಾಲಯ

೧೯೫೭ – ಜೀವಲಹರಿ

೧೯೫೭ – ಅರಳು–ಮರಳು (ಇದಕ್ಕೆ ೧೯೫೭ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ)

೧೯೫೮ – ನಮನ"[೧]

---

೧. ಬೇಂದ್ರೆ ಜೀವನ ಪರಿಚಯ – ವಾಮನಬೇಂದ್ರೆ, ಪು. ೨೪೫, ಪ್ರಕಟಣೆ ೧೯೯೮.

“೧೯೫೯ – ಸಂಚಯ

೧೯೬೦ – ಉತ್ತರಾಯಣ

೧೯೬೧ – ಮುಗಿಲಮಲ್ಲಿಗೆ

೧೯೬೨ – ಯಕ್ಷಯಕ್ಷಿ”[೧]

೧೯೬೪ – “ನಾಕುತಂತಿ (೧೯೭೪ರಲ್ಲಿ ಜ್ಞಾನಪೀಠ ಪ್ರಶಸ್ತಿ)

೧೯೬೬ – ಮರ್ಯಾದೆ

೧೯೬೮ – ಶ್ರೀಮಾತಾ

೧೯೭೦ – ಇದು ನಭೋವಾಣಿ, ೧೯೭೨, ವಿನಯ

೧೯೭೩ – ಮತ್ತೆ ಶ್ರಾವಣ ಬಂತು, ೧೯೭೭ ಒಲವೆ ನಮ್ಮ ಬದುಕು

೧೯೭೮ – ಚತುರೋಕ್ತಿ ಮತ್ತು ಇತರ ಕವನಗಳು.

ಮರಣೋತ್ತರ ಕವನ ಸಂಗ್ರಹಗಳು – ೦೫

೧೯೮೨ – ಪರಾಕಿ

೧೯೮೨ – ಕಾವ್ಯವೈಖರಿ

೧೯೮೩ – ಬಾಲಬೋಧೆ

೧೯೮೩ – ತಾಲೆಕ್ಕಣಿಕೆ ತಾದೌತಿ

೧೯೮೭ – ಪ್ರತಿಬಿಂಬಗಳು

ಆಯ್ದ ಕವನಗಳ ಸಂಗ್ರಹ – ೦೮

೧೯೬೮ – ಬಾಹತ್ತರ

೧೯೭೨ – ವಿನಯ

೧೯೭೩ – ಒಲವೇ ನಮ್ಮ ಬದುಕು

---

೧. ಬೇಂದ್ರೆ ಜೀವನ ಪರಿಚಯ – ವಾಮನಬೇಂದ್ರೆ, ಪು. ೨೬೦, ಪ್ರಕಟಣೆ ೧೯೯೮.

ಮರಣೋತ್ತರ

೧೯೮೩ – ಚೈತನ್ಯದ ಪೂಜೆ ಕುಣಿಯೋಣು ಬಾ"[1]

೧೯೮೭ – "ಶ್ರಾವಣ ಪ್ರತಿಭೆ

– ಸಮರಸವೇ ಜೀವನ

– ನಾಳಿನ ಕನಸು

ನಾಟಕ – ೧೪

೧೯೩೦ – ತಿರುಕರ ಪಿಡುಗು (ಮೂರು ಹುಚ್ಚಾಟಗಳು)"[2]

- "ಹುಚ್ಚಾಟಗಳು (ಐದು ಹುಚ್ಚಾಟಗಳು)

೧೯೫೦ – ಹೊಸ ಸಂಸಾರ ಮತ್ತು ಇತರ ಏಕಾಂಕಗಳು

೧೯೮೨ – ನಾಟಕ ಸಂಪುಟ (೧೪ ನಾಟಕಗಳು)

ಮಾಲ್ಡ್ ವಿಮರ್ಶೆ ಹಾಗೂ ಇತರ ಗದ್ಯ ಕೃತಿ – ೦೯

೧೯೩೭ – ಸಾಹಿತ್ಯ ಮತ್ತು ವಿಮರ್ಶೆ

೧೯೪೦ – ಸಾಹಿತ್ಯ ಸಂಶೋಧನ

೧೯೪೫ – ವಿಚಾರ ಮಂಜರಿ

೧೯೫೯ – ಮಹಾರಾಷ್ಟ್ರ ಸಾಹಿತ್ಯ

೧೯೬೮ – ಕನ್ನಡ ಸಾಹಿತ್ಯದಲ್ಲಿ ನಾ

೧೯೭೪ – ಸಾಹಿತ್ಯದ ವಿರಾಟ್ ಸ್ವರೂಪ

೧೯೭೬ – ಕುಮಾರವ್ಯಾಸ ಪುಸ್ತಿಕೆ

- ಶ್ರೀ ಅರವಿಂದರ ಯೋಗ, ಆಶ್ರಯ ಮತ್ತು ತತ್ತ್ವೋಪದೇಶ

- ಲಕ್ಷ್ಮೀಶನ ಜೈಮಿನಿ ಭಾರತಕ್ಕೆ ಮುನ್ನುಡಿ

---

೧. ಬೇಂದ್ರೆ ಜೀವನ ಪರಿಚಯ – ವಾಮನಬೇಂದ್ರೆ, ಪು. ೨೬೦, ಪ್ರಕಟಣೆ ೧೯೯೮.
೨. ಬೇಂದ್ರೆ ಜೀವನ ಪರಿಚಯ – ವಾಮನಬೇಂದ್ರೆ, ಪು. ೨೬೧, ಪ್ರಕಟಣೆ ೧೯೯೮.

ಉಪನ್ಯಾಸಗಳ ಸಂಗ್ರಹ –೦೨

೧೯೭೨ – ಮಾತೆಲ್ಲ ಜ್ಯೋತಿ

೧೯೭೯ – ಮತ ಧರ್ಮ ಮತ್ತು ಆಧುನಿಕ ಮಾನವ”[1]

ಸಣ್ಣ ಕತೆ ಹಾಗೂ ಸಹರಟೆ – ೦೧

“ನಿರಾಭರಣ ಸುಂದರಿ

ಅನುವಾದಿತ ಸಣ್ಣ ಕತೆಗಲ ಸಂಗ್ರಹ

ಚೀನದ ಬಾಳು ಬದುಕು

ಸಂಪಾದನೆ –೦೮

೧೯೨೮ – ನನ್ನದು ಈ ಕನ್ನಡ ನಾಡು

೧೯೩೦ – ಹಕ್ಕಿ ಹಾರುತಿದೆ”[2]

“೧೯೪೮ – ಚಂದ್ರಹಾಸ

೧೯೫೭ – ಹೊಸಗನ್ನಡ ಕಾವ್ಯ ಶ್ರೀ

೧೯೨೬ – ಸ್ವಧರ್ಮ

೧೯೨೯ – ಜಯಕರ್ನಾಟಕ

೧೯೩೮ – ಜೀವನ

೧೯೬೫ – ಕನಕದಾಸ ಚತುಶ್ಚತಮಾನೋತ್ಸವ ಸಂಸ್ಮರಣ ಸಂಪುಟ

ಮರಾಠಿಯಲ್ಲಿ ಗ್ರಂಥ ರಚನೆ – ೦೫

೧೯೫೩ – ಸಂತ ಮಹಂತಾಂಚಾ ಪೂರ್ಣ ಶಂಭೂ ವಿಠ್ಠಲ

೧೯೬೫ – ಸಂವಾದ

– ವಿಠ್ಠಲ ಸಂಪ್ರದಾಯ

೧೯೭೨ – ಶಾಂತಲಾ(ಕಾದಂಬರಿ–ಕನ್ನಡದಿಂದ –ಮರಾಠಿ)

೧೯೯೧ – ಉಮಾಳಾ(೧೧೩ ಕವನಗಳ ಸಂಗ್ರಹ)

---

೧. ಬೇಂದ್ರೆ ಜೀವನ ಪರಿಚಯ – ವಾಮನಬೇಂದ್ರೆ, ಪು. ೨೬೧, ಪ್ರಕಟಣೆ ೧೯೯೮.
೨. ಬೇಂದ್ರೆ ಜೀವನ ಪರಿಚಯ – ವಾಮನಬೇಂದ್ರೆ, ಪು. ೨೬೨, ಪ್ರಕಟಣೆ ೧೯೯೮.

ಇಂಗ್ಲಿಷ್‌ನಲ್ಲಿ – ೦೧

೧೯೭೭ – A Theory of Immortality"[೧]

"ಅನುವಾದ ಕನ್ನಡಕ್ಕೆ – ೦೬

೧೯೨೮ – ಉಪನಿಷದ್ ರಹಸ್ಯ ಅಥವಾ ಭಾರತೀಯ

ಭಾರತೀಯ ಅಧ್ಯಾತ್ಮಶಾಸ್ತ್ರ ಪೀಠಿಕೆಯು

೧೯೩೬ – ಭಾರತೀಯ ನವಜನ್ಮ

೧೯೬೮ – ಕಬೀರ ವಚನಾವಲಿ

೧೯೭೨ – ಭಗ್ನಮೂರ್ತಿ

೧೯೭೨ – ಗುರುಗೋವಿಂದಸಿಂಗ

– ನೂರೊಂದು ಕವನಗಳು"[೨]

ಹೀಗೆ ಬೇಂದ್ರೆಯ ಕನ್ನಡ ಸಾಹಿತ್ಯದಲ್ಲಿ ಅಪಾರವಾದ ಕೃಷಿಯನ್ನು ಮಾಡಿದ್ದಾರೆಂಬುದಕ್ಕೆ ಈ ಮೇಲಿನ ಬರಹಗಳಿಂದ ಗಮನಿಸಬಹುದು.

೧. ಬೇಂದ್ರೆ ಜೀವನ ಪರಿಚಯ – ವಾಮನಬೇಂದ್ರೆ, ಪು. ೨೬೨, ಪ್ರಕಟಣೆ ೧೯೯೮.
೨. ಬೇಂದ್ರೆ ಜೀವನ ಪರಿಚಯ – ವಾಮನಬೇಂದ್ರೆ, ಪು. ೨೬೩, ಪ್ರಕಟಣೆ ೧೯೯೮.

ಅಧ್ಯಾಯ – ೩

ಭಾರತೀಯ ಸ್ವಾತಂತ್ರ್ಯ ಹೋರಾಟದ ಒಂದು ಸಂಕ್ಷಿಪ್ತ ಚಿತ್ರಣ

ಬ್ರಿಟಿಷರನ್ನು ಭಾರತ ದೇಶದಿಂದ ಹೊರದೂಡಲು ಹಾಗೂ ಭಾರತದೇಶಕ್ಕೆ ಸ್ವಾತಂತ್ರ್ಯವನ್ನು ಪಡೆಯುವುದಕ್ಕಾಗಿ ರಾಷ್ಟ್ರಮಟ್ಟದಲ್ಲಿ, ರಾಜ್ಯಮಟ್ಟದಲ್ಲಿ, ಗ್ರಾಮೀಣಮಟ್ಟದಿಂದ ಹಿಡಿದು ಅನೇಕ ರೀತಿಯ ಹೋರಾಟಗಳು ನಡೆದಿರುವುದನ್ನು ನಮ್ಮ ಇತಿಹಾಸದ ಪುಟಗಳನ್ನು ತೆರೆದು ನೋಡಿದಾಗ ನಾವು ಕಾಣುತ್ತೇವೆ. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಗಳಾದ ಮಹನೀಯರುಗಳಿಗೆ ಲೆಕ್ಕವಿಲ್ಲ. ತಮ್ಮ ಜೀವದ ಹಂಗು ತೊರೆದು, ಮನೆಮಠ ಬಿಟ್ಟು ಹೋರಾಡಿದವರು ಅಸಂಖ್ಯಾತ. ೧೮೫೭ರ ಪ್ರಥಮ ಸ್ವಾತಂತ್ರ್ಯ ಹೋರಾಟದ ಹಿನ್ನೆಲೆಯಲ್ಲೂ ಹೋರಾಟ ನಡೆದಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಹಿಂದುಳಿದ ವರ್ಗಗಳಲ್ಲಿ ಇದ್ದುಕೊಂಡು ತಮ್ಮದೇ ಆದ ಸೀಮಿತ ವಲಯದಲ್ಲಿ ಹೋರಾಡಿದವರನ್ನು ಮರೆಯುವಂತಿಲ್ಲ. ಪ್ರತಿಹಳ್ಳಿಯೂ ಒಬ್ಬ ಗಾಂಧಿಯನ್ನೋ, ವಲ್ಲಭಬಾಯಿ ಪಟೇಲರನ್ನೋ, ಗಂಗಾಧರ ತಿಲಕರನ್ನೋ, ಅಂಬೇಡ್ಕರ್‌ರವರನ್ನೋ ಇತ್ಯಾದಿಯಾಗಿ ಕಾಣಬಹುದಿತ್ತು.

ಸಾವಿರಾರು ಜನರ ತ್ಯಾಗದ ಫಲ ನಮ್ಮ ಸ್ವಾತಂತ್ರ್ಯ. ಅದನ್ನು ಜೋಪಾನವಾಗಿ ಕಾಪಾಡಿಕೊಳ್ಳುವುದು ನಮ್ಮೆಲ್ಲರ ಕರ್ತವ್ಯ. ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಮಹಾಚೇತನರನ್ನು ನಾವು ಈ ಕೆಳಗಿನಂತೆ ತಿಳಿಯೋಣ. ಮಹಾತ್ಮಗಾಂಧಿ, ಜವಾಹರಲಾಲ್‌ನೆಹರು, ನೇತಾಜಿ ಸುಭಾಷ್ ಚಂದ್ರಬೋಸ್, ಭಗತ್‌ಸಿಂಗ್, ಲೋಕಮಾನ್ಯ ಗಂಗಾಧರ ತಿಲಕ್, ಆಚಾರ್ಯ ವಿನೋಬಭಾವೆ, ಮೌಲಾನಅಬ್ದುಲ್ ಕಲಾಂ ಆಜಾದ್, ಸರದಾರ್ ವಲ್ಲಭಬಾಯಿ ಪಟೇಲರು, ಡಾ.ಬಿ.ಆರ್. ಅಂಬೇಡ್ಕರ್, ಜಯಪ್ರಕಾಶ್‌ನಾರಾಯಣ, ಲಾಲ್ ಬಹದ್ದೂರ್‌ಶಾಸ್ತ್ರಿ, ಲಾಲಾಲಜಪತರಾಯ್, ಮಹರ್ಷಿ ಅರವಿಂದರು, ಚಂದ್ರಶೇಖರ್ ಅಜಾದ್, ಗೋಪಾಲ್ ಕೃಷ್ಣಗೋಕಲೆ, ಇನ್ನೂ ಮುಂತಾದವರು ರಾಜ್ಯದಲ್ಲಿ ಕಿತ್ತೂರುರಾಣಿ ಚೆನ್ನಮ್ಮ, ಝಾನ್ಸಿರಾಣಿ ಲಕ್ಷ್ಮಿಬಾಯಿ, ಟಿಪ್ಪುಸುಲ್ತಾನ್, ಇನ್ನು ಮುಂತಾದವರು. ಇವರುಗಳೆಲ್ಲರೂ ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ನಡೆಸಿದ ಹೋರಾಟಗಳಲ್ಲಿ ಇವರುಗಳ ಪಾತ್ರಗಳನ್ನು ಹಾಗೂ ೧೮೫೭ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ, ೧೯೪೨ರಲ್ಲೀ ಕ್ವಿಟ್ ಇಂಡಿಯಾ ಚಳುವಳಿ ಇನ್ನು

ಮುಂತಾದ ಚಳುವಳಿಗಳಲ್ಲಿ ಭಾಗವಹಿಸಿ ಸ್ವಾತಂತ್ರ್ಯಕ್ಕಾಗಿ ಹೋರಾಡಿದವರನ್ನು ಕಾಣಬಹುದಾಗಿದೆ.

ಗಾಂಧೀಜಿಯವರ ಹೋರಾಟ ರಾಜಕೀಯ ಛಲದಿಂದ ಕೂಡಿರಲಿಲ್ಲ. ಶೋಷಿತರಿಗೆ ನ್ಯಾಯ ಒದಗಿಸುವ ಮಾನವೀಯ ಅನುಕಂಪ ಅವರ ಹೋರಾಟದ ಉದ್ದೇಶವಾಗಿತ್ತು. ದೀನದಲಿತರ ನೋವುಗಳಿಗೆ ಸದಾ ಸ್ಪಂದಿಸುವ ಹೃದಯವಂತಿಕೆಯಿಂದ ಮೈಗೂಡಿದ ಹೋರಾಟ ಅವರದಾಗಿತ್ತು. ಬಿಹಾರದ ಒಂದು ಭಾಗವಾದ ಚಂಪಾರಣ್ಯದಲ್ಲಿ ನೀಲಿ ಉದ್ಯಮಕ್ಕಾಗಿ ತೋಟಗಳು ಮತ್ತು ಕಾರ್ಖಾನೆಗಳು ಬೆಳೆದು ಬಂದಿದ್ದವು. ಇವುಗಳ ಮಾಲಿಕತ್ವ ಬ್ರಿಟಿಷ್ ಜನರದಾಗಿತ್ತು. ೧೯೧೭ರಲ್ಲಿ ಅವರು ರೈತರ ಮನವಿಯ ಮೇರೆಗೆ ಚಂಪಾರಣ್ಯಕ್ಕೆ ಬೇಟಿ ನೀಡಿ ವಸ್ತು ಸ್ಥಿತಿ ಅರಿತುಕೊಂಡರು.

ಮೊದಲನೆ ಮಹಾಯುದ್ಧದ ಸಂದರ್ಭದಲ್ಲಿಯೇ ಚಂಪಾರಣ್ಯ ಹಾಗೂ ಖೇಡಾ ಚಳುವಳಿಗಳು ನಡೆದವು. ಯುದ್ಧಕಾಲದಲ್ಲಿ ಬ್ರಿಟಿಷ್ ಸರ್ಕಾರಕ್ಕೆ ಆಂತರಿಕ ಬಿಕ್ಕಟ್ಟು ಉಂಟುಮಾಡಬಾರದೆಂಬ ಸದುದ್ದೇಶದಿಂದ ಗಾಂಧೀಜಿಯವರು ಈ ಚಳುವಳಿಯನ್ನು ಆಯಾ ಪ್ರದೇಶಗಳಿಗಷ್ಟೇ ಸೀಮಿತಗೊಳಿಸಿದರು. ಅವನ್ನು ಉದ್ದೇಶಪೂರ್ವಕವಾಗಿಯೇ ರಾಷ್ಟ್ರವ್ಯಾಪಿ ಚಲುವಳಿಗಳನ್ನಾಗಿ ಮಾಡಲಿಲ್ಲ. ಬ್ರಿಟಿಷ್ ಸರ್ಕಾರದ ಬಗ್ಗೆ ಆಗ ಅವರಲ್ಲಿನ ಸದ್ಭಾವನೆಯಿತ್ತು. ಆದರೆ ಯುದ್ಧ ಮುಗಿದ ಕೂಡಲೇ ಗಾಂಧೀಜಿಯವರ ಈ ಆಶಾಭಾವನೆಗೆ ಪ್ರಹಾರ ಬಿಟ್ಟಿತು. “ರೌಲಟ್ ಕಾಯ್ದೆ” ಜಾರಿಗೆ ತರುವುದರ ಮೂಲಕ ಬ್ರಿಟಿಷರ ಬಣ್ಣ ಬಯಲಾಯಿತು. ಇದರ ವಿರುದ್ಧ ಗಾಂಧೀಜಿಯವರು ದೇಶದಾದ್ಯಂತ ಸಂಚರಿಸಿ ಈ ಕಾಯ್ದೆಯನ್ನು ರದ್ದುಪಡಿಸಲು, ಆಂದೋಲನ ಸಂಘಟಿಸಲು ಮುಂದಾದರಲ್ಲದೆ ಇಡೀ ದೇಶವನ್ನೇ ಜಾಗ್ರತಗೊಳಿಸುವ ಕಾರ್ಯಕ್ರಮಕ್ಕಾಗಿ ಯೋಚಿಸಿದರು.

“ಜಾಲಿಯಾನ ವಾಲಾಬಾಗ್”- ದೇಶದ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸ ಪುಟಗಳಲ್ಲಿ ಪಂಜಾಬದ “ಜಾಲಿಯನ್‌ವಾಲಾಬಾಗ್ ಹತ್ಯಾಕಾಂಡ” ಕರಾಳ ಅಧ್ಯಯನವೆಂದೆನಿಸಿದೆ. ೧೯೧೯ ಏಪ್ರಿಲ್ ೩ರಂದು ಜಾಲಿಯಾನ್ ವಾಲಾಬಾಗ್ ಎಂಬಲ್ಲಿ ಸಭೆಯೊಂದು ಜರುಗಿ ಸಾವಿರಾರು ಜನ ಅದರಲ್ಲಿ ಪಾಲ್ಗೊಂಡಿದ್ದರು. ಪರಿಸ್ಥಿತಿ ಶಾಂತವಿದ್ದಾಗ್ಯೂ ಸಹ ಪಂಜಾಬಿನಲ್ಲಿ ಹಿಂಸಾಕೃತ್ಯ ತಡೆಗಟ್ಟಲು ಬಂದಿದ್ದ ಆಂಗ್ಲ ಅಧಿಕಾರಿ ಜನರಲ್ ಡಯರ್ ಯಾವ ಮುನ್ಸೂಚನೆ ನೀಡದೆ ಒಮ್ಮೆಲೆ ಆ ಸ್ಥಳಕ್ಕೆ ಬಂದು ಅಲ್ಲಿದ್ದ ಒಂದೇ ಒಂದು ಧ್ವಾರವನ್ನು ಬಂದು ಮಾಡಿ ಅಲ್ಲಿದ್ದ ಸಭಿಕರ ಮೇಲೆ

ಗುಂಡು ಹಾರಿಸಲು ಸೈನಿಕರಿಗೆ ಆದೇಶಿಸಿದ. ಆಗ ಅಲ್ಲಿದ್ದ ಸಭಿಕರ ಮೇಲೆ ಗುಂಡಿನ ಮಳೆಗರೆದರು. ಈ ಹತ್ಯಾಕಾಂಡದಲ್ಲಿ ೪೦೦ ಜನರು ಜೀವತೆತ್ತರು. ಸಾವಿರಾರು ಜನರು ಗಾಯಗೊಂಡವರು. ಗಾಂಧೀಜಿಯವರು ಬ್ರಿಟಿಷ್ ಸಾಮ್ರಾಜ್ಯದ ಬಗ್ಗೆ ಇರಿಸಿಕೊಂಡಿದ್ದ ಗೌರವದ ಭಾವನೆಯನ್ನು ಈ ಹತ್ಯಾಕಾಂಡ ಅಳಿಸಿಹಾಕಿತಲ್ಲದೆ ದೇಶದಾದ್ಯಂತ ಸ್ವಾತಂತ್ರ್ಯ ಹೋರಾಟಕ್ಕಾಗಿ ಅಣಿಯಾಗಲು ಜನತೆಯಲ್ಲಿ ಉಕ್ಕಿಸಿತು.

"ಅಸಹಕಾರ ಚಳುವಳಿ" ಗಾಂಧೀಜಿಯವರು ಕೈಗೊಂಡಿದ್ದ ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅಸಹಕಾರ ಚಳುವಳಿಯು ಮತ್ತೊಂದು ಮಹತ್ವದ ಮೈಲಿಗಲ್ಲು ಎನ್ನಬಹುದು. ೧೯೨೦ರ ಸೆಪ್ಟೆಂಬರ್‌ನಲ್ಲಿ ಕಲ್ಕತ್ತಾದಲ್ಲಿ ಜರುಗಿದ ಅಖಿಲಭಾರತ ಕಾಂಗ್ರೆಸ್ ಅಧಿವೇಶನ ಅಸಹಕಾರ ಚಳವಳಿಯನ್ನು ಅನುಮೋದಿಸಿತು. ನಾಗಪುರದಲ್ಲಿ ಅದೇ ವರ್ಷ ಜರುಗಿದ ಅಧಿವೇಶನವೂ ಬೆಂಬಲ ವ್ಯಕ್ತಪಡಿಸಿತು. ಸದರಿ ಅಧಿವೇಶನದಲ್ಲಿ ಮಾತನಾಡಿದ ಗಾಂಧೀಜಿಯವರು. ಅಸಹಕಾರ ಚಳುವಳಿಯನ್ನು ಕುರಿತು ಜನರಿಗೆ ಮನನ ಮಾಡುತ್ತ ಬ್ರಿಟಿಷ್ ಸರ್ಕಾರದೊಡನೆ ಸರ್ವವಿಧದಲ್ಲಿ ಅಸಹಕಾರ ಮಾಡಿದಲ್ಲಿ ಅಲ್ಲಿ ಸಮಯದಲ್ಲಿಯೆ ಸ್ವರಾಜ್ಯ ದೊರಕುವದೆಂದು ವಿವರಿಸಿದರು. ಗಾಂಧೀಜಿಯವರು ಕರೆ ನೀಡಿದ ಅಸಹಕಾರ ಚಳವಳಿಗೆ ದೇಶದೆಲ್ಲಡೆಯಿಂದ ಉತ್ತಮ ಪ್ರತಿಕ್ರಿಯೆ ದೊರಕಿತು. ಖ್ಯಾತ ವಕೀಲರಾಗಿದ್ದ ವಲ್ಲಭಬಾಯಿ ಪಟೇಲ, ಮೋತಿಲಾಲ್‌ನೆಹರೂ, ರಾಜೇಂದ್ರ ಪ್ರಸಾದ, ರಾಜಗೋಪಾಲಚಾರಿ ಮೊದಲಾದವರು ಹೇರಳ ಹಣ ತರುತ್ತಿದ್ದ ತಮ್ಮ ವೃತ್ತಿಯನ್ನು ಬಿಟ್ಟುಕೊಟ್ಟು ಚಳುವಳಿಗೆ ಸಹಕಾರ ನೀಡಿದರು. ಗಾಂಧೀಜಿ ತಮ್ಮ "ಯಂಗ್ ಇಂಡಿಯಾ" ಪತ್ರಿಕೆಯ ಮೂಲಕ ದೇಶದ ಜನರಲ್ಲಿ ಜಾಗೃತಿ ಮೂಡಿಸಿದರು.

"ಚೌರಿಚೌರ ಘಟನೆ" ಉತ್ತರ ಪ್ರದೇಶದ ಘೋರಕ್‌ಪುರ ಜಿಲ್ಲೆಯಲ್ಲಿರುವ ಒಂದು ಸಣ್ಣ ಗ್ರಾಮ ಚೌರಿಚೌರ. ೧೯೨೨ರ ಫೆಬ್ರವರಿ ೫ರಂದು ಮುರು ಸಾವಿರ ಜನರಿದ್ದ ಮೆರವಣಿಗೆಯ ಮೇಲೆ ಪೊಲೀಸರು ಗುಂಡು ಹಾರಿಸಿ, ಮೆರವಣಿಗೆಯನ್ನು ಚದುರಿಸಲು ಪ್ರಯತ್ನಿಸಿದರು. ಗುಂಪು ಪೂರ್ಣವಾಗಿ ಚದುರುವ ಪೂರ್ವದಲ್ಲೇ ಪೊಲೀಸರ ಬಳಿಯಿದ್ದ ಮದ್ದುಗುಂಡು ಮುಗಿದುದರಿಂದ ಪೊಲೀಸರು ಹಿಂದೆ ಸರಿದು ಠಾಣೆಯನ್ನು ಸೇರಬೇಕಾಯಿತು. ಪೊಲೀಸರ ನಿಸ್ಸಹಾಯಕತೆಯನ್ನು ಅರಿತ ಮೆರವಣಿಗೆಗಾರರು ಠಾಣೆಯನ್ನು ಮುತ್ತಿ ಅಗ್ನಿ ಸ್ಪರ್ಶ ಮಾಡಿದರು. ಈ ದುರಂತದಲ್ಲಿ ೨೨ ಪೊಲೀಸರು ಜೀವಂತವಾಗಿ ದಹಿಸಿ ಹೋದರು. ಈ ಬರ್ಬರ ಕೃತ್ಯದಿಂದ

ಗಾಂಧೀಜಿಯವರು ನಡುಗಿ ಹೋದರು. ಅಹಿಂಸೆಯೇ ಮೂರ್ತಿವೆತ್ತಂತಿದ್ದ ಗಾಂಧೀಜಿಯವರು ಅಸಹಾಯಕರಾಗಿ, ವಿಧಿಯಿಲ್ಲದೆ ತಮ್ಮ ಚಳುವಳಿಯನ್ನು ಹಿಂತೆಗೆದುಕೊಳ್ಳಬೇಕಾಯಿತು. ಈ ರೀತಿ ಚೌರಿಚೌರದಲ್ಲಿ ನಡೆದ ಹಿಂಸಾತ್ಮಕ ಘಟನೆಯಿಂದಾಗಿ ಅಸಹಕಾರ ಚಳವಳಿಯು ಕೊನೆಗೊಂಡಿತು.

ಉಪ್ಪಿನ ಸತ್ಯಾಗ್ರಹ: "೧೯೨೮ರಲ್ಲಿ ಕಲ್ಕತೆಯಲ್ಲಿ ಜರುಗಿದ ಕಾಂಗ್ರೆಸ್ ಅಧಿವೇಶನದೊಡನೆ ಗಾಂಧೀಜಿ ಮತ್ತೆ ರಾಜಕೀಯ ಜೀವನಕ್ಕೆ ಪ್ರವೇಶ ಪಡೆದರು. ಕಲ್ಕತೆಯ ಸಮ್ಮೇಳನದಲ್ಲಿ ಮೋತಿಲಾಲ ನೆಹರು ಅವರ ಅಧ್ಯಕ್ಷತೆಯಲ್ಲಿ ಸಿದ್ಧಮಾಡಿದ "ನೆಹರೂ ವರದಿ" ಎಂಬ ಭಾರತದ ಸಂವಿಧಾನ ಕರಡು ಸ್ವೀಕೃತವಾಗಬೇಕಿತ್ತು. "ಸಾಮ್ರಾಜ್ಯಾಂತರ್ಗತ ಸ್ವರಾಜ್ಯ" ಈ ವರದಿಯ ಪ್ರತಿಪಾದನೆಯಾಗಿದ್ದಿತು. ಇದನ್ನು ಸಂಪೂರ್ಣವಾಗಿ ಸ್ವೀಕರಿಸಬೇಕೆಂದು ಮೋತಿಲಾಲರ ಹಠವಾದರೆ ಇದನ್ನು ಸ್ವೀಕರಿಸಿದರೆ ತಾವು ಕಾಂಗ್ರೆಸ್ಸಿಗೆ ರಾಜಿನಾಮೆ ಕೊಡುವುದಾಗಿ ಜವಾಹರಲಾಲನೆಹರು ಹಾಗೂ ಸುಭಾಷ್‌ಚಂದ್ರ ಅವರಂತಹ ಯುವ ನಾಯಕರು ಘೋಷಿಸಿದರು. ಈ ಭಿನ್ನಾಭಿಪ್ರಾಯ ಗಾಂಧೀಜಿಯವರ ಮಧ್ಯಸ್ಥಿಕೆಯಲ್ಲಿ ಬಗೆಹರಿಯಿತು. ಒಂದುವರ್ಷದ ಅವಧಿಯಲ್ಲಿ ಬ್ರಿಟಿಷ್ ಸರ್ಕಾರ ನೆಹರೂ ವರದಿಯನ್ನು ಅಂಗೀಕರಿಸದಿದ್ದರೆ, ಅಸಹಕಾರ ಚಳವಳಿ ಹಮ್ಮಿಕೊಳ್ಳುವ ಎಚ್ಚರಿಕೆಯೊಂದಿಗೆ ವರದಿ ಅಧಿವೇಶನದಲ್ಲಿ ಸ್ವೀಕೃತವಾಯಿತು. ಇದರಿಂದ ಅಸಹಕಾರ ಚಳುವಳಿಗೆ ಪುನಃ ಚಾಲನೆ ದೊರಕಿದಂತಾಗಿ ಗಾಂಧೀಜಿ ಅದರ ನೇತೃತ್ವ ವಹಿಸಿಕೊಳ್ಳುವುದು ಅನಿವಾರ್ಯವಾಯಿತು".[೧]

ಮರುವರ್ಷವೇ ಲಾಹೋರಿನಲ್ಲಿ ನಡೆದ ಕಾಂಗ್ರೆಸ್ ಅಧಿವೇಶನಕ್ಕೆ ಜವಾಹರಲಾಲ ನೆಹರೂ ಅಧ್ಯಕ್ಷರಾದರು. ಈ ಅಧಿವೇಶನದಲ್ಲಿ ಸಂಪೂರ್ಣ ಸ್ವಾತಂತ್ರ್ಯವೇ ನನ್ನ ಗುರಿ ಎಂದು ಕಾಂಗ್ರೆಸ್ಸೇ ಸಾರಿತಲ್ಲದೆ ಕಾಯ್ದೆ ಭಂಗ ಚಳುವಳಿಗೆ ಕರೆ ನೀಡಿತು. ಇದರ ಫಲವೇ ಇತಿಹಾಸ ಪ್ರಸಿದ್ಧ ಉಪ್ಪಿನ ಸತ್ಯಾಗ್ರಹ. ಈ ಬಾರಿ ಉಪ್ಪಿನ ಕಾಯ್ದೆಯನ್ನು ಮುರಿಯುವ ಮೂಲಕ ಕಾಯ್ದೆ ಭಂಗ ಚಳುವಳಿಗೆ ಗಾಂಧೀಜಿ ಮುಂದಾದರು. ಪ್ರಾರಂಭದಲ್ಲಿ ಉಪ್ಪಿನ ಸತ್ಯಾಗ್ರಹ ಬ್ರಿಟಿಷರಿಗಾಗಲಿ ಕಾಂಗ್ರೆಸ್ಸಿಗರಿಗಾಗಲಿ ಮಹತ್ವಪೂರ್ಣ ಎನಿಸಲಿಲ್ಲ. ಆದರೆ ಗಾಂಧೀಜಿಯವರು ಅವರಲ್ಲಿ ತೊಡಗಿಸಿಕೊಂಡ ಬಗೆಯಿಂದ ಅದು ಇತಿಹಾಸ ಪ್ರಸಿದ್ಧಿಯನ್ನು ಪಡೆಯಿತು.

---

೧. ಮಹಾತ್ಮಾಗಾಂಧಿ ಜೀವನ ಚರಿತ್ರೆ ಮತ್ತು ಸಾಧನೆಗಳು – ಶರತ ಕಿದಿಯೂರ, ಪು. ೫೫.

ಚಳುವಳಿಯ ಮುನ್ನ ಗಾಂಧೀಜಿಯವರು ಅದರ ಉದ್ದೇಶವನ್ನು ಸರ್ಕಾರಕ್ಕೆ ಬರೆದು ತಿಳಿಸಿದರು. ಆಳರಸರಿಂದ ಭಾರತದ ಜನರಿಗಾಗುತ್ತಿದ್ದ ತೊಂದರೆ, ಸೈನ್ಯ ಹಾಗೂ ಆಂಗ್ಲ ಸರ್ಕಾರದ ಆಡಳಿತ ವೆಚ್ಚಕ್ಕಾಗಿ ತಮ್ಮ ಮೇಲೆ ಹೇರಿರುವ ಕರಗಳಿಂದ ಕಂಗೆಟ್ಟಿರುವ ದೇಶದ ಜನತೆ, ಬ್ರಿಟಿಷ್ ಆಳ್ವಿಕೆ ತೊಲಗಿದಾಗಲೇ ಭಾರತದ ಜನರಿಗೆ ಒಳ್ಳೆಯದುಂಟಾಗುವುದೆಂಬುದನ್ನು ಗಾಂಧೀಜಿ ತಮ್ಮ ಪತ್ರದಲ್ಲಿ ವಿವರಿಸಿದ್ದರಲ್ಲದೆ ಈ ಹೋರಾಟ ಅಹಿಂಸಾತ್ಮಕವಾದುದೆಂದು ಒತ್ತಿ ಹೇಳಿದ್ದರು. ೧೯೩೦ರ ಮಾರ್ಚ್ ೧೧ರೊಳಗೆ ಪತ್ರದಲ್ಲಿ ಸೂಚಿಸಿರುವ ಭಾರತೀಯರ ಬವಣೆಗಳನ್ನು ನಿವಾರಿಸದಿದ್ದಲ್ಲಿ ತಾವು ಉಪ್ಪಿನ ಸತ್ಯಾಗ್ರಹ ಕೈಗೊಳ್ಳುವ ಸ್ಪಷ್ಟಪಡಿಸಿದರು. ಆಗ ವೈಸರಾಯ್‌ರಾಗಿದ್ದ ಇರ್ವಿನ್‌ರಿಂದ ಗಾಂಧೀಜಿಯ ಪತ್ರಕ್ಕೆ ಯಾವ ಉತ್ತರವೂ ದೊರಕಲಿಲ್ಲ. ಪರಿಣಾಮವಾಗಿ ಸತ್ಯಾಗ್ರಹದ ಶಾಂತಿ ಯುದ್ಧ ಪ್ರಾರಂಭಗೊಂಡಿತು.

ಈ ಮುನ್ನ ತಿಳಿಸಿದಂತೆ ಗಾಂಧೀಜಿಯವರು ಮಾರ್ಚ್ ೧೨ರಂದು ಮುಂಜಾನೆ ತಮ್ಮ ಅನುಯಾಯಿಗಳೊಂದಿಗೆ ಸಾಬರಮತಿ ಆಶ್ರಮದಿಂದ ದಕ್ಷಿಣ ಸಮುದ್ರದ ದಂಡಿಗೆ ಪಾದಾಚಾರಿಯಾಗಿ ಹೊರಟರು. ನೂರಾರು ಮೈಲಿಯುದ್ದದ ಈ ಪಾದಯಾತ್ರೆಯ ಮಾರ್ಗದಲ್ಲಿ ಬರುವ ಹಳ್ಳಿಗಳಲ್ಲಿ ಜನರು ತಮ್ಮ ನಾಯಕರನ್ನು ಆತ್ಮೀಯವಾಗಿ ಬರಮಾಡಿಕೊಂಡರು. ಬೀದಿಗೆ ತಳಿರು ತೋರಣ ಕಟ್ಟಿ ಸತ್ಯಾಗ್ರಹಿಗಳನ್ನು ಸ್ವಾಗತಿಸಲಾಯಿತು. ತಮ್ಮ ಸಂಚಾರದುದ್ದಕ್ಕೂ ಗಾಂಧೀಜಿ ಅಲ್ಲಿನ ಜನರಿಗೆ ಅಸ್ಪೃಶ್ಯತಾ ನಿವಾರಣೆ, ಖಾದಿಯ ಮಹತ್ವ, ಪಾನ ನಿಷೇಧ ಮೊದಲಾದವುಗಳ ಬಗ್ಗೆ ತಮ್ಮ ವಿಚಾರಧಾರೆ ತಿಳಿಸಿಕೊಟ್ಟರು.

ಉಪ್ಪಿನ ಸತ್ಯಾಗ್ರಹವು ಭಾರತೀಯರ ಅಹಿಂಸಾತ್ಮಕ ಸಾಮರ್ಥ್ಯಕ್ಕೆ ಹಿಡಿದ ಕನ್ನಡಿಯಾಗಿತ್ತು. ಇದರ ಬಿಸಿ ಬ್ರಿಟಿಷ್ ಸರ್ಕಾರಕ್ಕೆ ತಟ್ಟದಿರಲಿಲ್ಲ. ಗಾಂಧೀಜಿಯವರ ವಿರುದ್ಧ ತನ್ನ ದಂಡ ನೀತಿ ವಿಫಲಗೊಂಡ ಅರಿವು ಬ್ರಿಟಿಷ್ ಸರ್ಕಾರಕ್ಕಾಯಿತು. ಗಾಂಧೀಜಿಯವರನ್ನು ಬಂಧನದಿಂದ ಮುಕ್ತರನ್ನಾಗಿಸಲು ಆಂಗ್ಲ ಜನತೆಯೂ ಒತ್ತಾಯಿಸತೊಡಗಿತು. ೧೯೩೦ರ ಪ್ರಥಮ ದುಂಡುಮೇಜಿನ ಪರಿಷತ್ತಿಗೆ ಭಾರತದ ವೈಸರಾಯ್ ಆಯ್ಕೆ ಮಾಡಿದ ಭಾರತೀಯ ಪ್ರತಿನಿಧಿಗಳಿಂದ ಯಾವ ಪ್ರಯೋಜನವಾಗದ್ದರಿಂದ, ಗಾಂಧೀಜಿಯವರು ಪಾಲ್ಗೊಳ್ಳದೆ ಸಮಸ್ಯೆ ಇತ್ಯಾರ್ಥ-ವಾಗದೆಂದು ಮನಗಂಡು, ಇಂಗ್ಲೆಂಡ್ ಸರ್ಕಾರ ಎರಡನೇ ದುಂಡುಮೇಜಿನ ಸಮ್ಮೇಳನದಲ್ಲಿ ಕಾಂಗ್ರೆಸ್ ಅರ್ಥಾತ್ ಗಾಂಧೀಜಿ, ಪಾಲ್ಗೊಳ್ಳಲು ವಿನಂತಿಸಿದರು.

ಇದರ ಪರಿಣಾಮವಾಗಿ ಗಾಂಧೀಜಿ ನೆಹರೂ ಸಹಿತ ಅನೇಕ ನಾಯಕರನ್ನು ಬಂಧನದಿಂದ ಬಿಡುಗಡೆ ಮಾಡಲಾಯಿತು.

ಗಾಂಧೀಜಿಯವರು ೧೯೩೪ರಲ್ಲಿ ಕಾಂಗ್ರೆಸ್ಸಿನಿಂದ ಬಿಡುಗಡೆ ಹೊಂದಿದರು. ಅವರ ಈ ನಿರ್ಧಾರಕ್ಕೆ ಅನೇಕ ವಿಷಯಗಳು ಕಾರಣವಾಗಿದ್ದವು. ಕಾಯ್ದೆ ಭಂಗ ಚಳುವಳಿ ಕುರಿತಂತೆ ಕಾಂಗ್ರೆಸ್ಸಿನಲ್ಲಿ ಸಾಕಷ್ಟು ಶ್ರದ್ಧೆ ಬೆಳೆದಿದ್ದರೂ ಸಹ ತಾವು ಅತ್ಯಂತ ಗಾಢವಾಗಿ ಮೆಚ್ಚಿಕೊಂಡಿದ್ದ ಅಹಿಂಸೆಯ ಕುರಿತಂತೆ ಅಷ್ಟೇ ಗಟ್ಟಿಯಾದ ಪ್ರೀತಿಯನ್ನು ಗಾಂಧೀಜಿ ಕಾಂಗ್ರೆಸ್ಸಿನಲ್ಲಿ ಕಾಣಲಿಲ್ಲ. ಕೇವಲ ತಮಗೆ ಗೌರವ ಕೊಡುವ ಉದ್ದೇಶದಿಂದ ಕಾಂಗ್ರೆಸ್ಸಿಗರು ಅವರಿಗೆ ಒಪ್ಪಿಗೆ ಆಗಲಿ ಬಿಡಲಿ ಕಾಂಗ್ರೆಸ್ಸಿನ ಸಭೆಗಳಲ್ಲಿ ತೆಗೆದುಕೊಂಡ ನಿರ್ಣಯಗಳನ್ನು ಅಂಗೀಕರಿಸುತ್ತಾರೆಂದು ಗಾಂಧೀಜಿ ಭಾವಿಸಿದರು. ಇದು ಮುಕ್ತ ವಾತಾವರಣಕ್ಕೆ ಅವಕಾಶ ನೀಡದೆಂಬ ಕಾರಣದಿಂದ ಗಾಂಧೀಜಿ ಕಾಂಗ್ರೆಸ್ ಸದಸ್ಯತ್ವದಿಂದ ನಿವೃತ್ತಿ ಹೊಂದುವ ನಿರ್ಧಾರ ತೆಗೆದುಕೊಂಡರಲ್ಲದೆ ಅವಶ್ಯಕತೆಯಿದ್ದಾಗ ಸಂಸ್ಥೆಗೆ ತಾವು ಸೇವೆ ನೀಡಲು ಸಿದ್ಧ ಎಂದು ಘೋಷಿಸಿದರು. ಮುಂದೆ ಕಾಂಗ್ರೆಸ್‌ನ ಸಭೆಗಳಲ್ಲಿ ಗಾಂಧೀಜಿಯವರು ವಿಶೇಷ ಆಹ್ವಾನಿತರಾಗಿ ಪಾಲ್ಗೊಂಡು ಮಾರ್ಗದರ್ಶನ ನೀಡುತ್ತಿದ್ದರು.

ಗ್ರಾಮಗಳ ಪ್ರಗತಿಯೇ ಭಾರತದ ಪ್ರಗತಿ ಎಂಬುದು ಗಾಂಧೀಜಿಯವರ ಪ್ರತಿಪಾದನೆಯಾಗಿತ್ತು. ಹೀಗೆ ಗಾಂಧೀಜಿಯವರು ಎಲ್ಲಾ ವರ್ಗದವರಿಗೂ, ಪ್ರತಿ ಹಳ್ಳಿಗೂ ಶ್ರೀಸಾಮಾನ್ಯನಿಗೂ ಸ್ವಾತಂತ್ರ ದೊರಕಬೇಕು ಎಂಬುದು ಗಾಂಧೀಜಿಯವರ ಅಭಿಪ್ರಾಯವಾಗಿತ್ತೆಂದು ಹೇಳಬಹುದಾಗಿದೆ.

" 'ಯರವಾಡ ಒಪ್ಪಂದ'– ಇಂಗ್ಲೆಂಡಿನಿಂದ ಗಾಂಧೀಜಿಯವರು ಭಾರತಕ್ಕೆ ಮರಳಿದ ನಂತರ ದೇಶದಲ್ಲಿ ಪುನಃ ಅಸಹಕಾರ ಚಳುವಳಿ ಭುಗಿಲೇಳುವದೆಂದು ಬ್ರಿಟಿಷ್ ಸರ್ಕಾರಕ್ಕೆ ಮನವರಿಕೆಯಾಯಿತು. ಇಂಥ ಸಂದರ್ಭದಲ್ಲಿ ಸೂಕ್ತವಾಗಿ ಎದುರಿಸಲು ಅದು ಮುಂದಾಯಿತು. ನೆಹರೂ, ಖಾನ್‌ಅಬ್ದುಲ್ ಗಫಾರ್‌ಖಾನ್ (ಗಡಿನಾಡಗಾಂಧಿ) ಮೊದಲಾಗಿ ಅನೇಕ ಕಾಂಗ್ರೆಸ್ ನಾಯಕರನ್ನು ಬಂದಿಸಿತು. ಇಂಗ್ಲೆಂಡಿನಿಂದ ಭಾರತಕ್ಕೆ ಬಂದ ಒಂದು ವಾರದೊಳಗಾಗಿ ಗಾಂಧೀಜಿಯವರನ್ನು ಬಂಧಿಸಿ ಯರವಾಡಾ ಸೆರೆಮನೆಗೆ ಕಳಿಸಿತಲ್ಲದೆ ಚಳುವಳಿಯನ್ನು ಹತ್ತಿಕ್ಕಲು ವಿಶೇಷ ಸುಗ್ರೀವಾಜ್ಞೆ ಜಾರಿಗೆ ತಂದಿತು. ವಿವಿಧ ಸ್ಥಳಗಳಲ್ಲಿ ಜನರ ಮೇಲೆ ಪೋಲೀಸರು ದೌರ್ಜನ್ಯವೆಸಗಿದರು. ಸ್ವಾತಂತ್ರ್ಯ ಹೋರಾಟಗಾರರ ಮೇಲೆ ಸುಗ್ರೀವಾಜ್ಞೆ ವಿಧಿಸಿ

ಚಳವಳಿಗಾರರನ್ನು ಉಗ್ರವಾಗಿ ಹತ್ತಿಕ್ಕಲು ಬ್ರಿಟಿಷ್ ಸರಕಾರ ಮುಂದಾಯಿತು. ಕಾಂಗ್ರೆಸ್ಸಿನ ಸಮಿತಿಯು ಮುಂಬೈನಲ್ಲಿ ಸಭೆ ಸೇರಿ 'ಕಾನೂನು ಭಂಗ ಚಳುವಳಿಯನ್ನು ತೀವ್ರಗೊಳಿಸಲು ತೀರ್ಮಾನಿಸಿತು. ಸತ್ಯಾಗ್ರಹದಲ್ಲಿ ಮಹಿಳೆಯರು ಪಾಲ್ಗೊಳ್ಳದಂತೆ ತಡೆಯಲು ಅವರ ಮೇಲೆ ದೌರ್ಜನ್ಯವೆಸಗುವ ಕಾರ್ಯಕ್ಕೂ ಸರ್ಕಾರ ಮುಂದಾಯಿತು. ಸಿಪಾಯಿ ದಂಗೆಯ ನಂತರ ಇದೇ ಪ್ರಥಮ ಬಾರಿಗೆ ಆಂಗ್ಲಸರ್ಕಾರ ಇಷ್ಟೊಂದು ಕ್ರೂರ ರೀತಿಯಲ್ಲೂ ಸತ್ಯಾಗ್ರಹ ಹತ್ತಿಕ್ಕಲು ಪ್ರಯತ್ನಿಸಿತು."[೧] ಹರಿಜನರ ಧುರೀಣರಾಗಿದ್ದ ಅಂಬೇಡ್ಕರ ಅವರೊಡನೆ ಈ ಧುರೀಣರೆಲ್ಲ ಚರ್ಚೆನಡೆಸಿದರು. ಪ್ರತ್ಯೇಕ ಚುನಾವಣೆಗೆ ಬದಲಾಗಿ ಸೂಕ್ತ ಪ್ರಾತಿನಿಧ್ಯ ಕೊಡುವ ಬಗ್ಗೆ ಖಚಿತ ಭರವಸೆಗಳನ್ನು ನೀಡುವ ಕುರಿತು ಇತ್ತಂಡಗಳಲ್ಲಿ ಚರ್ಚೆಯಾಗಬೇಕು. ಪ್ರತ್ಯೇಕ ಚುನಾವಣಾಪದ್ಧತಿ ತಿರಸ್ಕರಿಸಬೇಕಾದರೆ ನಮಗೆ ಸೂಕ್ತ ಪರಿಹಾರ ನೀಡಬೇಕೆಂದು ಡಾ.ಅಂಬೇಡ್ಕರ್ ಸ್ಪಷ್ಟಪಡಿಸಿದರು. ಶಾಸನಸಭೆಗಳಲ್ಲಿ ೭೧ ಸ್ಥಾನಗಳನ್ನು ಅಸ್ಪೃಶ್ಯರಿಗಾಗಿ ಮೀಸಲಿಡಬೇಕೆಂದು "ಕೋಮುವಾರು ತೀರ್ಪು" ತಿಳಿಸಿತ್ತು. ಆದರೆ ಅದರ ಬದಲು ೧೪೭ ಸ್ಥಾನಗಳನ್ನು ಮೀಸಲಾಗಿಡಬೇಕೆಂದು ಸರ್ವಸಮ್ಮತ ಅಭಿಪ್ರಾಯಕ್ಕೆ ಬರಲಾಯಿತು. ಕೇಂದ್ರ ಶಾಸನ ಸಭೆಯಲ್ಲಿ ಶೇಕಡ ೧೮ರಷ್ಟು ಸ್ಥಾನಗಳನ್ನು ಅಸ್ಪೃಶ್ಯರಿಗೆ ಮೀಸಲಾಗಿಡಬೇಕೆಂದು ನಿರ್ಧರಿಸಲಾಯಿತು. ಅಂಬೇಡ್ಕರ್ ಅವರಲ್ಲದೆ ರಾಜೇಂದ್ರ ಪ್ರಸಾದ ಮಾಳವೀಯಸಪ್ರು ಮೊದಲಾದ ಧುರೀಣರು ಒಪ್ಪಂದಕ್ಕೆ ಸಹಿ ಹಾಕಿದರು.

"ಕ್ವಿಟ್ಇಂಡಿಯಾ ಚಳುವಳಿ"(ಚಲೇಜಾವ ಚಳುವಳಿ), ಸ್ವಾತಂತ್ರ್ಯದ ಬೇಡಿಕೆಗೆ ಸ್ಪಂದಿಸದೆ ಮೊಂಡುತನ ತೋರಿದ ಭಂಡ ಬ್ರಿಟಿಷ್ ಸರ್ಕಾರದ ವಿರುದ್ಧ ಮತ್ತೆ ಚಳುವಳಿ ಪ್ರಾರಂಭಿಸುವದು ಕಾಂಗ್ರೆಸ್ಸಿಗೆ ಅನಿವಾರ್ಯವಾಯಿತು. ದೇಶದಾದ್ಯಂತ ವ್ಯಾಪಕ ಆಂದೋಲನ ಮಾಡುವ ಹಿನ್ನೆಲೆಯಲ್ಲಿ ಚಲೇ ಜಾವ ಚಳವಳಿ ಅಥವಾ "ಬ್ರಿಟಿಷರೇ ಭಾರತ ಬಿಟ್ಟು ತೊಲಗಿ" ಎಂಬ ನಿರ್ಣಯವನ್ನು ಪರಿಶೀಲಿಸಲು ೧೯೪೨ ಆಗಸ್ಟ್ ೭ ಹಾಗು ೮ ರಂದು ಮುಂಬೈಯಲ್ಲಿ ಐತಿಹಾಸಿಕ ಅಧಿವೇಶನವು ಮೌಲಾನಾ ಅಬ್ದುಲ್ ಕಲಂ ಆಜಾದ್ ಅಧ್ಯಕ್ಷತೆಯಲ್ಲಿ ಜರುಗಿತು. ಈ ಸಂದರ್ಭದಲ್ಲಿ ಬ್ರಿಟಿಷರು ಭಾರತದಲ್ಲಿ ಅಧಿಕಾರ ಬಿಟ್ಟು ಕೊಡಬೇಕೆಂಬ ನಿರ್ಣಯವನ್ನು ಜವಾಹರಲಾಲ್ ನೆಹರೂ ಮಾಡಿಸಿದರು. ಸರ್ದಾರ ಪಟೇಲರು ಅದನ್ನು ಅನುಮೋದಿಸಿದರು. ಆಗಸ್ಟ್ ೮ ರಂದು ಅಧಿವೇಶನ "ಬ್ರಿಟಿಷರೇ ಭಾರತ ಬಿಟ್ಟು ತೊಲಗಿ" ಎಂಬ ಐತಿಹಾಸಿಕ

೧. ಮಹಾತ್ಮಾಗಾಂಧಿ ಜೀವನ ಚರಿತ್ರೆ ಮತ್ತು ಸಾಧನೆಗಳು, ಲೇ:ಶರತ ಕಿದಿಯೂರ, ಪು. ೬೩.

ನಿರ್ಣಯವನ್ನು ಪ್ರಚಂಡ ಬಹುಮತದಿಂದ ಅಂಗೀಕರಿಸಿತು. ಆಗಸ್ಟ್ ೯ರಂದು ಗಾಂಧೀಜಿ ಅವರಲ್ಲದೆ ಸರೋಜಿನಿನಾಯ್ಡು, ಮೀರಾಬೆಹೆನ್, ಮಹಾದೇವದೇಸಾಯಿ ಅವರನ್ನು ಬಂಧಿಸಲಾಯಿತು. ಇದರ ಜೊತೆಗೆನೆ ಪಟೇಲ, ನೆಹರೂ, ಅಜಾದ್ ಮತ್ತಿತರ ಕಾಂಗ್ರೆಸ್ ಧುರೀಣರನ್ನು ಬಂಧಿಸಲಾಯಿತು. ಗಾಂಧೀಜಿಯವರನ್ನು ಪೂನಾದ ಹತ್ತಿರದ ಆಗಾಖಾನ್ ಅರಮನೆಯಲ್ಲಿ ಬಂಧನದಲ್ಲಿಡಲಾಯಿತು. ಜಯಪ್ರಕಾಶ ನಾರಾಯಣರಂಥವರು. ಜೈಲುಗಳಿಂದ ತಪ್ಪಿಸಿಕೊಂಡು ಹೋಗಿ ಚಳುವಳಿಗೆ ಮುಖ್ಯ ಮಾರ್ಗದರ್ಶಕರಾದರು. ಮಹಾರಾಷ್ಟ್ರ ಸೇರಿದಂತೆ ವಿವಿಧೆಡೆ ಪ್ರತಿ ಸರ್ಕಾರಗಳನ್ನು ಘೋಷಿಸಿ ಬ್ರಿಟಿಷ್ ಅಧಿಕಾರಿಗಳಿಗೆ ಆಯಾ ಹಳ್ಳಿಗಳಲ್ಲಿ ಪ್ರವೇಶ ಮಾಡದಂತಹ ಪರಿಸ್ಥಿತಿ ನಿರ್ಮಿಸಲಾಯಿತು.

"ನೇತಾಜಿ ಸುಭಾಷ್‌ಚಂದ್ರ ಬೋಸ್"ರವರು ಭಾರತಸ್ವಾತಂತ್ರ್ಯ ಚಳುವಳಿ ತೀವ್ರಗೊಂಡಿದ್ದ ಕಾಲ. ಆಗ ಸರ್ಕಾರಿ ಹುದ್ದೆಗೆ ಆಸೆಪಡದೆ, ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮುಕಿದರು. ಗಾಂಧೀಜಿ ಮತ್ತು ಸುಭಾಷ್‌ಚಂದ್ರಬೋಸ್‌ರವರ ಧ್ಯೇಯ ಒಂದೇ ಆದರೂ ಮಾರ್ಗ ಬೇರೆ ಬೇರೆಯಾಗಿತ್ತು. ಗಾಂಧೀಜಿಯವರು ಅಹಿಂಸಾಮಾರ್ಗ, ಸುಭಾಷ್‌ಚಂದ್ರಬೋಸ್‌ರವರದು ಕ್ರಾಂತಿಕಾರಿ ಹೋರಾಟ ಮಾರ್ಗ. ಸುಭಾಷ್‌ಚಂದ್ರ ಬೋಸ್ ತಮ್ಮ ರಾಜಕೀಯ ಗುರು ಸಿ.ಆರ್.ದಾಸ್‌ರವರ ಮಾರ್ಗದರ್ಶನದಂತೆ ಸ್ವರಾಜ್ಯ ಪಕ್ಷವನ್ನು ಹುಟ್ಟು ಹಾಕಿದರು.

ಬೋಸ್‌ರವರಿಗೆ ೨೭ ವರ್ಷವಿರುವಾಗ ೧೯೨೪ರಲ್ಲಿ ಬ್ರಿಟಿಷ್ ಅಧಿಕಾರಿಗಳು ಭಯೋತ್ಪಾದಕ ಚಟುವಟಿಕೆಗಳಲ್ಲಿ ತೊಡಗಿರುವುದಾಗಿ ಶಂಕಿಸಿ, ಬಂಧಿಸಿ ಸೆರೆಯಲ್ಲಿಟ್ಟರು. ಆ ವೇಳೆಯಲ್ಲೇ ಅವರ ಗುರು ಸಿ.ಆರ್.ದಾಸರು ಅಕಾಲ ಮೃತ್ಯುವಿಗೆ ತುತ್ತಾದರು. ಮೂರು ವರ್ಷದ ನಂತರ ಬೋಸರು ಬಿಡುಗಡೆ ಹೊಂದಿದರು. ಮತ್ತೆ ಕೆಲಕಾಲ ಬಂಧನಕ್ಕೊಳಗಾಗಿ ಬಿಡುಗಡೆ ಹೊಂದಿದರು."[೧] ಭಿನ್ನಾಭಿಪ್ರಾಯವಿದ್ದರೂ ಬೋಸರು ಗಾಂಧೀಜಿಯವರನ್ನು ಹಲವಾರು ಸಲ ಭೇಟಿಮಾಡಿ ಸ್ವಾತಂತ್ರ್ಯ ಹೋರಾಟ ಕುರಿತು ಚರ್ಚಿಸಿದರು. ೧೯೩೦ರ ದಶಕದಲ್ಲಿ ಜರ್ಮನಿ, ಇಟಲಿ, ಐರ್ಲೆಂಡ್, ಬರ್ಲಿನ್ ಮುಂತಾದ ಕಡೆ ಭೇಟಿ ನೀಡಿ ದೇಶದ ಹೊರಗೆ ಸ್ವಾತಂತ್ರ್ಯ ಚಳುವಳಿಯನ್ನು ತೀವ್ರಗೊಳಿಸಿದರು. ಸುಭಾಷ್‌ರು ಗಾಂಧೀವಾದಿಗಳ ತತ್ವದಿಂದ ಬೇಸರಗೊಂಡು ಅಧಿವೇಶನದ ಅಧ್ಯಕ್ಷ ಪದವಿಗೆ ರಾಜೀನಾಮೆ ನೀಡಿದರು. ಹಾಗೂ ಉಗ್ರವಾದಿಗಳ

---

೧. ಭಾರತ ಸ್ವಾತಂತ್ರ್ಯ ಹೋರಾಟಗಾರರು (ಮಹಾಚೇತನಗಳು), ಪು. ೮.

ಫಾರ್ವರ್ಡ್ ಬ್ಲಾಕ್ ಪಕ್ಷವನ್ನು ಸ್ಥಾಪಿಸಿದರು. ಆ ಪಕ್ಷದ ಸಮ್ಮೇಳನವು ೧೯೪೦ರ ಜೂನ್ ೧೮ ಮತ್ತು ೧೯ರಂದು ನಾಗಪುರದಲ್ಲಿ ನಡೆಯಿತು. ಈ ಸಂದರ್ಭದಲ್ಲೇ ಮುಂಬಯಿ ಕಾಂಗ್ರೆಸ್ ಸಮಿತಿಯಲ್ಲಿ ಬ್ರಿಟಿಷರೇ ಭಾರತಬಿಟ್ಟು ತೊಲಗಿ ಗೊತ್ತುವಳಿ ಅಂಗೀಕಾರವಾಯಿತು.

ಸುಭಾಷ್‌ರು ಇಟಲಿಯಲ್ಲಿ ಸ್ವಾತಂತ್ರ್ಯ ಭಾರತ ಸಂಘ ಸ್ಥಾಪಿಸಿದರು. ಅನಂತರ ಜರ್ಮನಿಯಲ್ಲಿ "ಇಂಡಿಯನ್ ನ್ಯಾಷನಲ್ ಆರ್ಮಿ" (ಐಎನ್‌ಎ) ಉದಯಕ್ಕೆ ಕಾರಣರಾದರು. ಈ ಸೈನ್ಯದಲ್ಲ ಹನ್ನೆರಡು ಸಾವಿರ ಸೈನಿಕರಿದ್ದರು. ೧೯೪೩ ಜುಲೈ ೪ರಂದು ನೇತಾಜಿ ಸುಭಾಷ್ ಚಂದ್ರ ಬೋಸ್‌ರವರು ಸ್ವತಂತ್ರ್ಯ ಭಾರತೀಯ ಸೇನೆ ಕಟ್ಟಿ ತೀವ್ರಗತಿಯ ಹೋರಾಟವನ್ನು ಮುಂದುವರಿಸಿದರು. ಎಲ್ಲೆಲ್ಲೂ ಹುರುಪು, ಉತ್ಸಾಹ. ಆದರೆ ೧೯೪೫ರ ಆಗಸ್ಟ್ ೧೮ರಂದು ಟೋಕಿಯೋಗೆ ಹೋಗುವ ಮಾರ್ಗ ಮಧ್ಯದಲ್ಲಿ ವಿಮಾನಾಪಘಾತದಲ್ಲಿ ಸಾವನ್ನು ಹೊಂದಿರುವ ಸುದ್ಧಿ ಎಲ್ಲರನ್ನೂ ದಿಙ್ಮೂಢರನ್ನಾಗಿ ಮಾಡಿತು. ಆ ಸಾವು ನಿಗೂಢವಾಗಿ ಉಳಿಯಿತು.

"ದಕ್ಷಿಣ ಆಫ್ರಿಕೆಯಿಂದ ಇಂಗ್ಲೆಂಡಿಗೆ ತೆರಳಿದ ಗಾಂಧೀಜಿಯವರು ೧೯೧೫ರಲ್ಲಿ ಭಾರತಕ್ಕೆ ಮರಳಿದರು. ಈ ಸಂದರ್ಭದಲ್ಲಿ ಇಲ್ಲಿನ ರಾಜಕೀಯ ಪರಿಸ್ಥಿತಿ ಪ್ರೋತ್ಸಾಹಕಾರಿಯೇನೂ ಆಗಿರಲಿಲ್ಲ ಭಯೋತ್ಪಾದಕ ಚಟುವಟಿಕೆಗಳು ಹಾಗೂ ಭಾಷಣ ಇವಿಷ್ಟೇ ದೇಶಾಭಿಮಾನಿಗಳೆಂದೆನಿಸಿಕೊಂಡವರ, ಚಟುವಟಿಕೆಗಳಾಗಿದ್ದವು.

ತೀವ್ರಗಾಮಿ ನಾಯಕರೆಂದು ಗುರುತಿಸಲ್ಪಟ್ಟಿದ್ದ ತಿಲಕರು ಜೈಲುವಾಸ ಅನುಭವಿಸಿ ಹೊರಬಂದು ಒಂದುರೀತಿ ಅಶಕ್ತರಾಗಿದ್ದರು. ಪಂಜಾಬಿನ ಧುರೀಣ ಲಾಲಾ ಲಜಪತರಾಯ್ ಹದ್ದು ಪಾರಿನ ಶಿಕ್ಷೆಗೊಳಗಾಗಿದ್ದರು. ಮಹರ್ಷಿ ಅರವಿಂದರು ರಾಜಕೀಯ ನಿವೃತ್ತಿ ಹೊಂದಿ ಪಾಂಡಿಚೇರಿಯಲ್ಲಿ ನೆಲೆಸಿದ್ದರು. ಸೌಮ್ಯವಾದಿ ನಾಯಕರಾಗಿದ್ದ ಗೋಖಲೆ ಮೊದಲಾದವರು ಸ್ವಲ್ಪಮಟ್ಟಿಗೆ ಪ್ರಭಾವ ಹೊಂದಿದ್ದರೂ ಸಹ ಈ ಜನರನ್ನು ಹೋರಾಟಕ್ಕೆ ಸುಸಂಘಟಿಸುವ ಪ್ರಯತ್ನಗಳು ನಡೆದಿರಲಿಲ್ಲ.

ಇದಕ್ಕೆ ಮೊದಲು ೧೮೮೫ರಲ್ಲಿ ಸ್ಥಾಪಿತಗೊಂಡಿದ್ದ ಭಾರತದ ರಾಷ್ಟ್ರೀಯ ಕಾಂಗ್ರೆಸ್ ಸಂಸ್ಥೆ ಬ್ರಿಟಿಷ್ ಆಡಳಿತ ವ್ಯವಸ್ಥೆಯ ಲೋಪಗಳನ್ನು ಎತ್ತಿ ತೋರಿಸುವಷ್ಟು ಸಮರ್ಥವಾಯಿತು. ಲಾರ್ಡ್‌ಕರ್ಜನ್‌ನ ಆಡಳಿತ ಕಾಲದಲ್ಲಿ ನಡೆದ "ವಂಗಭಂಗ" ಚಳುವಳಿ ಭಾರತೀಯರಲ್ಲಿ ರಾಷ್ಟ್ರೀಯ ಭಾವನೆ ಜಾಗ್ರತಗೊಳಿಸಿತು. ಮುಂದೆ

ಕಾಂಗ್ರೆಸ್ಸಿನಲ್ಲಿ ಸೌಮ್ಯವಾದಿ ಹಾಗೂ ತೀವ್ರವಾದಿಗಳೆಂಬ ಎರಡು ಗುಂಪುಗಳಾದವು. ಸೌಮ್ಯವಾದಿಗಳ ಗುಂಪಿಗೆ ಗೋಖಲೆಯವರು ಹಾಗೂ ತೀವ್ರಗಾಮಿಗಳ ಗುಂಪಿಗೆ ಲೋಕಮಾನ್ಯತಿಲಕ್ ಅವರು ನಾಯಕರಾಗಿದ್ದರು.

"ತಿಲಕರು ದೇಶದಾದ್ಯಂತ ಸ್ವರಾಜ್ಯ ಘೋಷಣೆಯ ಉಗ್ರ ಚಳುವಳಿಯನ್ನು ಘೋಷಿಸಿದರು. ಅವರ "ಕೇಸರಿ" ಹಾಗೂ ಅರವಿಂದ ಘೋಷರ "ವಂದೇಮಾತರಂ" ಪತ್ರಿಕೆಗಳು ಜನರಲ್ಲಿ ಸ್ಫೂರ್ತಿಯುಕ್ಕಿಸುವ ಕಾರ್ಯ ಕೈಗೊಂಡದ್ದವು. "ಸ್ವರಾಜ್ಯ ನನ್ನ ಜನ್ಮಸಿದ್ಧ ಹಕ್ಕು" ಎಂಬ ತಿಲಕರ ಘೋಷಣೆ ಭಾರತೀಯರಲ್ಲಿನ ಚೈತನ್ಯದೊಡನೆ ಕೆಚ್ಚನ್ನು ಮೂಡಿಸಿತು. ಭಾರತದಲ್ಲಿ ಬ್ರಿಟಿಷರ ಆಡಳಿತ ಕೊನೆಗಾಣಿಸಲು ವಿದೇಶಿ ವಸ್ತುಗಳ ದಹನ ಚಳುವಳಿಯನ್ನು ತಿಲಕರು ಸಂಘಟಿಸಿದರು. ಈ ಹಿನ್ನೆಲೆಯಲ್ಲಿ ದೇಶದಾದ್ಯಂತ ಉಗ್ರವಾದ ಚಟುವಟಿಕೆಗಳು ತೀವ್ರಗೊಂಡವು. ಈ ಚಟುವಟಿಕೆಗಳನ್ನು ಹತ್ತಿಕ್ಕಲು ರಾಜದ್ರೋಹದ ಅಪಾದನೆಯನ್ನ ಹೊರಿಸಿ ತಿಲಕರನ್ನು ಬಂಧಿಸಲಾಯಿತಲ್ಲದೆ ಆರು ವರ್ಷಗಳ ಶಿಕ್ಷೆ ವಿಧಿಸಲಾಯಿತು. ಇದರಿಂದ ತೀವ್ರವಾದಿಗಳ ಚಳುವಳಿಗೆ ಹೊಡೆತ ಬಿದ್ದಿತು."[೧]

ಮೊದಲ ಮಹಾಯುದ್ಧ ಆರಂಭವಾದ ಕಾಲಕ್ಕೆ ೧೯೧೪ ರ ಮೇ ತಿಂಗಳಿನಲ್ಲಿ ತಿಲಕರ ಬಿಡುಗಡೆಯಾಯಿತು. ಪತ್ನಿ ಇಲ್ಲದ ಮನೆ ಕಂಡು ಮರುಗಿದರು. ಸ್ವಾತಂತ್ರ್ಯ ಹೋರಾಟದ ಸಾಧ್ಯತೆಗಳನ್ನು ತೀವ್ರಗೊಳಿಸಿದರು. ಆ ಫಲವಾಗಿ ೧೯೧೬ ರಲ್ಲಿ ಅನಿಬೆಸೆಂಟರ ಸಹಾಯದಿಂದ "ಹೋಮ್‌ರೂಲ್ ಚಳುವಳಿ" ಆರಂಭವಾಯಿತು. "ಸ್ವರಾಜ್ಯ ನನ್ನ ಜನ್ಮಸಿದ್ಧ ಹಕ್ಕು" ಅದನ್ನು ಪಡೆದೇ ಪಡೆಯುತ್ತೇನೆ ಎಂಬುದು ತಿಲಕರ ಮೂಲ ಮಂತ್ರವಾಯಿತು. ಸ್ವಾತಂತ್ರ್ಯ ಹೋರಾಟವನ್ನು ತೀವ್ರಗೊಳಿಸಲು ದೇಶದ ಉದ್ದಗಲ ತಿರುಗಿದರು. ವಿದೇಶಗಳಲ್ಲೂ ಸ್ವಾತಂತ್ರ್ಯ ಕುರಿತಂತೆ ಉಪನ್ಯಾಸಗಳನ್ನು ನೀಡಿದರು. ಹೋರಾಟದ ಹಾದಿಯಲ್ಲಿ ತಮ್ಮ ಆರೋಗ್ಯ ಹದಗೆಟ್ಟದನ್ನು ಹೆಚ್ಚು ಗಮನಕ್ಕೆ ತಂದುಕೊಳ್ಳಲಿಲ್ಲ. ೧೯೨೦ ಆಗಸ್ಟ್ ಒಂದರಂದು ಉಲ್ಬಣಿಸಿದ ವಿಷಮಶೀತ ಜ್ವರದಿಂದ ನಿಧನರಾದರು.

"ಭಗತ್‌ಸಿಂಗ್" – ಇವರು ಜಲಿಯನ್ ವಾಲಿಬಾಗ್ ದುರಂತ ಘಟನೆಯಿಂದ ದುಃಖಿತನಾದ ಭಗತ್‌ಸಿಂಗ್ ಗಾಂಧೀಜಿಯ ಅಸಹಕಾರ ಚಳುವಳಿಯಲ್ಲಿ

---

೧. ಮಹಾತ್ಮಗಾಂಧಿ ಜೀವನ ಚರಿತ್ರೆ ಮತ್ತು ಸಾಧನೆಗಳು, ಶರತ ಕಿದಿಯೂರ, ಪು. ೩೬.

ಭಾಗವಹಿಸಿದರು. ಅಂತೆಯೇ ಅನೇಕ ವಿದ್ಯಾರ್ಥಿಗಳು ಶಾಲಾಕಾಲೇಜುಗಳನ್ನು ಬಹಿಷ್ಕರಿಸಿ ಚಳುವಳಿಯಲ್ಲಿ ಭಾಗವಹಿಸಿದರು. ಗಾಂಧೀಜಿಯವರಿಂದ ಪ್ರಭಾವಿತನಾದ ಭಗತ್‌ಸಿಂಗ್ ಯಾವಾಗಲೂ ಖಾದಿ ಧರಿಸುತ್ತಿದ್ದರು. ಕ್ರಾಂತಿಕಾರಿ ಮನೋಭಾವದ ಭಗತ್‌ಸಿಂಗ್ ಚಳುವಳಿಯನ್ನು ನಿಲ್ಲಿಸಲಿಲ್ಲ. ಗುಪ್ತವಾಗಿ ಉಗ್ರರೀತಿಯಲ್ಲಿ ಮುಂದುವರಿಸಿದರು. ದೇಶದ ಸ್ವಾತಂತ್ರ್ಯ ಹೋರಾಟಕ್ಕಾಗಿ ಕ್ರಾಂತಿಕಾರಿ ಮಾರ್ಗವನ್ನು ಅನುಸರಿಸಿದ ಭಗತ್‌ಸಿಂಗ್ ಆಜನ್ಮ ಬ್ರಹ್ಮಚಾರಿಯಾಗಲು ನಿರ್ಧರಿಸಿದರು. ಚಂದ್ರಶೇಖರ್ ಅಜಾದ್, ಸುಖದೇವ್, ಶಿವವರ್ಮ, ಲಾಲಾ ಲಜಪತ್‌ರಾಯ್ ಮುಂತಾದವರ ಸಂಪರ್ಕದಿಂದ ಭಗತ್‌ಸಿಂಗ್ ಹೋರಾಟದಲ್ಲಿ ತೀವ್ರಗತಿಯಲ್ಲಿ ಮುಂದುವರಿದನು. ಲಜಪತ್‌ರಾಯ್ ಬ್ರಿಟಿಷರ ದೌರ್ಜನ್ಯಕ್ಕೆ ಬಲಿಯಾದಾಗ, ಭಗತ್‌ಸಿಂಗ್ ತಳಮಳಗೊಂಡನು. ಮಾರುವೇಷದಲ್ಲಿ ದೇಶದ ನಾನಾಕಡೆ ಸಂಚರಿಸಿ ಜನಜಾಗೃತಿಯನ್ನುಂಟು ಮಾಡಿದನು. ಹೀಗೆ ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರು.

'ಆಚಾರ್ಯ ವಿನೋಬಭಾವೆ' (೧೮೯೫-೧೯೮೨) - ವಿನೋಬಭಾವೆ ಎಂದೊಡನೆ ನಮಗೆ ನೆನಪಾಗುವುದು ಭೂದಾನ ಚಳುವಳಿ. ಭೂದಾನ ಚಳುವಳಿಗಾಗಿ ತಮ್ಮ ಬದುಕನ್ನೇ ಮುಡುಪಿಟ್ಟು ಸಾರ್ಥಕ ಜೀವನ ನಡೆಸಿದ ವಿನೋಬಭಾವೆ ಹುಟ್ಟಿದ್ದು ಮಹಾರಾಷ್ಟ್ರದ ಕೋನಕನ್ ಪ್ರಾಂತ್ಯದ ಕಲಾಬಾ ಜಿಲ್ಲೆಯ ಗಗೋಲಿ ಎಂಬ ಗ್ರಾಮದಲ್ಲಿ ೧೮೯೫ರ ಸೆಪ್ಟೆಂಬರ್ ೧೧ರಂದು ತಾಯಿ ರುಕ್ಮಿಣೀದೇವಿ ಕರ್ನಾಟಕದವರು. ತಂದೆ ನರಹರಿ ಶಂಭೂರಾವ್, ವಿಚಾರವಾದಿ. ಇವರೇ ಹಿರಿಯ ಮಗನಾಗಿದ್ದರು. ಚಿಕ್ಕಂದಿನಲ್ಲಿ ಸಂಸ್ಕೃತ ಹಾಗೂ ವೇದವನ್ನು ಆಳವಾಗಿ ಅಭ್ಯಾಸ ಮಾಡುತ್ತಾರೆ. ಆಗಿನ ಕಾಲದ ಬ್ರಿಟಿಷ್ ಶಿಕ್ಷಣ ಸಂಸ್ಥೆಯಲ್ಲಿ ವಿನೋಬಭಾವೆಯವರಿಗೆ ನಂಬಿಕೆ ಇರಲಿಲ್ಲ. ಶಾಲಾ-ಕಾಲೇಜುಗಳನ್ನು ಗುಲಾಮರ ಮನೆಗಳು ಎಂಬುದಾಗಿ ಕರೆಯುತ್ತಿದ್ದರು. ಬರೋಡಾದ ಪ್ರಸಿದ್ಧ ಗ್ರಂಥಾಲಯದಲ್ಲಿ ಕುಳಿತು ಅಭ್ಯಾಸ ಮಾಡಿದರು. ೧೯೧೬ರಲ್ಲಿ ಮೆಟ್ರಿಕ್ಯುಲೇಷನ್ ಪರೀಕ್ಷೆ ಪಾಸುಮಾಡಿ ಬ್ರಹ್ಮವಿದ್ಯೆ ಪಡೆಯಲು ಮನೆ ತೊರೆದು ಹೊರಟರು.

ವಿನೋಬಭಾವೆ ಗಾಂಧೀಜಿ ಜೊತೆ ಪತ್ರ ವ್ಯವಹಾರ ನಡೆಸಿದರು ಹಾಗೂ ಗಾಂಧೀಜಿಯ ಆಹ್ವಾನದ ಮೇರೆಗೆ ಅಹಮದಾಬಾದಿನಲ್ಲಿರುವ ಸಬರಮತಿ ಆಶ್ರಮ ಸೇರಿದರು. ಆ ವೇಳೆಗಾಗಲೇ ಸಂಸ್ಕೃತವನ್ನು ಆಳವಾಗಿ ಅಭ್ಯಾಸಮಾಡಿದ್ದ ಹಾಗೂ

ದೇಶದ ಇನ್ನಿತರ ಹದಿನಾರು ಭಾಷೆಗಳನ್ನು ಓದಬಲ್ಲ, ಬರೆಯಬಲ್ಲ ಸಾಮರ್ಥ್ಯ ಪಡೆದಿದ್ದ ವಿನೋಬಭಾವೆ ಗಾಂಧೀಜಿ ಪ್ರಭಾವದಿಂದ ಟಾಯ್‌ಲೆಟ್ ಸ್ವಚ್ಛಗೊಳಿಸುವ ಕಾರ್ಯಕ್ಕೆ ಮುಂದಾದರು. ಆಶ್ರಮದ ಇನ್ನಿತರ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ಸ್ವಲ್ಪಕಾಲ ಆಶ್ರಮದಲ್ಲಿ ಸೇವೆಮಾಡಿ, ಮತ್ತೆ ಒಂದು ವರ್ಷಕಾಲ ಇನ್ನೂ ಚೆನ್ನಾಗಿ ಸಂಸ್ಕೃತವನ್ನು ಅಭ್ಯಾಸ ಮಾಡುವ ದೃಷ್ಟಿಯಿಂದ ತಮ್ಮ ತಾತ ಶಂಭೂರಾವ್ ಬಳಿ ಊರಿನಲ್ಲಿ ನೆಲೆಸಿದರು. ಆ ಸಮಯದಲ್ಲಿ ಒಮ್ಮೆ ಲೋಕಮಾನ್ಯ ಬಾಲಗಂಗಾಧರ ತಿಲಕರ ಭೇಟಿಯಾಗಿ, ಅವರಿಂದ ತುಂಬಾ ಪ್ರಭಾವಿತರಾದರು. ಮತ್ತೆ ವಿನೋಬಭಾವೆ ಸಬರಮತಿ ಆಶ್ರಮ ಸೇರುವ ಹೊತ್ತಿಗೆ ೧೯೧೮ರಲ್ಲಿ ಅವರ ತಾಯಿ ನಿಧನ ಹೊಂದಿದರು.

ದೇಶದ ಸ್ವಾತಂತ್ರ್ಯ ಚಳುವಳಿಯಲ್ಲಿ ತಮ್ಮನ್ನು ತಾವು ತೀವ್ರವಾಗಿ ತೊಡಗಿಸಿಕೊಂಡಿದ್ದ ವಿನೋಬಭಾವೆಯವರು ೧೯೨೩ರಿಂದ ೧೯೪೩ರ ಅವಧಿಯಲ್ಲಿ ಅನೇಕ ಸಲ ಸೆರೆಮನೆ ವಾಸ ಅನುಭವಿಸಬೇಕಾಯಿತು. ಆ ಅವಧಿಯಲ್ಲಿ ಆತ್ಮ ಶಕ್ತಿಯನ್ನು ಗಟ್ಟಿಗೊಳಿಸಿಕೊಂಡು ಓದು ಮತ್ತು ಬರಹದಲ್ಲಿ ಸಮಯವನ್ನು ವಿನಿಯೋಗಿಸಿದರು. ಮರಾಠಿ ಭಾಷೆಯಲ್ಲಿ ಭಗವದ್ಗೀತೆಯ ಆವೃತ್ತಿಯನ್ನು ಉಪನಿಷತ್ತುಗಳ ಅಧ್ಯಯನ ಕೃತಿಯನ್ನು ಪ್ರಕಟಿಸಿದರು. ವಿನೋಬಭಾವೆಯವರ ಗೀತೆಯನ್ನು ಕುರಿತ ವ್ಯಾಖ್ಯಾನ ಪುಸ್ತಕ ಹೆಸರುವಾಸಿಯಾಗಿದೆ.

ಉಪ್ಪಿನ ಸತ್ಯಾಗ್ರಹ, ಅಸಹಕಾರ ಚಳವಳಿ ಸ್ವಾತಂತ್ರ್ಯದ ಹಲವಾರು ಅಹಿಂಸಾತ್ಮಕವಾದ ಹೋರಾಟಗಳಲ್ಲಿ ಭಾವೆಯವರು ಭಾಗವಹಿಸಿದರು. ಗಾಂಧೀಜಿಯ ಅಹಿಂಸಾ ಮಾರ್ಗದಲ್ಲಿ ಅಚಲವಾದ ನಂಬಿಕೆವುಳ್ಳವರಾದ ಭಾವೆಯವರು ಜೀವನದುದ್ದಕ್ಕೂ ಪಾಲಿಸಿದರು. ಅಹಿಂಸಾವಾದಿ ಗಾಂಧೀಜಿ ಗುಂಡೇಟಿಗೆ ಬಲಿಯಾದಾಗ ಭಾವೆಯವರಿಗೆ ೫೩ ವರ್ಷ. ಗಾಂಧೀಜಿಯ ನಿಧನದಿಂದ ತೀವ್ರವಾಗಿ ನೊಂದ ಭಾವೆಯವರು, ಗಾಂಧೀಜಿ ತತ್ವಮಾರ್ಗದಲ್ಲೇ ಮುಂದುವರಿದರು. ೧೯೫೧ರಲ್ಲಿ ಭೂದಾನ ಚಳವಳಿಯ ಪಾದಯಾತ್ರೆಯನ್ನು ಕನ್ಯಾಕುಮಾರಿಗೆ ಕೈಗೊಂಡರು. ಭಾವೆಯವರ ಭೂದಾನ ಚಳುವಳಿಯ ಪಾದಯಾತ್ರೆಯಿಂದ ವಿವಿಧ ಕಡೆಗಳಲ್ಲಿ ಒಟ್ಟು ಮೂವತ್ತೈದು ಸಾವಿರ ಎಕರೆಯನ್ನು ಭೂಮಾಲಿಕರು ಭೂಹೀನರಿಗೆ ದಾನ ಮಾಡಿದರು.

೧೯೫೮ರಲ್ಲಿ ಭಾವೆಯವರು ಕರ್ನಾಟಕಕ್ಕೆ ಪಾದಯಾತ್ರೆ ಬಂದಿದ್ದಾಗ, ಕವಿ ಕುವೆಂಪುರವರನ್ನು ಭೇಟಿಯಾಗಿದ್ದರು. ಹಾಗೆಯೇ ದೇಶದ ಉದ್ದಗಲಕ್ಕೂ ಸಂಚರಿಸಿದಾಗ, ಆಯಾ ಪ್ರದೇಶದ ವಿವಿಧ ಕ್ಷೇತ್ರಗಳ ಮಹತ್ವದ ವ್ಯಕ್ತಿಗಳನ್ನು ಭೇಟಿ ಮಾಡಿದರು. ಭಾವೆಯವರ ಚಳವಳಿಗೆ ಜಯಪ್ರಕಾಶ್ ನಾರಾಯಣ್, ಜವಾಹರ್‌ಲಾಲ್ ನೆಹರು, ಡಾ.ರಾಜೇಂದ್ರಪ್ರಸಾದ್, ಗೋವಿಂದವಲ್ಲಭಪಂತ್, ಗುಲ್‌ಜಾರಿಲಾಲ್‌ನಂದ, ಜಯಚಾಮರಾಜ ಒಡೆಯರ್, ಮೊರಾರ್ಜಿದೇಸಾಯಿ, ಅಬ್ದುಲ್ ಗಫರ್‌ಖಾನ್ ಮುಂತಾದ ಜನನಾಯಕರು ಪ್ರೋತ್ಸಾಹ ನೀಡಿದರು. ಹಲವಾರು ಜನನಾಯಕರಿಗೆ ಮಾರ್ಗದರ್ಶಿಯಾಗಿದ್ದ ಭಾವೆಯವರು ೧೯೮೨ ನವೆಂಬರ್ ೧೫ರಂದು ನಿಧನ ಹೊಂದಿದರು.

ಸರದಾರ್ ವಲ್ಲಭಬಾಯಿ ಪಟೇಲ್-(೧೮೭೫-೧೯೫೦)

ಎಲ್ಲರಿಗೂ ಗೊತ್ತಿರುವ ಉಕ್ಕಿನ ಮಾನವನಲ್ಲಿ
ಎಲ್ಲರಿಗೂ ಗೊತ್ತಿರುವ ಅಚಲ ಶಕ್ತಿ ಕಂಭವಿಲ್ಲಿ
ಶತ್ರುಗಳು ನಾಶಗೊಳಿಸಲಾಗದೆ ಪಟೇಲ್
ದೇಶದಭಿಮಾನ
ಬೌಧಿಕತೆ ಪರ್ವದೆತ್ತರ
ಸಾಗರದಂತೆ ಹೃದಯ ವಿಶಾಲ
ಕಾಲುಗಳು ಭೂಮಿಯಲ್ಲಿ ದೃಢವಾಗಿ ನಿಂತಿದೆ.
ದೇಶದ ಅಂತರ್‌ದೃಷ್ಟಿ ಪಟೇಲ್
ಸಮಸ್ಯೆಯ ಎಲ್ಲಾ ಮಗ್ಗಲುಗಳನ್ನು ಪರೀಕ್ಷಿಸುವ
ಸುತ್ತೆಲ್ಲದ ರಹಸ್ಯಗಳನ್ನು ಬಯಲುಗೊಳಿಸುವ
ಬಚ್ಚಿಡಲು, ಹಿಂದೆ ಸರಿಯಲು ವಲ್ಲದ
ಕಹಿಸತ್ಯವನ್ನೂ ಮಾತನಾಡುವ
ದೇಶದ ಹೆದರದ ನಾಲಗೆ ಪಟೇಲ್

ಜನನ ಗುಜರಾತ್ ರಾಜ್ಯದ ಕರಮಸದ ಎಂಬ ಊರಲ್ಲಿ ತಂದೆ ಝವೇರಬಾಯಿ ಮತ್ತು ತಾಯಿ ಲಾಡಬಾಯಿ. ತಂದೆ-ತಾಯಿಯವರಿಗೆ ಐದು ಜನ ಗಂಡು ಮಕ್ಕಳಲ್ಲಿ ಪಟೇಲ್ ನಾಲ್ಕನೆಯವರು ತಂದೆ ಬೇಸಾಯಗಾರ. ದೇಶ ಪ್ರೇಮಿಗಳ ಕುಟುಂಬ.

೧೯೧೬ರಲ್ಲಿ ಪಟೇಲರಿಗೆ ಗುಜರಾತಿನಲ್ಲಿ ಗಾಂಧೀಜಿಯವರ ಸಂಪರ್ಕ-ವಾಯಿತು. ಗಾಂಧೀಜಿಯವರನ್ನು ಎರಡನೇ ಸಲ ಭೇಟಿ ಮಾಡಿದಾಗ, ಅವರ ಪರಮಶಿಷ್ಯರಾದರು. ಆ ನಂತರ ಪಟೇಲರು ವಕೀಲವೃತ್ತಿಯಿಂದ ಸಾರ್ವಜನಿಕ ವೃತ್ತಿಗೆ ಸಂಪೂರ್ಣವಾಗಿ ತೊಡಗಿಸಿಕೊಂಡರು. ಅಹಮದಾಬಾದಿನ ನಗರ ಸಭೆಯ ಸದಸ್ಯರಾಗಿ, ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದರು.

ಸ್ವಾತಂತ್ರ್ಯ ಹೋರಾಟವನ್ನು ತೀವ್ರಗೊಳಿಸುವ ನಿಟ್ಟಿನಲ್ಲಿ ಕಂದಾಯ ನಿರಾಕರಣೆ ಕಾರ್ಯಕ್ರಮ ನಾಯಕತ್ವ ವಹಿಸಿಕೊಂಡರು. ಅದು ರೈತರು ಬೆಳೆ ಇಲ್ಲದೆ ಕಂಗಾಲಾಗಿದ್ದ ಕಾಲ. ಪಟೇಲರು ಆಗ ಬ್ರಿಟಿಷ್ ಸರಕಾರಕ್ಕೆ ಪತ್ರ ಬರೆದರು. 'ಕಂದಾಯ' ಕೊಡಲು ಕಷ್ಟವಾಗುತ್ತದೆ. ದಯವಿಟ್ಟು ಪರಿಶೀಲಿಸಿ, ಪರಿಶೀಲಿಸದಿದ್ದರೆ ನಾವು 'ಕಂದಾಯ' ಕೊಡಲೇಬಾರದೆಂದು ನಿರ್ಧಾರ ಮಾಡಬೇಕಾಗುತ್ತದೆ.

ಸರಕಾರ ಪತ್ರದ ಮನವಿಗೆ ಬೆಲೆಕೊಡದೇ ಇರುವಾಗ ಪಟೇಲರು ಸಿಡಿಲಿನಂತೆ ಆರ್ಭಟಿಸಿ, ಬಾಡೋಲಿ ಸತ್ಯಾಗ್ರಹವನ್ನು ಚುರುಕುಗೊಳಿಸಿದರು. ರೈತರಲ್ಲಿ ಮಿಂಚಿನ ಸಂಚಾರವಾಯಿತು. ಆಗ ಮಹಾತ್ಮಗಾಂಧಿ ಬಾಡೋರ್ಲಿಯ ಸರದಾರ ಭಾರತದ ಸರದಾರನಾದನೆಂದು ಅಭಿಮಾನದ ಮಾತನಾಡಿದರು.

ಗಾಂಧೀಜಿ ೧೯೩೦ರಲ್ಲಿ ಆರಂಭಿಸಿದ ಉಪ್ಪಿನ ಸತ್ಯಾಗ್ರಹದಲ್ಲಿ ಪೂರ್ವಸಿದ್ಧತಾ ಕಾರ್ಯದ ಜವಾಬ್ದಾರಿಯನ್ನು ವಹಿಸಿಕೊಂಡು, ಕಾರ್ಯನಿರ್ವಹಿಸಿ ಅದರ ಯಶಸ್ಸಿಗೆ ಕಾರಣರಾದರು.

ಕರಾಚಿಯಲ್ಲಿ ೧೯೩೧ರಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷತೆ ವಹಿಸಿದ್ದ ಪಟೇಲರು ಅಧಿವೇಶನದ ನಂತರ ದೇಶಸ್ವಾತಂತ್ರ್ಯ ಪಡೆಯುವುದಕ್ಕೆ ಸಂಬಂಧಿಸಿದಂತೆ ಲಂಡನ್‌ನಲ್ಲಿ ಕರೆದಿದ್ದ ಸಭೆಯಲ್ಲಿ ಭಾಗವಹಿಸಿದ್ದರು.

ಇಷ್ಟೊತ್ತಿಗಾಗಲೀ ಗಾಂಧೀಜಿ 'ಮಾಡು ಇಲ್ಲವೆ ಮಡಿ' ಎಂಬ ಮಂತ್ರ ದೀಕ್ಷೆಯನ್ನು ದೇಶದ ಜನತೆಗೆ ಕೊಟ್ಟಿದ್ದರು. ಪಟೇಲರು ೧೯೪೨ರಲ್ಲಿ ಮುಂಬಯಿನಲ್ಲಿ

ನಡೆದ ಕಾಂಗ್ರೆಸ್ ಸಭೆಯಲ್ಲಿ "ಕ್ವಿಟ್ ಇಂಡಿಯಾ" ಚಳುವಳಿಗೆ ನಾಂದಿ ಹಾಡಿದರು. ಅದು ಎರಡನೇ ಮಹಾಯುದ್ಧದ ಕಾಲ. ಈ ಮಧ್ಯೆ ಹಿಂದೂ - ಮುಸ್ಲಿಂ ಮನಸ್ತಾಪ ಬಿಗಡಾಯಿಸಿತು. ಗಾಂಧೀಜಿ ಈ ಪರಿಸ್ಥಿತಿಯಲ್ಲಿ ತುಂಬಾ ಪರಿತಪಿಸಿದರು. ಬ್ರಿಟಿಷರಿಗೆ ದೇಶವನ್ನು ಹರಿದುಹಂಚಿ ಸ್ವಾತಂತ್ರ್ಯವನ್ನು ಕೊಡುವ ಉದ್ದೇಶವಿತ್ತು. ಹಾಗೇ ಮಾಡಿದರು. ದೇಶದ ೫೬೨ ಸ್ಥಳೀಯ ಸಂಸ್ಥಾನಗಳನ್ನು ಒಗ್ಗೂಡಿಸುವುದು ಮಹಾಸವಾಲಾಗಿತ್ತು. ಸರದಾರ್ ವಲ್ಲಭಬಾಯಿ ಪಟೇಲರ ನೇತೃತ್ವದಲ್ಲಿ ಸಂಸ್ಥಾನಗಳನ್ನು ಒಗ್ಗೂಡಿಸಲಾಯಿತು. ಸ್ವಾತಂತ್ರ್ಯ ಪಡೆಯುವ ಸಂದರ್ಭದಲ್ಲಿ ಕಾಂಗ್ರೆಸ್‌ನ ಅಧ್ಯಕ್ಷರಾಗಿದ್ದ ಪಟೇಲರಿಗೆ ಸ್ವಾತಂತ್ರ್ಯಭಾರತದ ಮೊದಲ ಪ್ರಧಾನಿಯಾಗುವ ಅರ್ಹತೆ ಮತ್ತು ಅವಕಾಶ ಎರಡು ಇದ್ದವು. ಆದರೆ ಗಾಂಧೀಜಿಗೆ ನೆಹರು ಮೇಲೆ ಅಪಾರವಾದ ವ್ಯಾಮೋಹವಿತ್ತು. ಆದ್ದರಿಂದ ಗಾಂಧೀಜಿ ಸೂಚನೆಮೇರೆಗೆ ಪಟೇಲರು ಗೃಹಮಂತ್ರಿಯಾಗಬೇಕಾಯಿತು. ಪಟೇಲರು ಪ್ರಧಾನಿಯಾಗಿದ್ದರೆ ಈ ದೇಶದ ಭವಿಷ್ಯ ಬೇರೆ ಮಜಲಿನಲ್ಲಿ ಸಾಗುತ್ತಿತ್ತು ಎಂಬುದು ಕೆಲವು ರಾಜಕೀಯ ವಿದ್ವಾಂಸರ ವಿಶ್ಲೇಷಣೆಯಾಗಿದೆ.

'ಲಾಲಾಲಜಪತ್‌ರಾಯ್' - ೧೮೬೫-೧೯೨೮' ಲಾಲಲಜಪತ್‌ರಾಯ್ ಹುಟ್ಟಿದ್ದು ಪಂಜಾಬಿನ ಫಿರೋಜಪುರ ಜಿಲ್ಲೆಯ ಧುಡಕೆ ಗ್ರಾಮದಲ್ಲಿ ೧೮೬೫ರಲ್ಲಿ ತಂದೆ ಮನಸಿ ರಾಧಾಕೃಷ್ಣ. ಅವರಿಗೆ ಉರ್ದುಭಾಷೆಯಲ್ಲಿ ಅಪಾರವಾದ ಪಾಂಡಿತ್ಯವಿತ್ತು. ಲೇಖಕರೂ ಆಗಿದ್ದರು.

ಕಾನೂನಿನಲ್ಲಿ ಪರಿಣತಿ ಪಡೆದ ಲಜಪತ್‌ರಾಯ್ ಸ್ವಲ್ಪ ಕಾಲ ಹಿಸ್ಸಾರ್ ಮತ್ತು ಲಾಹೋರಿನಲ್ಲಿ ವಕೀಲ ವೃತ್ತಿ ಮಾಡಿದರು. ಕಾಲೇಜು ಶಿಕ್ಷಣಕ್ಕಾಗಿ ಸಂಸ್ಥೆಯೊಂದನ್ನು ಲಾಹೋರಿನಲ್ಲಿ ಸ್ಥಾಪಿಸಿ, ಆ ಸಂಸ್ಥೆಯ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸಿದರು. ಬಾಲಗಂಗಾಧರ ತಿಲಕರ ಸ್ವಾತಂತ್ರ್ಯವನ್ನು ಜನ್ಮಸಿದ್ಧ ಹಕ್ಕು ಎಂಬ ಮಾತಿನಿಂದ ಪ್ರಭಾವಿತರಾಗಿ, ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡಿದ್ದರು.

ಲಾಲಾಲಜಪತ್‌ರಾಯ್‌ರವರು ತಾವು ಹುಟ್ಟಿ-ಬೆಳೆದ ನಾಡಿನ ಆಗುಹೋಗು-ಗಳಿಗೆ ವಿಶಿಷ್ಟ ರೀತಿಯಲ್ಲಿ ಸ್ಪಂದಿಸಿ ಶ್ರಮಿಸಿದ್ದರಿಂದ ಪಂಜಾಬಿನ ಸಿಂಹ, ಕೇಸರಿ ಎಂದು ಹೆಸರಾದರು. ದೇಶವಿದೇಶಗಳಲ್ಲಿ ಸ್ವಾತಂತ್ರ್ಯ ಹೋರಾಟಕ್ಕಾಗಿ ಸಂಘಟನೆಗಳನ್ನು ಸಜ್ಜುಗೊಳಿಸಿದರು. ಕಾಂಗ್ರೆಸ್ ಅಧಿವೇಶನಗಳಲ್ಲಿ ಹೋರಾಟದ ಭಾಷಣಗಳನ್ನು

ಮಾಡಿದರು. ಅವರು ವಿದೇಶದ ಪ್ರವಾಸದಿಂದ ದೇಶಕ್ಕೆ ಮರಳಿದಾಗ ಜಲಿಯನ್ ವಾಲಾಬಾಗ್ ಹತ್ಯಾಕಾಂಡ ಕರಾಳ ಛಾಯೆ (೧೯೧೯) ದೇಶದ ತುಂಬೆಲ್ಲಾ ಆವರಿಸಿತ್ತು.

"ಬ್ರಿಟಿಷರು ಭಾರತದಲ್ಲಿ ಸೈಮನ್ ಕಮೀಷನ್ ರಚಿಸಿದಾಗ, ಲಾಲಾಲಜಪತ್ ರಾಯ್‌ರವರು ತೀವ್ರವಾಗಿ ವಿರೋಧಿಸಿದರು. ವಿರೋಧ ಸಿಂಹಗರ್ಜನೆಯಾಗಿತ್ತು. ೧೯೨೮ರ ಅಕ್ಟೋಬರ್‌ನಲ್ಲಿ ಸೈಮನ್ ಕಮಿಷನ್ ಪ್ರತಿಭಟಿಸಲು ಲಾಲಾಲಜಪತ್‌ರಾಯ್ ಅವರ ನೇತೃತ್ವದಲ್ಲಿ ಬೃಹತ್ ಮೆರವಣಿಗೆ. ಬ್ರಿಟಿಷ್ ಸರ್ಕಾರದ ಪೊಲೀಸರಿಂದ ಲಾಠಿ ಪ್ರಹಾರ. ಲಾಠಿ ಏಟು ಲಾಲಾಲಜಪತ್‌ರಾಯ್‌ರವರಿಗೂ ಬಿತ್ತು. ಅದರಿಂದ ಚೇತರಿಸಿಕೊಳ್ಳಲಾಗದೆ ನವಂಬರ್ ೧೭ರಂದು ನಿಧನರಾದರು".[೧]

ಗಾಂಧೀಜಿಯವರ ತೀವ್ರವಾದ ಪ್ರಭಾವಕ್ಕೊಳಗಾಗಿದ್ದು ರಾಯ್‌ರವರು ಅಸಹಕಾರ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿ, ಅಸ್ಪೃಶ್ಯತಾ ನಿವಾರಣೆಯಲ್ಲಿ ತಮ್ಮನ್ನು ತಾವು ಬಹಳವಾಗಿ ತೊಡಗಿಸಿಕೊಂಡಿದ್ದನ್ನು ಮರೆಯುವಂತಿಲ್ಲ.

'ರಾಣಿಚೆನ್ನಮ್ಮ' ಬ್ರಿಟಿಷರ ವಿರುದ್ಧ ಹೋರಾಡಿ ಕಿತ್ತೂರಿನ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲು ಅಣಿಯಾದಳು. ಥ್ಯಾಕರೆಯು ಬ್ರಿಟಿಷ್ ಸೈನ್ಯದೊಡನೆ ಕಿತ್ತೂರಿನ ಕೋಟೆಯನ್ನು ಮುತ್ತಿದಾಗ, ಕ್ಷಣಾರ್ಧದಲ್ಲಿ ಕಿತ್ತೂರಿನ ಸೈನ್ಯ ಬ್ರಿಟಿಷ್ ಸೈನ್ಯದ ಮೇಲೆ ಎರಗಿತು. ಅಮಟೂರ ಬಾಳಪ್ಪನು ಥ್ಯಾಕರೆಗೆ ಗುಂಡುಹಾರಿಸಿದನು. ಅವನ ಜೊತೆಯಲ್ಲಿದ್ದ ಕ್ಯಾಪ್ಟನ್ ಬ್ಲ್ಯಾಕ್, ಲೆಫ್ಟಿನೆಂಟ್ ಡೆಯಟನ್, ಲೆಫ್ಟಿನೆಂಟ್ ಸಿವೆಲ್ ಸಹ ಹತರಾದರು. ಕಿತ್ತೂರಿನ ಆಂತರಿಕ ಭದ್ರತೆಗೆ ಕುತ್ತಾಗಿದ್ದ ದಿವಾನ ಕೊಣ್ಣೆರಮಲ್ಲಪ್ಪ, ವೀರಪ್ಪ ಮತ್ತು ಸರದಾರ ಮಲ್ಲಪ್ಪ ಅವರನ್ನು ಸೆರೆ ಹಿಡಿದು, ಕೋಟೆಯಲ್ಲಿ ಆನೆಯ ಕಾಲ್ತುಳಿತದಿಂದ ಸಾಯಿಸಲಾಯಿತು.

ವಿಜಯೋತ್ಸವದ ಮಧ್ಯೆಯೂ ರಾಣಿ ಚೆನ್ನಮ್ಮನಿಗೆ ಮುಂದಿನ ಕಷ್ಟದ ದಿನಗಳ ಅರಿವಿತ್ತು. ಅವಮಾನದಿಂದ ಬ್ರಿಟಿಷ್ ಕಂಪನಿ, ಕಾರ್ಯತಂತ್ರ ರೂಪಿಸುತ್ತದೆಂಬ ಮುಂದಾಲೋಚನೆ ಇತ್ತು. ಆದ್ದರಿಂದ ತುಂಬಾ ಎಚ್ಚರಿಕೆಯಿಂದಿರುವಂತೆ, ತನ್ನ ಅಧಿಕಾರಿಗಳಿಗೆ ಸೈನಿಕರಿಗೆ, ಪ್ರಜೆಗಳಿಗೆ ತಿಳಿಸಿದರು ಹಾಗೂ ಬ್ರಿಟಿಷರ ವಿರುದ್ಧ ಹೋರಾಡಲು ಅಕ್ಕಪಕ್ಕದ ಸಂಸ್ಥಾನಿಕರ ಸಹಾಯ ಕೇಳಿದಳು. ಆದರೆ, ನಿರೀಕ್ಷಿತ

---

೧. ಭಾರತ ಸ್ವಾತಂತ್ರ್ಯ ಹೋರಾಟಗಾರರು (ಮಹಾಚೇತನಗಳು), ಡಾ. ಸಿದ್ಧಗಂಗಯ್ಯ ಹೊಳತಾಳ್, ಪು. ೬೪.

ಬೆಂಬಲ ಸಿಗಲಿಲ್ಲ. ಅವರು ಬಲಗೊಂಡಿದ್ದ ಬ್ರಿಟಿಷ್ ಕಂಪನಿಯನ್ನು ಎದುರು ಹಾಕಿಕೊಳ್ಳಲು ತಯಾರಿರಲಿಲ್ಲ. ಸು. ೨೫,೦೦೦ ಸೈನ್ಯದೊಂದಿಗೆ ಚಾಪ್ಲಿನ್ ಕಿತ್ತೂರಿನ ಕೋಟೆಗೆ ಮುತ್ತಿಗೆ ಹಾಕಿ, ರಾಣಿ ಚೆನ್ನಮ್ಮ ಮತ್ತು ಇತರ ಪ್ರಮುಖರನ್ನು ಬಂಧಿಸಿದರು. ಬಂಧನದಲ್ಲಿ ಐದು ವರ್ಷ ಮಾನಸಿಕ ಕ್ಷೋಭೆಗಳಪಟ್ಟ ಚೆನ್ನಮ್ಮ ೧೮೨೪ ಫೆಬ್ರವರಿ ೧೨ರಂದು ನಿಧನಳಾದಳು.

"ಲಾಲಾಹರ್‌ದಯಾಳ್' – **೧೮೮೪–೧೯೩೯** – ಐ.ಸಿ.ಎಸ್ ಪರೀಕ್ಷೆ ಪಾಸ್ ಮಾಡಿದರೂ ಕೂಡ, ಸ್ವಾತಂತ್ರ್ಯ ಹೋರಾಟದ ಸೆಳೆತದಿಂದ ಕಷ್ಟಜೀವನ ಆಯ್ಕೆಮಾಡಿಕೊಂಡರು. 'Modern India' ಪತ್ರಿಕೆಗೆ ಬ್ರಿಟಿಷ್ ಸರ್ಕಾರದ ವಿರುದ್ಧ ಲೇಖನಗಳನ್ನು ಬರೆದರು. ಹಿಂದೂ ಮಹಾಸಭಾ ಸ್ಥಾಪನೆಗೂ ಕಾರಣರಾದರು.

'ಟಿಪ್ಪು ಸುಲ್ತಾನ್' – **೧೭೫೨–೧೭೯೯** – ಮೈಸೂರಿನ ಹುಲಿ ಎಂದು ಖ್ಯಾತಿ ಪಡೆದ ಟಿಪ್ಪುಸುಲ್ತಾನ್ ಹುಟ್ಟಿದ್ದು ಕೋಲಾರ ಜಿಲ್ಲೆಯ ದೇವನಹಳ್ಳಿಯಲ್ಲಿ ೧೭೫೨ರಲ್ಲಿ. ಮೈಸೂರು ರಾಜ್ಯವನ್ನು ಆಳಿದರು. ಮುಂದೆ ಟಿಪ್ಪು ಸುಲ್ತಾನ್ ಬ್ರಿಟಿಷರೊಡನೆ ಹಲವಾರು ಸಲ ಹೋರಾಡಬೇಕಾಯಿತು. ಅದರಲ್ಲಿ ಎರಡನೇ ಮೈಸೂರು ಯುದ್ಧವು ನಮ್ಮ ದೇಶದ ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡುವಂಥದ್ದು. ಯಾಕೆಂದರೆ ಆವರೆಗೆ ಏಷ್ಯಾಖಂಡದಲ್ಲಿ ತುರ್ಕಿಯನ್ನು ಬಿಟ್ಟರೆ, ಯಾರು ತುಂಬಾ ಪರಿಣಾಮಕಾರಿಯಾಗಿ ಎದುರಿಸಿರಲಿಲ್ಲ. ನಾಲ್ಕನೇ ಮೈಸೂರು ಯುದ್ಧದಲ್ಲಿ ಬ್ರಿಟಿಷ್ ಸೈನ್ಯ ಈತನನ್ನು ಗುಂಡಿಕ್ಕಿ ಕೊಂದಿತು.

ಡಾ.ಬಿ.ಆರ್.ಅಂಬೇಡ್ಕರ್ ಇವರು ಸಯಾಜಿರಾವ್‌ಗಾಯಕ್‌ವಾಡ್‌ರವರ ಸಹಕಾರದಿಂದ ಅಸ್ಪೃಶ್ಯತೆ ವಿರುದ್ಧ ಆಂದೋಲನವನ್ನೂ ಆರಂಭಿಸಿದರು. ಅಸ್ಪೃಶ್ಯತೆ ಒಂದು ರೋಗ. ಆ ರೋಗದ ನಿರ್ನಾಮವಾಗದ ಹೊರತು ರಾಜಕೀಯ ಸ್ವಾತಂತ್ರ್ಯಕ್ಕೆ ಯಾವ ಬೆಲೆಯೂ ಇಲ್ಲ ಎಂಬುದಾಗಿ ದೇಶದ ಜನರಿಗೆ ಕರೆನೀಡಿದರು. ಆ ಕಾಲದಲ್ಲಿ ತಿಲಕರು ಕರ್ಮವೀರ ಸಿಂಧೆ, ಗಾಂಧೀಜಿ ಮುಂತಾದವರು ಅಂಬೇಡ್ಕರ್‌ರವರ ಅಸ್ಪೃಶ್ಯತೆ ನಿವಾರಣೆ ಹೋರಾಟಕ್ಕೆ ಬೆಂಬಲ ನೀಡಿದರು. ಆದರೆ ಗಾಂಧೀಜಿಯವರಿಗೆ ರಾಜಕಿಯ ಸ್ವಾತಂತ್ರ್ಯ ಹೋರಾಟ ಪ್ರಮುಖವಾಗಿತ್ತು. ಇದನ್ನು ಮನಗಂಡು ಅಂಬೇಡ್ಕರ್ ತಮ್ಮ ವಿಚಾರಧಾರೆ ಹಾಗೂ ಚಳುವಳಿಗೆ ತೀವ್ರತೆಯನ್ನು ತರುವ ದೃಷ್ಟಿಯಿಂದ ಬಹಿಷ್ಕೃತ ಭಾರತ ಎಂಬ ಮರಾಠಿ ಪಾಕ್ಷಿಕ ಪತ್ರಿಕೆ ಪ್ರಾರಂಭಿಸಿದರು.[೧] ೧೯೩೦ರ ದಶಕದಲ್ಲಿ

೧. ಭಾರತ ಸ್ವಾತಂತ್ರ್ಯ ಹೋರಾಟಗಾರರು (ಮಹಾಚೇತನಗಳು), ಪು. ೪೩–೪೪.

ಒಂದು ಕಡೆ ಗಾಂಧೀಜಿ ನೇತೃತ್ವದಲ್ಲಿ ರಾಜಕೀಯ ಸ್ವಾತಂತ್ರ್ಯ ಚಳುವಳಿ ನಡೆಯುತ್ತಿದ್ದರೆ ಇನ್ನೊಂದು ಕಡೆ ಸಾಮಾಜಿಕ ಸಮಾನತೆಗಾಗಿ, ಸ್ವಾತಂತ್ರ್ಯಕ್ಕಾಗಿ ಅಂಬೇಡ್ಕರ್ ನೇತೃತ್ವದಲ್ಲಿ ಚಳುವಳಿ ನಡೆಯುತ್ತಿತ್ತು. ೧೯೩೦ರಲ್ಲಿ ನಾಗ್ಪುರದಲ್ಲಿ ದಲಿತರ ತುಳಿತಕ್ಕೊಳಗಾದವರ ಪ್ರಥಮ ಸಮ್ಮೇಳನ ಅಂಬೇಡ್ಕರ್ ಅಧ್ಯಕ್ಷತೆಯಲ್ಲಿ ನಡೆಯಿತು.

"ಚಂದ್ರಶೇಖರ್ ಆಜಾದ್"- ದೇಶದ ಸ್ವಾತಂತ್ರ್ಯ ಹೋರಾಟಕ್ಕಾಗಿ ಆಜಾದ್ ಶಾಲೆ ಬಿಟ್ಟ ಊರು ಬಿಟ್ಟ. ಕಾಂಗ್ರೆಸ್‌ನಲ್ಲಿ ಸ್ವಯಂ ಸೇವಕನಾಗಿ ಸೇರಿದ. ಒಬ್ಬನೇ ಮಗನಾದ ಆಜಾದ್ ಸುಮಾರು ಹತ್ತು ವರ್ಷಗಳ ಕಾಲ ತಂದೆ-ತಾಯಿ ಕಾಣಲಿಲ್ಲ. ಸ್ನೇಹಿತರ ಸಲಹೆಯಂತೆ ಆಜಾದ್ ತಂದೆ-ತಾಯಿರನ್ನು ಭೇಟಿಯಾದ. ಚಂದ್ರಶೇಖರ್ ಆಜಾದ್ ಸ್ವಾತಂತ್ರ್ಯ ಹೊರಾಟದಲ್ಲಿ ಕ್ರಾಂತಿ ಮಾರ್ಗ ಅನುಸರಿಸಿದರು. ಕಾಂಗ್ರೆಸ್‌ನ ಆಗಿನ ಕೆಲವು ನಾಯಕರಿಗೆ ಕ್ರಾಂತಿಕಾರಿಗಳು ದೇಶದ್ರೋಹಿಗಳಂತೆ ಕಂಡುದುದು ಒಂದು ವಿಪರ್ಯಾಸವೇ ಸೈ. ಮದನಮೋಹನ ಮಾಳವೀಯ, ಪುರುಷೋತ್ತಮದಾಸ್ ಟಾಂಡನ್, ಮೋತಿಲಾಲ್ ನೆಹರು ಇತ್ಯಾದಿ ಹಿರಿಯ ಕಾಂಗ್ರೆಸ್ ನಾಯಕರು ಆಜಾದ್‌ನ ಪ್ರಾಮಾಣಿಕ ದೇಶ್ ಪ್ರೇಮವನ್ನು ಮನಗಂಡಿದ್ದರು. ಹೀಗೆ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿ ತನ್ನ ಪಿಸ್ತೂಲಿನ ಕೊನೆ ಗುಂಡಿನಿಂದ ತನಗೆ ಹೊಡೆದುಕೊಂಡು ೨೪ನೇ ವಯಸ್ಸಿನಲ್ಲಿ ಪ್ರಾಣಬಿಟ್ಟರು.

"ಸರೋಜಿನಿನಾಯ್ಡು" ಸ್ವಾತಂತ್ರ್ಯ ಹೋರಾಟದ ತೀವ್ರ ಸ್ವರೂಪದ ಗಾಂಧೀಜಿ ನೇತೃತ್ವದ ದಂಡೀ ಜಾತ್ರೆಯಲ್ಲಿ ಸರೋಜನಿ ಭಾಗವಹಿಸಿದರು. ಸರೋಜಿನಿಯವರಿಗೆ ಗಾಂಧೀಜಿಯವರೇ ಗುರು. ದಂಡೀ ಯಾತ್ರೆಯಲ್ಲಿ ಸುಮಾರು ಎಪ್ಪತ್ತೈದು ಸಹಸ್ರ ಜನ ಸಾಗರ. ಗಾಂಧೀಜಿ ಸರೋಜಿನಿಯರನ್ನು ಅಮ್ಮ ಎಂದೇ ಕರೆಯುತ್ತಿದ್ದರು. ಇವರು ಕವಿಯಾಗಿ ಸ್ವಾತಂತ್ರ್ಯ ಹೋರಾಟಗಾರ್ತಿಯಾಗಿ, ಸಮಾಜ ಸೇವಕಿಯಾಗಿ ಸರೋಜಿನಿಯವರು ಅಮರರು.

"ರಾಣಿಗೈದಿನ್‌ಲಿ" ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಮಹಿಳೆಯರಲ್ಲಿ ಪ್ರಮುಖ ಹೆಸರು. ಜನಿಸಿದ್ದು ಮಣಿಪುರದ ನಾಂಕೋಗ್ರಾಮದಲ್ಲಿ, ಹಲವು ಸಲ ಜೈಲುವಾಸ ೧೯೩೨ರಿಂದ ಸ್ವಾತಂತ್ರ್ಯ ಪಡೆಯವವರೆಗೆ ಜೈಲಿನಲ್ಲಿ ಕೊಳೆಯಬೇಕಾಯಿತು.[೧]

---

೧. ಭಾರತ ಸ್ವಾತಂತ್ರ್ಯ ಹೋರಾಟಗಾರರು (ಮಹಾಚೇತನಗಳು), ಪು. ೭೫.

"ಸುಬ್ರಮಣಿಯಂ ಭಾರತಿ" (೧೮೮೨-೧೯೨೧) ಇವರು ತಮಿಳಿನ ಪ್ರಸಿದ್ಧ ಕವಿ. ಕಾಶಿಯಲ್ಲಿ ಹಿಂದಿ, ಇಂಗ್ಲಿಷ್ ಹಾಗೂ ಸಂಸ್ಕೃತ ಭಾಷೆಗಳನ್ನು ಅಧ್ಯಯನ ಮಾಡಿದ ಇವರು ಹಲವಾರು ದೇಶ ಪ್ರೇಮದ ಗೀತೆಗಳನ್ನು ರಚಿಸಿದರು. ತಮಿಳಿನ ಸ್ವದೇಶ ಮಿತ್ರನ್ ಪತ್ರಿಕೆಯಲ್ಲಿ ಕೆಲಕಾಲ ಸಹಾಯಕ ಸಂಪಾದಕರಾಗಿ ಕಾರ್ಯ ನಿರ್ವಹಿಸಿ, ಅನಂತರ ಭಾರತ ಎಂಬ ಹೆಸರಿನ ವಾರಪತ್ರಿಕೆಯನ್ನು ಸ್ವತಃ ತಾವೇ ನಡೆಸಿದರು. ತಮ್ಮ ಬರಹ ಹಾಗೂ ಕವಿತೆಗಳ ಮೂಲಕ ಬ್ರಿಟಿಷ್ ಆಡಳಿತವನ್ನು ಖಂಡಿಸಿದರು. ಜನರಲ್ಲಿ ದೇಶಾಭಿಮಾನವನ್ನು ತುಂಬಿದರು.

"ಸುರೇಂದ್ರನಾಥಬ್ಯಾನರ್ಜಿ"-(೧೮೪೮-೧೯೨೫) ಇವರು ಸ್ವಾತಂತ್ರ್ಯ ಹೋರಾಟದ ಮುಂಚೂಣಿಯ ನಾಯಕರಲ್ಲಿ ಒಬ್ಬರು. ಐಸಿಎಸ್ ಪರೀಕ್ಷೆಯನ್ನು ೧೮೬೯ರಲ್ಲಿ ಪಾಸು ಮಾಡಿದರು. ಇವರು ರಾಷ್ಟ್ರೀಯ ಕಾಂಗ್ರೆಸ್‌ನ ಸಂಸ್ಥಾಪಕ ಸದಸ್ಯರಲ್ಲೊಬ್ಬರು ಸ್ವದೇಶಿ ಚಳುವಳಿಯಲ್ಲಿ ಮಹತ್ವದ ಕಾರ್ಯ ನಿರ್ವಹಿಸದ ಇವರು ಪತ್ರಕರ್ತರಾಗಿಯೂ ಜನರನ್ನು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸುವಂತೆ ಪ್ರೇರೇಪಿಸುತ್ತಿದ್ದರು.

"ವಿಜಯಲಕ್ಷ್ಮಿಪಂಡಿತ್"- ಮೋತಿಲಾಲ್ ನೆಹರೂರವರ ಪುತ್ರಿ. ವಿದ್ಯಾವಂತೆ ಹಾಗೂ ಆಕರ್ಷಕ ವ್ಯಕ್ತಿತ್ವ. ಅಸಹಕಾರ ಚಳುವಳಿ ಹಾಗೂ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಸಕ್ರೀಯವಾಗಿ ಭಾಗವಹಿಸಿದವರು. ಭಾರತ ಸ್ವಾತಂತ್ರ್ಯ ಪಡೆದಾಗ ರಷ್ಯಾ, ಮೆಕ್ಸಿಕೋ ಮುಂತಾದ ದೇಶಗಳಲ್ಲಿ ಭಾರತದ ರಾಯಬಾರಿಯಾಗಿ ಸೇವೆ ಸಲ್ಲಿಸಿದವರು.[೧]

ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ದಾದಾಬಾಯಿ ನವರೋಜಿಯವರ ಪಾತ್ರ ಅತ್ಯಂತ ಹಿರಿದಾದುದು. ರಾಷ್ಟ್ರೀಯ ಚಳುವಳಿಯ ಮೊದಲ ನಾಯಕರಾಗಿದ್ದ ಇವರು ಗೋಪಾಲಕೃಷ್ಣ ಗೋಖಲೆ ಮತ್ತು ಗಾಂಧೀಜಿಯವರಿಗೆ ರಾಜಕೀಯ ಗುರುಗಳಾಗಿದ್ದರು. ಇವರು ಭಾರತದ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪನೆಯ ಪೂರ್ವದಲ್ಲಿ ೪೦ ವರ್ಷಗಳ ಕಾಲ ಮತ್ತು ಸ್ಥಾಪನೆಯ ನಂತರದ ೨೧ ವರ್ಷಗಳ ಕಾಲ ಅವ್ಯಾಹತವಾಗಿ ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಡಿದರು. "ಸ್ವಾತಂತ್ರ್ಯ ನಮ್ಮ ಜೀವನದ ಉಸಿರು. ವಿಮೋಚನೆಯೇ ನಮ್ಮ ಧ್ಯೇಯ" ಎನ್ನುತ್ತಿದ್ದರು.

೧. ಭಾರತ ಸ್ವಾತಂತ್ರ್ಯ ಹೋರಾಟದ ಮಹಾಚೇತನಗಳು, ಪು. ೮೧-೮೯.

ನವರೋಜಿಯವರು ಕ್ರಿ.ಶ. ೧೮೮೫ರಲ್ಲಿ ಸ್ಥಾಪನೆಯಾದ ಭಾರತದ ರಾಷ್ಟ್ರೀಯ ಕಾಂಗ್ರೆಸ್ಸಿನ ಸ್ಥಾಪನೆಯಲ್ಲಿ ಸಕ್ರಿಯವಾದ ಪಾತ್ರವಹಿಸಿದರು. ಕ್ರಿ.ಶ. ೧೮೮೬ರಲ್ಲಿ ಕಲ್ಕತ್ತದಲ್ಲಿ ಸಮಾವೇಶಗೊಂಡ ಭಾರತದ ರಾಷ್ಟ್ರೀಯ ಕಾಂಗ್ರೆಸ್ಸಿನ ಅಧ್ಯಕ್ಷತೆಯನ್ನು ವಹಿಸಿದರು. ನವರೋಜಿಯವರು ಮಂದಗಾಮಿಗಳಾಗಿದ್ದು, ಸಂವಿಧಾನಾತ್ಮಕ ಹೋರಾಟಗಳಲ್ಲಿ ನಂಬಿಕೆ ಇಟ್ಟಿದ್ದರು. ವ್ಯವಸ್ಥೆಯಲ್ಲಿ ಅಚಲವಾದ ನಂಬಿಕೆ ಹೊಂದಿದ್ದರು. ಆದರೂ ಬ್ರಿಟಿಷರ ಆರ್ಥಿಕ ಶೋಷಣೆಯ ನೀತಿಯನ್ನು ಟೀಕಿಸುವಲ್ಲಿ ಹಿಂಜರಿಯಲಿಲ್ಲ. ಕ್ರಮೇಣ ಇವರಿಗೆ ನಿರಾಶೆಯಾಗಿ ಬ್ರಿಟಿಷರ ಬಗ್ಗೆ ಕಠಿಣ ನಿಲುವನ್ನು ತಾಳಿದರು. ಕ್ರಿ.ಶ. ೧೮೯೩ರಲ್ಲಿ ನವರೋಜಿಯವರು ಲಾಹೋರಿನಲ್ಲಿ ಜರುಗಿದ ಭಾರತದ ರಾಷ್ಟ್ರಿಯ ಕಾಂಗ್ರೆಸ್ಸಿನ ಅಧ್ಯಕ್ಷತೆಯನ್ನು ವಹಿಸಿದ್ದರು. "ಮಂದಗಾಮಿಗಳಾಗಿದ್ದ ದಾದಾಭಾಯಿ ನವರೋಜಿಯವರು ಬರಬರುತ್ತಾ ತೀವ್ರತರದ ರಾಜಕಾರಣದ ಜಾಡಿಗೆ ಅಡಿಯಿಟ್ಟರು. ಕ್ರಿ.ಶ.೧೯೦೪ರಲ್ಲಿ ಅಮ್‌ಸ್ಟರ್ ಡ್ಯಾಂನಲ್ಲಿ ಜರುಗಿದ ಅಂತರರಾಷ್ಟ್ರೀಯ ಸಮಾಜವಾದಿ ಕಾಂಗ್ರೆಸ್ಸಿನಲ್ಲಿ ಭಾಗವಹಿಸಿ ವಿಚಾರಪೂರಿತ ಭಾಷಣ ಮಾಡಿದರು. ಮುಂದೆ ತಿಲಕ್ ಮತ್ತು ಅನಿಬೆಸೆಂಟರ್‌ರವರ ಹೋರಾಟಕ್ಕೆ ಬೆಂಬಲ ಸೂಚಿಸಿದರು. ಬಂಗಾಳದ ವಿಭಜನೆಯನ್ನು ತೀವ್ರವಾಗಿ ಖಂಡಿಸಿದರು. ಸರ್ಕಾರವನ್ನು ತರಾಟೆಗೆ ತೆಗೆದುಕೊಂಡರು. ಕ್ರಿ.ಶ. ೧೯೦೬ರಲ್ಲಿ ಮೂರನೇ ಬಾರಿಗೂ ಕಲ್ಕತ್ತದಲ್ಲಿ ಜರುಗಿದ ಭಾರತದ ರಾಷ್ಟ್ರೀಯ ಕಾಂಗ್ರೆಸ್ಸಿನ ಅಧ್ಯಕ್ಷರಾಗಿ ನೇಮಕಗೊಂಡರು. ನವರೋಜಿಯವರು ಮಂದಗಾಮಿಗಳು ಮತ್ತು ತೀವ್ರಗಾಮಿಗಳಿಂದಲೂ ಗೌರವಸಲ್ಪಟ್ಟರು. ನಂತರ ನವರೋಜಿ ಮಂದಗಾಮಿಗಳು ಮತ್ತು ತೀವ್ರಗಾಮಿಗಳ ಮಧ್ಯೆ ಶಾಂತಿಸ್ಥಾಪನೆಯ ನಿರ್ಮಾಪಕರಾಗಿ ಪಾತ್ರ ವಹಿಸಿದರು. ಅಲ್ಲದೆ ಅಧ್ಯಕ್ಷ ಭಾಷಣದಲ್ಲಿ ನಾವು ಯಾವುದೇ ಉಪಕಾರವನ್ನು ಕೇಳುತ್ತಿಲ್ಲ. ನಮಗೆ ನ್ಯಾಯಬೇಕು. "ಆಸ್ಟ್ರೇಲಿಯಾ ಮತ್ತು ಕೆನಡಾ ಹಾಗೂ ಇಂಗ್ಲೆಂಡ್‌ನಲ್ಲಿರುವಂತಹ ಸ್ವರಾಜ್ಯ ಅಥವಾ ಸ್ವಯಂ ಆಡಳಿತ ಬೇಕು. ಸ್ವರಾಜ್ಯ ಸ್ಥಾಪನೆ ಕಾಂಗ್ರೆಸ್ಸಿನ ಗುರಿ ಎಂಬುದಾಗಿ ಘೋಷಿಸಿದರು. ಕಲ್ಕತ್ತ ಕಾಂಗ್ರೆಸ್ ಅಧಿವೇಶನದಲ್ಲಿ ನಾಲ್ಕು ಠರಾವುಗಳನ್ನು ಸ್ವೀಕರಿಸಲಾಯಿತು. ಅವು ಯಾವುವೆಂದರೆ

೧) ಸ್ವರಾಜ್ಯ (Self Government)

೨) ಸ್ವದೇಶಿ(Swadeshi)

೩) ವಿದೇಶಿ ವಸ್ತುಗಳ ಬಹಿಷ್ಕಾರ (Boycott of Foreign Goods)

೪) ರಾಷ್ಟ್ರೀಯ ಶಿಕ್ಷಣ (National Education)"[೧]

ಬಂಗಾಳದ ವಿಭಜನೆಯ ಕಾರಣದಿಂದ ತೀವ್ರಗಾಮಿಗಳ ಈ ತತ್ವಗಳನ್ನು ಕಾಂಗ್ರೆಸ್ ನವರೋಜಿಯವರ ನಾಯಕತ್ವದಲ್ಲಿ ಅಳವಡಿಸಿಕೊಂಡಿತು. ದಾದಾಭಾಯಿ ನವರೋಜಿಯವರು ಕ್ರಿ.ಶ. ೧೯೧೭ರ ಜನವರಿ ೩೦ರಂದು ಮರಣ ಹೊಂದಿದರು. ಗಾಂಧೀಜಿಯವರು 'ಜಗತ್ತಿನಲ್ಲಿ ಭಾರತವು ಒಂದು ರಾಷ್ಟ್ರವಾಗಿ ಅಸ್ತಿತ್ವದಲ್ಲಿರುವ ತನಕ ಭಾರತ ಖಂಡದ ಜನರು ದಾದಾಬಾಯಿ ನವರೋಜಿವರನ್ನು ಸ್ಮರಿಸಿಕೊಳ್ಳುತ್ತಾರೆಂಬ ವಿಚಾರದಲ್ಲಿ ನನಗೆ ಸಂಶಯವೇ ಇಲ್ಲ ಎಂದು ಹೇಳಿರುವ ಮಾತು ತುಂಬ ಅರ್ಥಗರ್ಭಿತವಾಗಿದೆ. ಗೋಪಾಲಕೃಷ್ಣ ಗೋಖಲೆಯವರ 'If there is the divine in man, it is in Dadbhai Naoroji' ಎಂಬುದಾಗಿ ಬಣ್ಣಿಸಿದ್ದಾರೆ.[೨]

"ಕ್ರಿ.ಶ. ೧೮೫೭ರ ದಂಗೆ'– ಈ ದಂಗೆಯನ್ನು "ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ಎಂದು ಕರೆಯುತ್ತಾರೆ. ಬ್ರಿಟಿಷ್ ಚರಿತ್ರಕಾರರು ೧೮೫೭ರ ದಂಗೆಯನ್ನು "ಇದೊಂದು ಕೇವಲ ಸಿಪಾಯಿ ದಂಗೆ" ಎಂಬುದಾಗಿ ನಾಮಕರಣ ಮಾಡಿದ್ದಾರೆ. ೧೮೫೭ರ ದಂಗೆಯು ಆಧುನಿಕ ಭಾರತದ ಇತಿಹಾಸದಲ್ಲಿ ಒಂದು ಮಹತ್ವದ ಘಟನೆಯಾಗಿದೆ. ಈ ದಂಗೆಯನ್ನು ಭಾರತದ ಅನೇಕ ರಾಜ್ಯಗಳು ಮಹತ್ವದ ಪಾತ್ರವಹಿಸಿದವು. ಅಲ್ಲದೆ ಲಕ್ಷಾಂತರ ರೈತರು, ಕುಶಲಕರ್ಮಿಗಳು, ಆಧಿವಾಸಿಗಳು, ಹೆಂಗಸರು ಹಾಗೂ ಯೋಧರು ಭಾಗವಹಿಸಿದ್ದರು. ಆದ್ದರಿಂದ ೧೮೫೭ರ ದಂಗೆ ಬ್ರಿಟಿಷ್ ಸಾಮ್ರಾಜ್ಯದ ಭದ್ರ ಬುನಾದಿಯ ಬೇರುಗಳನ್ನು ಸಂಪೂರ್ಣವಾಗಿ ಅಲುಗಾಡಿಸಿತು. ಅಲ್ಲದೆ ಏಷ್ಯಾದ ಒಂದು ಜನಾಂಗ ಬಿಳಿಯರ ಮೇಲೆ ಬಿದ್ದು ಒದ್ದಾಡುವಂತೆ ಮಾಡಿತು. ಎನ್‌ಫೀಲ್ಡ್ ಬಂದೂಕುಗಳಿಗೆ ಕೊಬ್ಬುಸವರಿದ ಪ್ರಕರಣ ೧೮೫೭ರ ದಂಗೆಗೆ ತತ್‌ಕ್ಷಣದ ಕಾರಣವಾಗಿ ಪರಿಣಮಿಸಿತು. ಭಾರತೀಯ ಸೈನಿಕರಲ್ಲಿ ಗಂಭೀರವಾದ ಅತೃಪ್ತಿ ವಾತಾವರಣ ನಿರ್ಮಾಣವಾಗಿದ್ದ ಸಂದರ್ಭದಲ್ಲಿಯೇ ಬ್ರಿಟಿಷರು ಹಳೆಯ ಬಂದೂಕುಗಳಿಗೆ ಬದಲಾಗಿ ಹೊಸ ಎನ್‌ಫೀಲ್ಡ್ ಬಂದೂಕುಗಳನ್ನು ನೀಡಿದರು. ಶಾಖದಿಂದ ಆಸ್ಫೋಟವಾಗದಂತೆ ಶೀತದಿಂದ ರಕ್ಷಿಸಲು ತೋಟಾಗಳು ಸುತ್ತ ಹಸುವಿನ ಮತ್ತು ಹಂದಿಯ ಕೊಬ್ಬು ಸವರಿದ ಕಾಗದವನ್ನು ಅಂಟಿಸಲಾಗಿತ್ತು."[೩]

---

೧. ಆಧುನಿಕ ಭಾರತ ಇತಿಹಾಸದ ಸಂಕ್ಷಿಪ್ತ ಚರಿತ್ರೆ, ಪು. ೧೧, ಮುದ್ರಣ– ೨೦೦೮.
೨. ಆಧುನಿಕ ಭಾರತ ಇತಿಹಾಸದ ಸಂಕ್ಷಿಪ್ತ ಚರಿತ್ರೆ, ಪು. ೯೪.
೩. ಆಧುನಿಕ ಭಾರತ ಇತಿಹಾಸದ ಸಂಕ್ಷಿಪ್ತ ಚರಿತ್ರೆ, ಪು. ೯೪.

ಆದರೆ ಈ ಹೊಸ ಬಂದೂಕುಗಳನ್ನು ಬಳಸುವಾಗ ಭಾರತೀಯ ಸೈನಿಕರು ಬಂದೂಕಿನ ತೋಟಾಗಳಿಗೆ ಸುತ್ತಿದ್ದ ಕಾಗದವನ್ನು ಹಲ್ಲಿನಿಂದ ಕಚ್ಚಿ ಕೀಳಬೇಕಿತ್ತು. ಹಸು ಹಿಂದೂಗಳಿಗೆ ಪವಿತ್ರವಾದರೆ, ಹಂದಿ ಮುಸ್ಲಿಮರಿಗೆ ನಿಷಿದ್ಧವಾಗಿತ್ತು. ಇದಕ್ಕೆ ೧೮೫೭ರ ದಂಗೆಗೆ ಸಾಕ್ಷಿಯಾಗಿದ್ದ ಲಾರ್ಡ್‌ರಾಬರ್ಟ್ ಕೂಡ ಇದನ್ನು ಒಪ್ಪಿಕೊಂಡಿದ್ದಾರೆ. ಈ ದಂಗೆಯಲ್ಲಿ ಧಾರ್ಮಿಕ ನಾಯಕರು ಪೂರ್ವ ಭಾರತದ ಕೆಲವು ದೇಶೀಯ ರಾಜರು, ರೈತರು, ಕುಶಲಕರ್ಮಿಗಳು, ಸೈನಿಕರು ಹಾಗೂ ಸಾಮಾನ್ಯ ಜನರು ಕೂಡ ದಂಗೆಯಲ್ಲಿ ಭಾಗವಹಿಸಿದರು. ಸನ್ಯಾಸಿಗಳು ಮತ್ತು ಪಕೀರರು ಸಿಪಾಯಿಗಳಿಗೆ ಗುಪ್ತ ಸಂದೇಶಗಳನ್ನು ಕಳುಹಿಸಿ ದಂಗೆಯನ್ನು ಸ್ಫೋಟಗೊಳಿಸಿದರು. ಹೀಗಾಗಿ ೧೮೫೭ರ ಸಿಪಾಯಿದಂಗೆಯ ಪ್ರಪ್ರಥಮ ಘಟನೆ ದೆಹಲಿಯಿಂದ ೩೬ ಮೈಲಿಯಷ್ಟು ದೂರವಿರುವ ಮೀರತ್‌ನಲ್ಲಿ ಮೇ ೧೦, ೧೮೫೭ರಂದು ನಡೆಯಿತು.

ಮಧ್ಯಭಾರತದ ಝಾನ್ಸಿಯಲ್ಲಿ ರಾಣಿ ಲಕ್ಷ್ಮಿಬಾಯಿ ಬ್ರಿಟಿಷರ ವಿರುದ್ಧ ದಂಗೆಯೆದ್ದಳು. ಇವಳು ಕ್ರಾಂತಿಕಾರಿಗಳೆಲ್ಲಾ ಪ್ರಭಾವಯುತ ವ್ಯಕ್ತಿ. ೧೮೫೭ರ ಸ್ವಾತಂತ್ರ್ಯ ಯುದ್ಧದಲ್ಲಿ ಝಾನ್ಸಿರಾಣಿ ಲಕ್ಷ್ಮಿಬಾಯಿಯ ಪಾತ್ರವೆಂದರೆ ಸುವರ್ಣದ ಆಭರಣಕ್ಕೆ ವಜ್ರದ ಕಳೆಕಟ್ಟಿದಂತಿತ್ತು. ತಾತ್ಯಾಟೋಪಿಯ ಬೆಂಬಲದಿಂದ ಗ್ವಾಲಿಯರ್ ಕೋಟೆಯನ್ನು ವಶಪಡಿಸಿಕೊಂಡು ಅಲ್ಲಿಯ ಖಜಾನೆಯನ್ನು ಲೂಟಿ ಮಾಡಿದಳು. ಅನೇಕ ಆಂಗ್ಲ ಅಧಿಕಾರಿಗಳು ಕೊಲ್ಲಲ್ಪಟ್ಟರು. ಬ್ರಿಟಿಷ್‌ರಿಗೆ ನಿಷ್ಠೆಯಿಂದಿದ್ದ ಗ್ವಾಲಿಯರ್‌ನ ರಾಜಜಯಾಜಿಸಿಂಧ್ಯ ಆಗ್ರಾಕ್ಕೆ ಹೋಗಿ ಆಶ್ರಯ ಪಡೆದನು. ಪುರುಷ ವೇಷಧರಿಸಿದ ರಾಣಿಲಕ್ಷ್ಮಿಬಾಯಿ ತನ್ನ ದತ್ತು ಪುತ್ರ ದಾಮೋದರನನ್ನು ತನ್ನ ಬೆನ್ನಿಗೆ ಕಟ್ಟಿಕೊಂಡೇ ಬ್ರಿಟಿಷರ ವಿರುದ್ಧ ಹೋರಾಟ ನಡೆಸಿದಳು. ಸರ್‌ಹಗ್‌ರೋಸ್ ಭಾರತೀಯ ಸೈನಿಕರನ್ನು ಸೋಲಿಸಿ ಗ್ವಾಲಿಯರನ್ನು ವಶಪಡಿಸಿಕೊಂಡರು. ರಾಣಿಲಕ್ಷ್ಮಿಬಾಯಿ ಕಾಲ್ಪಿಕಡೆ ಹೊರಟಳು. ಜೂನ್ ೧೭, ೧೮೫೭ರಲ್ಲಿ ಕಾಲ್ಪಿಯಲ್ಲಿ ನಡೆದ ಕದನದಲ್ಲಿ ಬ್ರಿಟಿಷರ ವಿರುದ್ಧ ವೀರಾವೇಷದಿಂದ ಹೋರಾಡುತ್ತಲೇ ಹುತಾತ್ಮಳಾದಳು. ಬ್ರಿಟೀಷರು ಮಾನ್‌ಸಿಂಗ್ ಬೆಂಬಲದಿಂದ ತಾತ್ಯಾಟೋಪಿ ನಿದ್ದೆ ಮಾಡುತ್ತಿದ್ದಾಗ ಸೆರೆಹಿಡಿದು ಆತನನ್ನು ಗಲ್ಲಿಗೇರಿಸಿದರು.

೧೮೫೭ರ ದಂಗೆ ಮೊದಲು ದಕ್ಷಿಣ ಭಾರತದ ಮಹಾರಾಷ್ಟ್ರದಲ್ಲಿ ಪ್ರಾರಂಭವಾಯಿತು. ಸತಾರ, ಪುಣೆ, ನಾಸಿಕ್ ೨೦ ಭಾಗಗಳಲ್ಲಿಯಾಗಿ. ಕರ್ನಾಟಕ ಹಲಗಲಿ, ಸುರಪುರ, ನರಗುಂದ, ಮುಂಡರಗಿ, ಮೈಸೂರು, ಕಾರಾವಾರ, ಇನ್ನೂ ಮುಂತಾದ ಕಡೆಗಳಲ್ಲಿ ಬ್ರಿಟಿಷರ ವಿರುದ್ಧ ದಂಗೆಗಳು ಜರುಗಿದವು. ಒಟ್ಟಿನಲ್ಲಿ

೧೮೫೭ರ ದಂಗೆಯು ವ್ಯಾಪ್ತಿ ವಿಶಾಲವಾಗಿದ್ದು, ಈ ದಂಗೆಯಲ್ಲಿ ಎಲ್ಲಾ ವರ್ಗದ ಜನರು ವಿವಿಧ ಧರ್ಮದವರು, ವಿವಿಧ ಭಾಷೆಗಳನ್ನು ಮಾತನಾಡುವ ಜನರು ಮತ್ತು ವಿವಿಧ ಪ್ರಾಂತ್ಯದ ಜನರು ಭಾಗವಹಿಸಿದ್ದರು ಎಂದರೆ ಅತಿಶಯೋಕ್ತಿಯಾಗಲಾರದು.[೧]

ಹೀಗೆ ಭಾರತ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಮಹಾನ್ ಚೇತನಗಳು ನಡೆಸಿದ ಹೋರಾಟಗಳು, ಚಳುವಳಿಗಳಲ್ಲಿ ಭಾಗವಹಿಸಿ ತಮ್ಮ ಪ್ರಾಣವನ್ನು ಮುಡುಪಾಗಿಟ್ಟವರು ಅಸಂಖ್ಯಾತರು. ಬ್ರಿಟಿಷರ ವಿರುದ್ಧ ಹೋರಾಡಿ ತಮ್ಮ ಸಂಸಾರವನ್ನು ಬಿಟ್ಟು ದೇಶಕ್ಕಾಗಿ ತಮ್ಮ ಪ್ರಾಣವನ್ನು ತ್ಯಜಿಸಿದ ಅನೇಕ ಮಹಾನ್ ಚೇತನಗಳನ್ನು ನಾವು ಕಾಣಬಹುದು. ಹೀಗೆ ಇವರೆಲ್ಲರ ಹೋರಾಟದ ಫಲವಾಗಿ ೧೯೪೭ ಜುಲೈ ೪ರಂದು ಭಾರತ ಮತ್ತು ಪಾಕಿಸ್ತಾನಕ್ಕೆ ಅಧಿಕಾರ ಹಸ್ತಾಂತರಿಸಿ ಸ್ವಾತಂತ್ರ್ಯವನ್ನು ನೀಡುವ ಮಸೂದೆ ಬ್ರಿಟನ್ನಿನ ಪಾರ್ಲಿಮೆಂಟಿನಲ್ಲಿ ಮಂಡಿಸಲ್ಪಟ್ಟಿತ್ತು. ಈ ಹಿನ್ನೆಲೆಯಲ್ಲಿ ೧೯೪೭ ಆಗಸ್ಟ್ ೧೫ರಿಂದ ಭಾರತ ಹಾಗೂ ಪಾಕಿಸ್ತಾನ ಸ್ವತಂತ್ರ ರಾಷ್ಟ್ರಗಳೆಂದು ಅಸ್ತಿತ್ವಕ್ಕೆ ಬರಲು ವಿದ್ಯುಕ್ತವಾಗಿ ಒಪ್ಪಿಗೆ ದೊರಕಿದಂತಾಯಿತು.

ದೆಹಲಿಯಲ್ಲಿ ಸ್ವಾತಂತ್ರ್ಯೋತ್ಸವವನ್ನು ವಿಜೃಂಭಣೆಯಿಂದ ಹಮ್ಮಿಕೊಳ್ಳಲಾಗಿತ್ತು. ೧೯೪೭ ಆಗಸ್ಟ್ ೧೪ರ ಮಧ್ಯರಾತ್ರಿ ೧೨ ಘಂಟೆಗೆ ಸ್ವಾತಂತ್ರ್ಯೋದಯವಾಯಿತು. ಈ ಸಂದರ್ಭದಲ್ಲಿ ಮಾತನಾಡಿದ ಬಾಬುರಾಜೇಂದ್ರ ಪ್ರಸಾದ, ನೆಹರೂ ಮೊದಲಾದ ಹಿರಿಯ ನಾಯಕರು ದೇಶದ ಸ್ವಾತಂತ್ರ್ಯಕ್ಕಾಗಿ ಗಾಂಧೀಜಿಯವರ ಸೇವೆಯನ್ನು ಸ್ಮರಿಸಿರುವುದನ್ನು ನಾವು ಕಾಣಬಹದು.

---

೧. ಆಧುನಿಕ ಭಾರತ ಇತಿಹಾಸದ ಸಂಕ್ಷಿಪ್ತ ಚರಿತ್ರೆ, ಪು. ೯೬.

ಅಧ್ಯಾಯ – ೪

ಬೇಂದ್ರೆ ಸಾಹಿತ್ಯದಲ್ಲಿ ಸ್ವಾತಂತ್ರ್ಯ ಹೋರಾಟದ ಪರಿಕಲ್ಪನೆ

ಕನ್ನಡಸಾಹಿತ್ಯದ ನವೋದಯ ಕಾವ್ಯದ ಬೆಳವಣಿಗೆಯಲ್ಲಿ ಮಹತ್ವದ ಪಾತ್ರ ವಹಿಸಿದ ಮಹಾನ್ ಕವಿ "ದತ್ತಾತ್ತೇಯ ರಾಮಚಂದ್ರಬೇಂದ್ರೆಯವರು". ಇವರು ಧಾರವಾಡದ ಸುತ್ತ ಪ್ರಚಾರದಲ್ಲಿದ್ದ ಭಾಷೆಯನ್ನು ಕಾವ್ಯದ ಮಾಧ್ಯಮಕ್ಕೆ ತಂದು ಶಿಷ್ಟಕಾವ್ಯಕ್ಕೆ ಒಂದು ಹೊಸ ತಿರುವನ್ನು ತಂದುಕೊಟ್ಟಿದ್ದು ಚಾರಿತ್ರಿಕವಾಗಿ ಬಹಳ ಮಹತ್ವದ್ದು. ಕಾವ್ಯದ ಭಾಷೆ ನಗರೀಕರಣವಾಗುವ ಸಂದರ್ಭದಲ್ಲಿ ಜನಪದ ಭಾಷೆಯನ್ನು ಅದರ ಎಲ್ಲ ಲಯ ವಿನ್ಯಾಸದೊಂದಿಗೆ ಕಾವ್ಯದ ಚೌಕಟ್ಟಿನಲ್ಲಿ ಪ್ರಯೋಗಿಸಿ ಕಾವ್ಯಶಕ್ತಿಯನ್ನು ಸಜೀವಗೊಳಿಸಿದ್ದು ಬೇಂದ್ರೆಯವರ ದೊಡ್ಡ ಸಾಧನೆ.

ನವೋದಯ ಸಾಹಿತ್ಯದ ಆರಂಭದಲ್ಲಿ ಬಿ.ಎಂ.ಶ್ರೀಯವರು ತೆರೆದ ಪಾಶ್ಚಾತ್ಯ ಸಾಹಿತ್ಯದ ಬಾಗಿಲಿನಿಂದಾಗಿ ನಮ್ಮ ಸಾಹಿತ್ಯ ಸ್ಫೂರ್ತಿಯನ್ನು ಸಂಕೇತ, ಪ್ರತಿಮಾ ವಿಧಾನವನ್ನು, ಭಾಷೆ ಅನುಭವಗಳನ್ನು ಹೊಸ ರೀತಿಯಾಗಿ ಬಳಸುತ್ತಿದ್ದ ಕಾಲದಲ್ಲಿ ಭಾರತೀಯರ ಮನಸ್ಸು ಪ್ರಾಚೀನ ಪರಂಪರೆಯಿಂದ ಸ್ಫೂರ್ತಿ ಪಡೆದು,ನಮ್ಮ ಸಂಸ್ಕೃತಿಯ ವಿವಿಧ ಆಯಾಮಗಳನ್ನು, ವಿನ್ಯಾಸಗಳನ್ನು ಕಾವ್ಯದ ಮೂಲಕ ಪ್ರಯೋಗಿಸಿದ್ದುದು ಬೇಂದ್ರೆಯವರ ಸಿದ್ಧಿಗಳಲ್ಲೊಂದು ಆರಂಭದಲ್ಲಿ ಮರಾಠಿ ಭಾಷೆಯ ಸಾಹಿತ್ಯದ ಪ್ರಭಾವಕ್ಕೆ ಒಳಗಾದ ಬೇಂದ್ರೆಯವರು ಕ್ರಮೇಣ ತನ್ನತನವನ್ನು ಕಂಡುಕೊಂಡದ್ದು, ಅದನ್ನು ಕನ್ನಡ ಸಾಹಿತ್ಯದ ಆರಂಭದಲ್ಲೇ ದಾಖಲಿಸಿದುದು ಕನ್ನಡ ಕಾವ್ಯದ ಬೆಳವಣಿಗೆಯ ದೃಷ್ಟಿಯಿಂದ ಮಹತ್ವದ ಘಟ್ಟ ಹಾಗಾಗಿ ಬೇಂದ್ರೆಯವರ ಸಾಹಿತ್ಯದ ಓದು ನಮ್ಮ ಸಂಸ್ಕೃತಿಯ, ಭಾಷೆಯ, ಅನುಭವದ ಸಾಚಾತನವಾಗಿ ಕಂಡರೆ ಆಶ್ಚರ್ಯಪಡಬೇಕಾಗಿಲ್ಲ.

ಶುದ್ಧ ಸಾಹಿತ್ಯ ವಿಮರ್ಶೆಯ ದೃಷ್ಟಿಯಿಂದ ಕೂಡ ಬೇಂದ್ರೆಯವರ 'ನಾಕುತಂತಿ'ಗಿಂತ ಹಿಂದಿನ ಶ್ರೇಷ್ಟಕವನಗಳು ವಿಶ್ವದ ಶ್ರೇಷ್ಟ ಸಾಹಿತ್ಯ ಕೃತಿಯಾಗಿ ನಿಲ್ಲಬಲ್ಲವು. ಕೆಲವು ವೇಳೆ ಅವುಗಳೆಲ್ಲವನ್ನು ಮೀರಬಲ್ಲಷ್ಟು ಉತ್ಕೃಷ್ಟ ಸಾಹಿತ್ಯವನ್ನು ಬೇಂದ್ರೆಯವರು ಕೊಟ್ಟಿದ್ದಾರೆ ಎಂಬುದರಲ್ಲಿ ಉತ್ಪ್ರೇಕ್ಷೆಯಿಲ್ಲ. ಒಬ್ಬ ಸಾಮಾನ್ಯ ಓದುಗನಿಂದ ಹಿಡಿದು ಪ್ರಬುದ್ಧ ವಿಮರ್ಶಕನವರೆಗೆ ಖುಷಿ ಕೊಡಬಲ್ಲ, ವಿಶಿಷ್ಟ ಅನುಭವಗಳೊಂದಿಗೆ ಸ್ಪಂದಿಸಬಲ್ಲ ಶಕ್ತಿ ಬೇಂದ್ರೆಯವರ ಕವನಗಳಿಗಿವೆ.

ಒಂದು ಕವನ ತನ್ನ ಒಡಲೊಳಗಿರುವ ಅನುಭವ, ಕಾಣ್ಕೆಯನ್ನು ತನ್ನದೇ ಆದ ಭಾಷೆಯ, ಲಯದ ಮೂಲಕ ತನ್ನ ಎಲ್ಲ ಸ್ತರದ ಓದುಗರನ್ನು ಸೆಳೆದುಕೊಳ್ಳುವ ಗಾರಡಿಗತನದಿಂದಾಗಿ ಆಪ್ಯಾಯಮಾನವಾಗುವುದು ಬೇಂದ್ರೆ ಕಾವ್ಯಗಳ ವೈಶಿಷ್ಟ್ಯವಾಗಿದೆ.

ಬೇಂದ್ರೆಯವರಿಗೆ ಮಾಸಗಳಲ್ಲಿ 'ಶ್ರಾವಣ' ಹೆಚ್ಚು ಪ್ರಿಯವಾದುದು. ಏಕೆಂದರೆ ಶ್ರಾವಣ ಕೇವಲ ಮಾಸವನ್ನು ಮಾತ್ರ ಸೂಚಿಸುವುದಿಲ್ಲ. ಶೃತಿಯ ಕಾರ್ಯವನ್ನು ಸೂಚಿಸುತ್ತದೆ. ಅದಕ್ಕೆ ಕಾರಣಗಳೂ ಇವೆ. ಈ ದೇಶಕ್ಕೆ ಸ್ವಾತಂತ್ರ್ಯ ಬಂದದ್ದು, ಅರವಿಂದರ ಮಾಸ ಆದದ್ದೂ, ಹೆಚ್ಚಿನ ಹಬ್ಬ ಹರಿದಿನಗಳು ಕಾಣಿಸಿಕೊಳ್ಳುವುದು, ಕೃಷ್ಣ ಹುಟ್ಟಿದ್ದೂ ಎಲ್ಲಾ ಇದೇ ಮಾಸದಲ್ಲಿ ಕೃಷ್ಣ 'ಮಾಸಾನಾಂಮಾರ್ಗಶೀರ್ಷೋಹಂ' ಎಮದು ಗೀತೆಯಲ್ಲಿ ಹೇಳಿದ್ದರೂ ಬೇಂದ್ರೆಯವರು ಮಾತ್ರ ಶ್ರಾವಣವನ್ನು ನೆನೆಯುತ್ತಾರೆ.

ಬೇಂದ್ರೆಯವರು ನವೋದಯ ಸಾಹಿತ್ಯ ರೂಪುತಳೆಯುತ್ತಿದ್ದ ಕಾಲದಲ್ಲಿ ಅಂದರೆ ಸು. ೧೯೨೫ರ ಸುಮಾರಿಗೆ ಕರ್ನಾಟಕ ಸಾಂಸ್ಕೃತಿಕವಾಗಿ ಮೈಸೂರು, ಮಂಗಳೂರು, ಧಾರವಾಡವೆಂದು ಮೂರು ಮುಖ್ಯ ವಿಭಾಗಗಳಾಗಿ ಹಂಚಿಹೋಗಿತ್ತು. ಈ ಮೂರೂ ಭಾಗಗಳಲ್ಲಿಯೂ ಸರಿಸುಮಾರು ಒಂದೇ ಕಾಲದಲ್ಲಿ ಹೊಸರೀತಿಯ ಬರವಣಿಗೆ ಒಂದು ಭಾಗಕ್ಕೂ ಇನ್ನೊಂದು ಭಾಗಕ್ಕೂ ಸಂಬಂಧವಿಲ್ಲದಂತೆ ರೂಪುಗೊಳ್ಳತೊಡಗಿತ್ತು. ಈ ದಿಸೆಯಲ್ಲಿ ಮೈಸೂರು ಭಾಗದಲ್ಲಿ ಬಿ.ಎಂ.ಶ್ರೀಯವರ 'ಇಂಗ್ಲೀಷ್‌ಗೀತೆಗಳು' ಸಂಕಲನದ ಮೂಲಕ ತೆರೆದ ನವೋದಯ ಹೆಚ್ಚು ಪ್ರಜ್ವಲವಾದುದಾಗಿದ್ದನ್ನು ಗಮನಿಸಿದ್ದೇವೆ. ಮಂಗಳೂರು ವಿಭಾಗದಲ್ಲಿ ಪಂಜೆ ಮಂಗೇಶರಾಯರ ಶಿಷ್ಯ ಗೋವಿಂದ ಪೈಯವರ ಸಾಧನೆ ಮಾತ್ರ ಪ್ರಮುಖವಾದುದಾಗಿದೆ. ೧೯೩೦ರಲ್ಲಿ ಇವರು ಪ್ರಕಟಿಸಿದ 'ಗಿಳಿವಿಂಡು' ಕವನಸಂಕಲನ ಮತ್ತಿತರ ಸಂಶೋಧನೆ ಕಾರ್ಯಗಳೇ ಈ ಭಾಗದ ನವೋದಯ ಸಾಹಿತ್ಯದ ಕಾರ್ಯವಾಗಿದೆ.

ಧಾರವಾಡ ವಿಭಾಗದಲ್ಲಿ ಬೇಂದ್ರೆಯವರ ನಾಯಕತ್ವದಲ್ಲಿ ರೂಪುಗೊಂಡ 'ಗೆಳೆಯರ ಗುಂಪು'ನ ಚಟುವಟಿಕೆಗಳೇ ಈ ಭಾಗದ ನವೋದಯ ಸಾಹಿತ್ಯದ ಪ್ರಮುಖ ಕಾರ್ಯವಾಗಿದ್ದು ಬೇಂದ್ರೆಯವರ ಕವಿ ಜೀವನವೂ 'ಗೆಳೆಯರ ಗುಂಪಿನ' ಚಟುವಟಿಕೆಯೊಂದಿಗೇ ರೂಪುಗೊಂಡಿತೆಂಬುದು ಐತಿಹಾಸಿಕ ಸಂಗತಿಯಾಗಿದೆ. ಬೇಂದ್ರೆಯವರು ಧಾರವಾಡದ ರಾಷ್ಟ್ರೀಯ ಅಧ್ಯಾಪಕರಾಗಿದ್ದ ಸಂದರ್ಭದಲ್ಲಿ ಅದೇ ಶಾಲೆಯ ಅಧ್ಯಾಪಕರುಗಳಾದ ಶ್ರೀಧರ ಖಾನೋಳ್ಕರ, ಬಿರ್ಲಿ ಬಿಂದು ಮಾಧವ,

ಶಂ.ಬಾ.ಜೋಷಿ ಮೊದಲಾದ ಹಿರಿಯರನ್ನು ಕಟ್ಟಿಕೊಂಡು ೧೯೨೩ರಲ್ಲಿ 'ಗೆಳೆಯರ ಗುಂಪುವಿಗೆ' ಅಭಿದಾನ ನೀಡಿದರು. 'ಜಯಕರ್ನಾಟಕ ಪತ್ರಿಕೆಯ' ಗೆಳೆಯರ ಗುಂಪಿನ ಸಂಸ್ಕೃತಿ ಚಟುವಟಿಕೆಗೆ ಮುಖ್ಯ ವೇದಿಕೆಯಾಗಿ ದೊರಕಿತು. ಇದರೊಂದಿಗೆ ಧಾರವಾಡ ಕರ್ನಾಟಕ ಮಹಾ ವಿದ್ಯಾಲಯದ ಮುಖ ಪತ್ರವಾದ 'ಸ್ವಧರ್ಮ' ಪತ್ರಿಕೆಯ ಸಂಪಾದಕತ್ವವೂ ಬೇಂದ್ರೆಯವರ ಪಾಲಿಗೆ ದೊರಕುತ್ತಿದ್ದರಿಂದ ಗೆಳೆಯರ ಗುಂಪು ನಡೆಸುತ್ತಿದ್ದ ಸಾಹಿತ್ಯ ಚಟುವಟಿಕೆಗಳು ಹೊರ ಜಗತ್ತನ್ನು ತಲುಪಲು ಇವು ಮುಖ್ಯ ವೇದಿಕೆಗಳಾದವು. ಹೊಸ ತರುಣ ಲೇಖಕರನ್ನು, ಕವಿಗಳನ್ನು ಪ್ರೋತಾಹಿಸುವುದು ರವೀಂದ್ರನಾಥ ಟಾಗೋರ್, ಅರವಿಂದ ವಿ. ಈ ಎಮರ್ಸನ್ ಮೊದಲಾದ ಸಾಹಿತಿಗಳನ್ನು ಕುರಿತು ಪ್ರಬಂಧ ಮತ್ತು ವಿಮರ್ಶನ ಸಾಹಿತ್ಯಗಳನ್ನು ಮಂಡಿಸುವುದು, ಅವರ ಅಭಿಪ್ರಾಯಗಳನ್ನು ಪತ್ರಿಕೆಯಲ್ಲಿ ಪ್ರಕಟಿಸುವುದಕ್ಕೆ ಇದು ಸೂಕ್ತ ವೇದಿಕೆಯಾಗಿತ್ತು.

ಶ್ರೀ ಬೇಂದ್ರೆಯವರ ಗೆಳೆಯರ ಗುಂಪನ್ನು ಕುರಿತು 'ಗಿರಡ್ಡಿ ಗೋವಿಂದರಾಜು' ರವರ ಮಾತುಗಳ ಮೂಲಕ ಹೆಚ್ಚು ಸ್ಪಷ್ಟಪಡಿಸಿಕೊಳ್ಳಬಹುದು. "ಕನ್ನಡದ ನವೋದಯ ಸಾಹಿತ್ಯದ ಆರಂಭ ಕಾಲದಲ್ಲಿ ಕರ್ನಾಟಕ ಸಾಂಸ್ಕೃತಿಕವಾಗಿ ಮೂರು ಮುಖ್ಯ ಭಾಗಗಳಲ್ಲಿ ಹಂಚಿಹೋಗಿತ್ತು. ಒಂದು ಕಡೆ ಮಂಗಳೂರು, ಇನ್ನೊಂದು ಕಡೆ ಮೈಸೂರು, ಮತ್ತೊಂದು ಕಡೆ ಧಾರವಾಡ ಈ ಸಾಂಸ್ಕೃತಿಕ ಹಂಚಿಕೆಯ ಕೇಂದ್ರಗಳಾಗಿದ್ದವು. ಈ ಮೂರು ಭಾಗಗಳಲ್ಲೂ ಹೆಚ್ಚು ಕಡಿಮೆ ಒಂದೇ ಕಾಲಕ್ಕೆ ಹೊಸ ರೀತಿಯ ಬರವಣಿಗೆ ಆರಂಭವಾಯಿತು. ಈ ಮೂರು ಭಾಗಗಳಿಂದಲೂ ಬಂದ ಸಾಹಿತ್ಯ ರಾಜಕೀಯ, ಸಾಂಸ್ಕೃತಿಕ, ಸಾಮಾಜಿಕ, ಭೌಗೋಳಿಕ ಕಾರಣಗಳಿಂದ ಭಿನ್ನವಾಗಿತ್ತು. ಆದರೂ ಆ ಭಿನ್ನತೆಯನ್ನು ಮೀರಿದ ಒಂದು ಐಕ್ಯವೂ ಇತ್ತು. ದೇಶದ ಸ್ವಾತಂತ್ರ್ಯ ಚಳುವಳಿ, ಗಾಂಧಿವಾದ, ಕರ್ನಾಟಕ ಏಕೀಕರಣ, ಭಾಷೆ-ಸಂಸ್ಕೃತಿಗಳ ಪುನರುಜ್ಜೀವನ, ಸುಧಾರಣಾವಾದ, ಇಂಗ್ಲಿಷ್ ರೋಮ್ಯಾಂಟಿಕ್ ಕಾವ್ಯದ ಪ್ರಭಾವ ಇತ್ಯಾದಿಗಳು ಆ ಕಾಲದ ಸಾಹಿತ್ಯಕ್ಕೆ ಒಟ್ಟಿನಲ್ಲಿ ವಿಶಾಲವಾದ ಏಕತೆಯನ್ನು ಒದಗಿಸಿದವು, ಆದರೆ ಈ ಉದ್ದೇಶ ಪ್ರಕಟವಾದ ರೀತಿಗಳು ಮಾತ್ರ ಆಯಾ ಭಾಗಗಳಿಗೆ ವಿಶಿಷ್ಟವಾಗಿದ್ದವು. ಆಯಾ ಭಾಗಗಳು 'ಎದುರಿಸಿದ-ಕರ್ಷಣಗಳು ತೀವ್ರತೆಯೂ ಬೇರೆಯಾಗಿತ್ತು. ಹಾಗೆಯೇ ಅಭಿವ್ಯಕ್ತಿಯ ಪ್ರೇರಣೆಗಳೂ ಬೇರೆಯಾಗಿದ್ದವು. ಈ ಭಿನ್ನತೆಯಿಂದಾಗಿಯೇ ಅವುಗಳ ಕಾವ್ಯಸತ್ವ ಹಾಗೂ ಒಳರಚನೆಗಳಲ್ಲಿ ಸೂಕ್ಷ್ಮವಾದ ಹಲವಾರು ವ್ಯತ್ಯಾಸಗಳು ಕಾಣಿಸಿಕೊಂಡಿವೆ. ಕನ್ನಡ ಕಾವ್ಯ ಪರಂಪರೆಯ ಅಭ್ಯಾಸದ ದೃಷ್ಟಿಯಿಂದ ಈ ವ್ಯತ್ಯಾಸಗಳು ಮಹತ್ವದಾಗಿದೆ. ಆದರೆ ದುರ್ದೈವದಿಂದ ಕನ್ನಡವ

ಆಧುನಿಕ ಸಾಹಿತ್ಯದ ಇತಿಹಾಸವನ್ನು ಒಟ್ಟಾರೆಯಾಗಿ ಬರೆಯುವಾಗ ಈ ಭಿನ್ನತೆಯನ್ನು ಅಷ್ಟಾಗಿ ಗಣನೆಗೆ ತೆಗೆದುಕೊಂಡಿಲ್ಲ. ಉದಾಹರಣೆಗೆ, ಬಿ.ಎಂ.ಶ್ರೀ ಅವರ 'ಇಂಗ್ಲಿಷ್ ಗೀತಗಳು' ಆ ಕಾಲದ ಕನ್ನಡ ಎಲ್ಲ ಕವಿಗಳನ್ನೂ ಪ್ರಭಾವಿಸಿದವೆಂಬ ಮಾತನ್ನೇ ನೋಡಬಹುದು. ಹನ್ನೆರಡು ಗೀತೆಗಳ ಮೊದಲ ಆವೃತ್ತಿ ಪ್ರಕಟವಾದದ್ದು ೧೯೨೧ರಲ್ಲಿ ಮತ್ತೆ ೨೪ ಕವಿತೆಗಳು ಬಂದದ್ದು, ೧೯೨೪ರಲ್ಲಿ ಡಿ.ವಿ.ಗುಂಡಪ್ಪನವರ 'ಕರ್ನಾಟಕ ಜನಜೀವನ' ಪತ್ರಿಕೆಯಲ್ಲಿ ಈ ಎರಡೂ ಪ್ರಕಟಣೆಗಳು ಉತ್ತರ ಕರ್ನಾಟಕವನ್ನು ತಲುಪಲಿಲ್ಲವೆಂದೇ ಹೇಳಬೇಕು. ಮೈಸೂರಿನ ಭಾಗದಲ್ಲೂ ತೀ.ನಂ.ಶ್ರೀ, ಕುವೆಂಪುರಂಥ ಕೆಲವರನ್ನು ಬಿಟ್ಟರೆ, ಎಷ್ಟೋ ಜನ ಇವುಗಳನ್ನು ಗಮನಿಸಿದರೂ ತಿಳಿಯದು. ೧೯೨೬ರಲ್ಲಿ ಬೆಂಗಳೂರಿನ ಸೆಂಟ್ರಲ್ ಕಾಲೇಜು ಕರ್ನಾಟಕ ಸಂಘದವರು ಪ್ರಕಟಿಸ ೬೩ ಕವಿತೆಗಳ ಸಂಕಲನವೇ ಹೆಚ್ಚು ಜನರ ಗಮನಕ್ಕೆ ಬಂದದ್ದು. ಈ ವೇಳೆಗಾಗಲೇ ಬೇಂದ್ರೆಯವರು ಇಲ್ಲಿ ಕಾವ್ಯದಲ್ಲಿ ಅದರಲ್ಲೂ ಸ್ವತಂತ್ರ ಕಾವ್ಯರಚನೆಯಲ್ಲಿ ಹಲವಾರು ಪ್ರಯೋಗಗಳನ್ನು ಮಾಡಿಯಾಗಿತ್ತು. ಅವರ ಮೊದಲ ಪ್ರಕಟಿತ ಕವಿತೆ 'ತುತ್ತೂರಿ' ಬಂದದ್ದು ೧೯೧೮ 'ಪ್ರಭಾತ' ಪತ್ರಿಕೆಯಲ್ಲಿ ಅದೇ ಹೊತ್ತಿಗೆ ಅವರು 'ಕೋಗಿಲೆಗೆ' ಎಂಬ ಕವಿತೆಯೊಂದನ್ನು ಬರೆದಂತೆ ತಿಳಿಯುತ್ತದೆ.

೧೯೨೨ರಲ್ಲಿ ಅವರ 'ಕೃಷ್ಣಕುಮಾರಿ' ಚಿಕ್ಕಪುಸ್ತಿಕೆಯಾಗಿ ಪ್ರಕಟವಾಯಿತು. ಅವರ ಸುಪ್ರಸಿದ್ಧ ಕವಿತೆ 'ಬೆಳಗು' ಸ್ವಧರ್ಮ ಪತ್ರಿಕೆಯಲ್ಲಿ ಮೊದಲು ಪ್ರಕಟವಾಯಿತು. ಅದು ೧೯೨೬ರ ಸುಮಾರಿಗೆ ಆ ಹೊತ್ತಿಗೆ ಆಗಲೇ ಅವರು ಪ್ರಸಿದ್ಧ ಕವಿಯಾಗಿದ್ದರು. ಬಿ.ಎಂ.ಶ್ರೀಯವರ ಕವಿತೆಯ ರೀತಿ ಕಣ್ಣು ಕೊರೆಸುವಷ್ಟು ಹೊಸತಾಗಿತ್ತೆಂಬುದು ನಿಜ, ಆದರೆ ಅವರ ಕವಿತೆಯ ರೀತಿಗೂ ಬೇಂದ್ರೆ, ಮದುರ ಚೆನ್ನ, ಆನಂದಕಂದ, ಶ್ರೀಧರ ಖಾನೋಳ್ಕರರ ಕಾವ್ಯದ ರೀತಿಗೂ ಬಹಳ ಅಂತರವಿದೆ. ಇಲ್ಲಿಯ ಕವಿಗಳನ್ನು ಆಳವಾಗಿ ಪ್ರಭಾವಿಸಿದ್ದು ದೇಶೀಯ ಮೂಲಗಳು ಇಂದಿಗೂ ಈ ಭಾಗದ ಸಾಹಿತ್ಯವನ್ನು ಅನನ್ಯತೆಗಾಗಿ ಹೋರಾಡುವುದನ್ನು ಬಿಟ್ಟಿಲ್ಲ ಮತ್ತು ಈ ಅನನ್ಯತೆ ಕೇವಲ ಈ ಭಾಗದ ಉಪಭಾಷೆಯ ಬಳಕೆಗೆ ಸೀಮಿತವಾದುದ್ದಲ್ಲ ಎಂಬುದನ್ನು ಮರೆಯುವಂತಿಲ್ಲ"[೧]

"ಹೀಗೆ ಗೆಳೆಯರ ಗುಂಪು'ನಿಂದ ಅನೇಕರು ಇಂದು ಉತ್ತಮ ಸಾಹಿತಿಗಳಾಗಿದ್ದಾರೆ. ಆ ಕಾಲಕ್ಕೆ ಏನಿತ್ತು? ಸರಕಾರದ ಬಹುಮಾನವೂ ಇದ್ದಿಲ್ಲ, ಅಧಿಕಾರದ ಆಸೆಯೂ ಇದ್ದಿಲ್ಲ. ಅದೊಂದು ಸಾಹಿತಿ ಗೆಳೆಯರು ಒಂದು ಕಡೆ ಕೂಡುವುದು ಸಾಹಿತ್ಯದ ಬಗ್ಗೆ ಚರ್ಚಿಸುವುದು, ತಮ್ಮ ತಮ್ಮ ಕೃತಿಗಳನ್ನು ಓದುವುದು,

೧. ಗಿರಡ್ಡಿ ಗೋವಿಂದರಾಜು, ಆಧುನಿಕ ಕನ್ನಡ ಕಾವ್ಯಉತ್ತರ, ಕರ್ನಾಟಕದ ಕೊಡುಗೆ.

[illegible]

[illegible]

ಹೊಸ ಹೊಸ ವಿಚಾರಗಳನ್ನು ಕುರಿತು ಮಾತುಕತೆಯಾಡುವುದು, ಕೇವಲ ಇದರಿಂದಲೇ ಅಲ್ಲವೇನು ಬೇಂದ್ರೆಯವರು ಎಷ್ಟೋ ಗೆಳೆಯರನ್ನು ಸಾಹಿತಿಗಳನ್ನಾಗಿ ಮಾಡಿದುದು? ಇಂಥ ಗುಂಪುಗಳು ಇಂದು ನಮಗೆ ಎಲ್ಲೆಡೆಗೆ ಬೇಕಾಗಿವೆ. ಈ ರೀತಿಯ ಗುಂಪುಗಳನ್ನು ಇಂದಿಗೂ ಮೈಸೂರು, ಬೆಂಗಳೂರು, ಮಂಗಳೂರು, ಧಾರವಾಡ, ಹುಬ್ಬಳ್ಳಿ ಮುಂತಾದ ಕಾಲೇಜುಗಳಿದ್ದಲ್ಲಿ ದೊಡ್ಡ ಶಹರಗಳಲ್ಲಿ ಪ್ರಾರಂಭಿಸಬೇಕು, ದೊಡ್ಡ ಶಹರಗಳಲ್ಲಿ ಅನೇಕ ಸಾಹಿತಿಗಳೂ, ಕಾಲೇಜಿನಲ್ಲಿ ಕನ್ನಡ ಹೇಳುವ ಪ್ರಾಧ್ಯಾಪಕರೂ ಪದವಿ ಪರೀಕ್ಷೆಗಳಿಗೆ ಕನ್ನಡ ವಿಷಯವನ್ನು ತೆಗೆದುಕೊಂಡ ವಿದ್ಯಾರ್ಥಿಗಳೂ ಇರುತ್ತಾರೆ. 'ಉದಯೋನ್ಮುಖ ಕಿರಿಯ ಲೇಖಕರೂ ಸಿಗುತ್ತಾರೆ. ಇಂಥವರೆಲ್ಲ ಆಗಾಗ ಒಂದು ಕಡೆ ಕೂಡಬೇಕು. ಸಾಹಿತ್ಯದ ಬಗ್ಗೆ ಚರ್ಚಿಸಬೇಕು. ಹೊಸ ಹೊಸದಾಗಿ ಬರುವ ಕೃತಿಗಳ ಕುರಿತು ವಿಮರ್ಶೆ ನಡೆಸಬೇಕು. ಹೀಗೆ ಮಾಡುವುದರಿಂದ ಹೊಸಬರಿಗೆ ಹಾದಿ ಹುಡುಕಿ ಕೊಟ್ಟಂತಾಗುವುದು. ಹಿರಿಯರಿಂದ ಕಿರಿಯರಿಗೆ ಮಾರ್ಗದರ್ಶನವೂ ಸಿಕ್ಕಂತಾಗುವುದು. ಆದರೆ ಒಂದು ಮಾತ್ರ; ಇಂಥ ಗುಂಪುಗಳಿಗೆ ಗೆಳೆಯರ ಗುಂಪೆಂದೇ ಕರೆಯಬೇಕು. ಸಾಹಿತಿಗಳ ಸಂಘ ಎಂದರೆ ಮತ್ತೆ ಅದರ ಹಿಂದೆ ಹದಿನೆಂಟು ಹುದ್ದೆಗಳು ಏಳುತ್ತವೆ. ಆಗ ಎಲ್ಲರೂ ತಾನು ಅಧ್ಯಕ್ಷನಾಗಬೇಕು; ಕಾರ್ಯದರ್ಶಿಯಾಗಬೇಕು ಎನ್ನುವ ಕಚ್ಚಾಟ ಪ್ರಾರಂಭವಾಗಿ, ಮುಖ್ಯ ಗುರಿಯನ್ನು ಮರೆತುಬಿಡುತ್ತಾರೆ. 'ಗೆಳೆಯರಗುಂಪು' ಎಂದರೆ ಅಲ್ಲಿ ಯಾವುದಕ್ಕೂ ಅವಕಾಶವೇ ಇಲ್ಲ. ಅಲ್ಲಿ ಆತ್ಮೀಯ ಗೆಳೆಯರಾಗಿ, ಸರಿಸಮಾನರಾಗಿ ಇರುತ್ತಾರೆ. ಅಂಥ ಆತ್ಮೀಯ ವಾತಾವರಣದಲ್ಲಿ ಅಧಿಕಾರದ ಯಾವ ಭೂತವೂ ಏಳುವುದಿಲ್ಲ"[೧] ಎಂಬುದಾಗಿ ಕನ್ನಡನಾಡಿನ ಅತ್ಯಂತ ಜನಪ್ರಿಯ ಕವಿ ಚುಟುಕಗಳ ಬ್ರಹ್ಮ ದಿನಕರದೇಸಾಯಿಯವರು ಹೇಳಿದ್ದಾರೆ.

ಹೀಗೆ ಬೇಂದ್ರೆಯವರು ಸ್ವಾತಂತ್ರ್ಯ ಹೋರಾಟದ ಕಲ್ಪನೆಯನ್ನು ಕುರಿತು ಬರೆದಿರುವುದನ್ನು ನಾವು ಗಮನಿಸಬಹುದಾಗಿದೆ. ಬೇಂದ್ರೆಯವರು ಪ್ರಕೃತಿ ಗೀತೆಗಳು, ಸಾಮಾಜಿಕ ಹಿನ್ನೆಲೆಯನ್ನು ಕುರಿತು ಬರೆದ ಗೀತೆಗಳು ದಾಂಪತ್ಯದ ಗೀತೆಗಳು ಹೀಗೆ ಹಲವಾರು ರೀತಿಯ ಗೀತೆಗಳಲ್ಲಿ ನಮ್ಮ ದೇಶ ಸ್ವಾತಂತ್ರ್ಯವನ್ನು ಪಡೆಯಲು ಎಷ್ಟೆಲ್ಲ ಆಪತ್ತುಗಳನ್ನು ಎದುರಿಸಬೇಕಾಗಿ ಬಂತು. ಅಂತಹ ಸಂದರ್ಭದಲ್ಲಿ ಬೇಂದ್ರೆಯವರು ಬರೆದ 'ಗರಿ' ಸಂಕಲನ ಭಾವಗೀತೆಗಳು ತುಂಬ ಪ್ರಸಿದ್ಧಿಯನ್ನು ಪಡೆದುಕೊಂಡಿವೆ.

---

೧. ದಿನಕರ ದರ್ಶನ- ದಿನಕರ ದೇಸಾಯಿ, ಪು. ೨೪೮-೪೯, ಗರಿ ಅರವತ್ತೊಂದು ಸಂ. ನುಡಿ, ಪು. ೮, ೧೦-೧೨.

ಅದರಲ್ಲಿ ಸ್ವಾತಂತ್ರ್ಯ ಹೋರಾಟವನ್ನು ಕುರಿತು ಬರೆದಿರುವ ಭಾವಗೀತೆಗಳನ್ನು ಕಾಣಬಹುದಾಗಿದೆ.

'ಗರಿ' ಕವನಸಂಗ್ರಹದೊಳಗಿನ 'ನರಬಲಿ' ಕವನವು ಬೇಂದ್ರೆಯವನ್ನು ಜೈಲಿಗೆ ಕಳುಹಿಸಿತು. ಪೋಲಿಸರು ಬೇಂದ್ರೆಯವರ ಮನೆಯ ಶೋಧನೆ ಮಾಡಲು ಬಂದಾಗ ಮನೆಯ ಹೊರಗೆ ಹಾದಿಯ ಮೇಲೆ ಚಳುವಳಿಗಾರರು 'ಗಾಂಧೀಮಹಾರಾಜಕೀ ಜೈ' ಎಂದು ಕೂಗಿದರು. ಬೇಂದ್ರೆಯವರ ಸದ್ಯದ ಹಿರಿ ಮಗ-ಪಾಂಡುರಂಗ ಆಗ ತೊಟ್ಟಿಲಲ್ಲಿ ಕುಣಿದಾಡುವ ಕೂಸು. ಅದು ಹೊರಗಿನ 'ಗಾಂಧೀಮಹಾರಾಜಕೀ' ಎಂಬ ಕೂಗಿಗೆ 'ಜೈ' ಎಂದು ಕೂಗಿ ತೊಟ್ಟಿಲಲ್ಲಿ ಎದ್ದು ನಿಂತಿತು ಆಗೀನ ಕಾಲವೇ ಅಂಥದು. ಚಿಕ್ಕಮಕ್ಕಳಲ್ಲಿಯೂ ರಾಷ್ಟ್ರೀಯಪ್ರಜ್ಞೆ ಹೊರಚಿಮ್ಮುವ ಕಾಲ ಅದು.

ಬೇಂದ್ರೆಯವರನ್ನು ಹಿಂಡಲಗಿ ಜೈಲಿನಲ್ಲಿ ಇಟ್ಟರು. ಅಲ್ಲಿ ಬೇಂದ್ರೆಯವರು ತಮ್ಮ ಗೆಳೆಯರಾದ ಜೋಗ ಅವರಿಗೆ ರಾಮದಾಸ ಚರಿತ 'ದಾಸಭೋಧ' ಓದಿ ಹೇಳುತ್ತಿದ್ದರಂತೆ. ಚಳುವಳಯ ಕಾಲಕ್ಕೆ ಅನೇಕರು ತಮ್ಮ ತಮ್ಮ ಸ್ವಾಧ್ಯಾಯ, ಲೇಖನಕಾರ್ಯ ಜೈಲಿನಲ್ಲಿ ಮಾಡಿದ ದಾಖಲೆಗಳು ಸಾಕಷ್ಟಿದೆ.

ಬೇಂದ್ರೆಯವರ ಕಕ್ಕನವರ ಆರೋಗ್ಯ ಕೆಟ್ಟಿದ್ದರಿಂದ ಬೇಂದ್ರೆಯವರು ಜೈಲಿನಿಂದ ಹೊರಬಂದರು. ಕೆಲವು ತಿಂಗಳು ಮುಗದ ಎಂಬ ಹಳ್ಳಿಯಲ್ಲಿ ನಜರ ಕೈದಿಯಾಗಿ ಬೇಂದ್ರೆಯವರು ಇರಬೇಕಾಯಿತು. ಮುಗದಹಳ್ಳಿಯ ಒಂದು ದೇವಿಯ ಗುಡಿಯಲ್ಲಿ 'ಭೃಂಗದ ಬೆನ್ನೆರಿ ಬಂತು' ಎಂಬ ಕವನದ ನಿರ್ಮಿತಿ ಆಯಿತು.[೧]

ಬೇಂದ್ರೆಯವರ 'ಭಾವಗೀತೆ' ಕವನದ ಮೂಲಕ ಸ್ಪಷ್ಟಪಡಿಸಿಕೊಳ್ಳಬಹುದು. ಸೃಷ್ಟಿಕ್ರಿಯೆ ಎನ್ನುವುದು.

"ಒಡಲ ನೂಲಿನಿಂದ ನೇಯುವಂತೆ ಜೇಡಜಾಲಾ
ತನ್ನ ದೈವರೇಷೆ ಬರೆಯುವಂತೆ ತಾನೆ ಭಾಲಾ
ಉಸಿರಿನಿಂದ ಹುಡುಕುವಂತೆ ತನ್ನ ಬಾಳಮೇಲಾ
ಭೃಂಗದ ಬೆನ್ನೇರಿ ಬಂತು..."[೨]

೧. ಮೂರು ಮುಖ (ಬೇಂದ್ರೆ ಜೀವನ), ಪುಟ. ೨೪, ೨೫.
೨. ಭಾವಗೀತ - ೩, ನಾದಲೀಲೆ, ಪುಟ. ೮೪.

ಸೃಷ್ಟಿ ಯಾವಾಗ ಸಾಧ್ಯ ಎಂಬ ಪ್ರಶ್ನೆಯನ್ನು ಈ ಕವನ ಮೂಲಭೂತವಾಗಿ ಕೇಳಿಕೊಳ್ಳುತ್ತದೆ. ಸ್ವಾತಂತ್ರ್ಯದ ಸ್ಥಿತಿಯಲ್ಲಿ ಮಾತ್ರ ಸೃಷ್ಟಿ ಸಾಧ್ಯವೆಂಬ ಉತ್ತರವನ್ನು ಈ ಕವನ ಕಂಡುಕೊಂಡು ಅದಕ್ಕೆ ಜೀವನದ ಬಗೆಗಿನ ಪ್ರೇಮವೇ ಆಧಾರವೆಂಬ ನಿಲುವನ್ನು ವ್ಯಕ್ತಪಡಿಸುತ್ತದೆ. ಈ ಪ್ರಶ್ನೆ ಜೀವನದೊಳಗಿನ ಸೃಷ್ಟಿಶೀಲತೆಗೂ ಸಂಬಂಧಪಟ್ಟಿಯೇ ಹೊರಟದ್ದಾಗಿರುತ್ತದೆ. ಅಂದರೆ ಜೀವನದೊಳಗೂ ಮೂಲಭೂತವಾಗಿ ಸ್ವತಂತ್ರ ಪ್ರೇಮವಿದ್ದಾಗ ಮಾತ್ರ ಸೃಷ್ಟಿ ಪ್ರಕ್ರಿಯೆ ಸಾಧ್ಯವೆಂಬ ನಿಲುವು ಕವನದಿಂದ ಹೊರಡುತ್ತದೆ.

"ತಿರುಗುತ್ತಿತ್ತು ತನ್ನ ಸುತ್ತು ಮೂಕ ಭಾವ ಯಂತ್ರಾ
ಗರ್ಭಗುಡಿಯ ಗರ್ಭದಲ್ಲಿ ಪಡಿನುಡಿಯುವ ಮಂತ್ರ
ಮೂಡಿ ಮೂಡಿ ಮುಳುಗಿ ಮೊಳಗುವೊಲು ಸ್ವತಂತ್ರಾ
ಭೃಂಗದ ಬೆನ್ನೇರಿ ಬಂತು..."[೧]

"ಎಲ್ಲೆಲ್ಲೂ ಸೃಷ್ಟಿದೇವಿಗಿಟ್ಟಧೂಪ ಧೂಮಾ
ಲಹರಿ ಲಹರಿ ಕಂಡಬಳ್ಳಿ, ಚಿತ್ತರಂಗಭೂಮಾ
ದಾಂಗುಡಿಗಳ ಬಿಡುತ್ತಲಿತ್ತು ಅರಳಲಿತ್ತು ಪ್ರೇಮಾ
ಭೃಂಗದ ಬೆನ್ನೇರಿ ಬಂತು.. .. .. .. "[೨]

ಸ್ವಾತಂತ್ರ-ಸೃಷ್ಟಿ-ಪ್ರೇಮಗಳ ಮುಕ್ಕೂಟ ನೋವನ್ನೂ ಸಾವನ್ನೂ ಎದುರಿಸಲೇಬೇಕು ಎಂಬ ಜೀವನದ ಅನಿವಾರ್ಯತೆಯನ್ನು ಕವನದ ಮುಂದಿನ ಪದ ಸೂಚಿಸುತ್ತದೆ. "ಅಯ್ಯೋ ನೋವೆ, ಅದರ ಸಾವೆ, ವಿಫಲ ಸಫಲ ಜೀವಾ" ಎಂಬಲ್ಲಿ ಈ ನೋವನ್ನೂ ಗೆದ್ದು ಮೂಡುವ ಸಫಲತೆಯ ಸೂಚನೆ ಮೂಡುತ್ತದೆ. ಸೃಷ್ಟಿಕ್ರಿಯೆ ಎನ್ನುವುದು ಪ್ರಾಣ ತಂತುಗಳನ್ನು ಹೆಣೆಯುವ ಕೆಲಸ; ಇಂಥ ಸ್ಥಿತಿಯಲ್ಲಿ ಚೆಲುವು ಸೃಷ್ಟಿಯಾಗುತ್ತದೆ. ಆಗ ಕಾಳನ (ಕಾಳ-ಕಾಲ=ಯಮ) ಹಾಜರಿಯೂ ಆಗುತ್ತದೆ. ಆದರೆ ಕವನದ ಅಂತಿಮ ಹಂತದಲ್ಲಿ 'ಹಿಗ್ಗ'ನ್ನು ಪ್ರಕಟಿಸುತ್ತದೆ. ಇದು ಜೀವನದ ಎಲ್ಲ ರುದ್ರ ಅನುಭಾವಗಳ ಎದುರೂ ಪ್ರತಿಭೆ ಅಥವಾ ಸೃಷ್ಟಿಕ್ರಿಯೆ ಗೆದ್ದು ನಿಲ್ಲುತ್ತದೆಂಬ ಇತ್ಯಾತ್ಮಕ ದನಿಯಲ್ಲಿ ಕವನ ಕೊನೆಗೊಳ್ಳುತ್ತದೆ.

---

೧. ಭಾವಗೀತ - ೪, ನಾದಲೀಲೆ, ಪುಟ. ೮೫.
೨. ಭಾವಗೀತ - ೫, ನಾದಲೀಲೆ, ಪುಟ. ೮೫.

ಇನ್ನು ಬೇಂದ್ರೆಯವರ ಕಾವ್ಯಜೀವನದ ಆರಂಭ ಹಂತದಿಂದ ಅಂತಿಮ ಹಂತದವರೆಗೂ ಅವರನ್ನು ವಿಶೇಷವಾಗಿ ಪ್ರಭಾವಿಸಿ, ಕಾವ್ಯವನ್ನು ಕುರಿತ ಅವರ ದೃಷ್ಟಿಕೋನವನ್ನು ನಿರ್ದೇಶಿಸುತ್ತಿದ್ದುದೆಂದರೆ ಅರವಿಂದರ ವಿಚಾರಧಾರೆ, "೧೯೧೬ರಲ್ಲಿ ನನಗೆ ಶ್ರೀ ಅರವಿಂದರ 'ಆರ್ಯ' ಮಾಸಪತ್ರಿಕೆ ಕೈಗೆ ಬಂದು ೧೯೧೯ರಲ್ಲಿ ಅದರೊಳಗೆ ಕಿಟ್ಸ್ ಕವಿಯ ವಿಷಯವಾಗಿ ಬರೆದ ಒಂದು ಮಾತು ನನ್ನ ಅಂತಸ್ ಚಿತ್ತದ ಮೇಲೆ ಮುದ್ರೆಯನ್ನೊತ್ತಿತ್ತು. .... ನನ್ನ ಅರವಿಂದರ ತತ್ವ ಶ್ರದ್ಧೆ, ಭಕ್ತಿ ೧೯೧೬ರಿಂದ ೧೯೭೭ರವರೆಗೆ ಅಖಂಡವಾಗ ಬಂದಿದೆ"[೧] ಎಂದು ಬೇಂದ್ರೆಯವರು ಹೇಳಿದ್ದಾರೆ. ಈ ದಿಸೆಯಲ್ಲಿ ಅರವಿಂದರ "Future poetry" ಎಂಬ ಉಪನ್ಯಾಸಗಳ ಪುಸ್ತಕ ಬೇಂದ್ರೆಯವರ ಕಾವ್ಯಮೀಮಾಂಸೆಯನ್ನು ತಮ್ಮ ಕಾವ್ಯವನ್ನು ಕುರಿತ ಅವರ ಮೂಲಭೂತ ಧೋರಣೆಗಳನ್ನು ರೂಪಿಸಿದೆ.

೧೯೩೪ರ ಕಾಲಕ್ಕೆ ಬೇಂದ್ರೆಯವರು ಸೂರ್ಯೋಪಾಸನೆ ಮಾಡುತ್ತಿದ್ದರು. ಸಂಸಾರದ ಚಿಂತೆ ಹೆಚ್ಚಾಯಿತು. ತಮ್ಮನಾದ ಕೃಷ್ಣನಿಗಾಗಿ ಕಕ್ಕಿಯ ಬಳಗದ ಹುಡುಗಿಯನ್ನು ಆರಿಸಿ ವಿವಾಹನಡೆಯಿತು. ತಮ್ಮನು ಕಕ್ಕಿಯ ಹತ್ತಿರ ಉಳಿದುಕೊಂಡ ಬೇಂದ್ರೆಯವರು ತಮ್ಮ ಸಂಸಾರ ಎತ್ತಿಕೊಂಡು ಮರಳಿ ಧಾರವಾಡಕ್ಕೆ ಬಂದರು.

ಬೇಂದ್ರೆಯವರಿಗೆ ನೌಕರಿ ಇಲ್ಲ. ಅಣ್ಣ ಮಾಸ್ತಿಯವರು ಹೃದಯ ವೈಶಾಲ್ಯದಿಂದ ಬೇಂದ್ರೆಯವರಿಗೆ ಸಹಾಯ ನೀಡಿದರು. 'ಜೀವನ' ಪತ್ರಿಕೆಯ ಸಂಪಾದಕರನ್ನಾಗಿ ಮಾಡಿದರು. ಮಾಸ್ತಿಯವರೊಂದಿಗೆ ಬೇಂದ್ರೆಯವರು ಸಾಕಷ್ಟು ಪ್ರವಾಸ ಮಾಡಿದ್ದು ಈ ಕಾಲದಲ್ಲಿ ಅನೇಕ ಸ್ಥಳಗಳಲ್ಲಿ ಭಾಷಣ ಮಾಡುವುದು; ಕವಿತಾವಾಚನ ಮಾಡುವುದು ಬೇಂದ್ರೆಯವರ ಪ್ರಮುಖ ಕೆಲಸವಾಗಿತ್ತು. ಇದರಿಂದ ಸ್ನೇಹಿತರ, ಆತ್ಮೀಯರ ಬಳ್ಳಿ ಬೆಳೆಯುತ್ತ ಹೋಯಿತು. 'ಚಳಿಯಾಕೆ' ಕವನವನ್ನು ಹಾಡಲು ಮಾಸ್ತಿಯವರು ಸೂಚಿಸುತ್ತಿದ್ದರಂತೆ.

ನಮ್ಮ ಭಾರತದ ಸಂದರ್ಭದಲ್ಲಿ ಬ್ರಿಟಿಷರು ನೀಡಿದ ಇಂಗ್ಲಿಷ್ ಶಿಕ್ಷಣದ ಫಲವಾಗಿಯೇ ಈ ರಾಷ್ಟ್ರೀಯತೆಯ ಜಾಗೃತಿ, ತನ್ನತನದ ಅರಿವು ಮೂಡಿತೆಂಬುದು ಇತಿಹಾಸದ ಒಂದು ದೊಡ್ಡ ವ್ಯಂಗ್ಯವಾಗಿದೆ. ಇದರಿಂದ ೧೯ನೇ ಶತಮಾನದ ಉತ್ತರಾರ್ಧದಿಂದೀಚೆಗೆ ಭಾರತದ ಚರಿತ್ರೆ ಹೊಸ ದಿಕ್ಕಿನಲ್ಲಿ ಚಲಿಸಿ ಶತಮಾನಗಳಿಂದ ಮೂಕವಾಗಿದ್ದ ವರ್ಗಗಳು ನಿಧಾನವಾಗಿ ಚಲಿಸತೊಡಗಿದವು. ತಮ್ಮ ರಾಷ್ಟ್ರವನ್ನು

೧. ಕನ್ನಡದಲ್ಲಿ ಅರವಿಂದ ದರ್ಶನ; ರಾಜ್ಯ ಸಾಹಿತ್ಯ ಅಕಾಡೆಮಿ, ಬೆಂಗಳೂರು

ಸ್ವತಂತ್ರವಾಗಿಸುವ, ಹೊಸ ಭಾರತವನ್ನು ಕಟ್ಟುವ ಕನಸಿನಿಂದ ರೂಪುಗೊಂಡ ಈ ರಾಷ್ಟ್ರೀಯ ಚಳವಳಿ ನಮ್ಮ ಸಂಸ್ಕೃತಿಯನ್ನು ವಿಮರ್ಶಾತ್ಮಕವಾಗಿ ಪರೀಕ್ಷಿಸುವ ಅನೇಕ ಸಂಸ್ಥೆಗಳ ಮೌಲ್ಯಗಳ ವಿರುದ್ಧವೂ ಒಂದು ಸಾಂಸ್ಕೃತಿಕ ಆಂದೋಲನವನ್ನು ರೂಪಿಸಿತು. ಈ ಪ್ರಕ್ರಿಯೆಯೇ ಭಾರತದ ರೆನೆಸಾನ್ಸ್, ಭಾರತೀಯ ನವೋದಯ ಎಂದು ಖ್ಯಾತವಾಗಿದೆ. ಇದರ ಮೂಲ ಉದ್ದೇಶ ಭಾರತೀಯ ಸಂಸ್ಕೃತಿಯನ್ನು ನಿರಾಕರಿಸುವುದಾಗಿರಲಿಲ್ಲ. ಬದಲಿಗೆ ನಮ್ಮ ಸಂಸ್ಕೃತಿ ಕೂಡ ಶ್ರೇಷ್ಠವಾದುದು ಎಂಬ ಗಾಢ ನಂಬಿಕೆಯಿಂದ ಪುನರ್ ಮೌಲ್ವೀಕರಣದ ಅಸಲೀ ಪ್ರಯತ್ನ ಇವರದಾಗಿತ್ತು. ವಿವೇಕಾನಂದ, ತಿಲಕ್, ಅರವಿಂದ ಘೋಷ್, ರವೀಂದ್ರನಾಥ ಟ್ಯಾಗೋರ್, ರಾಜಾರಾಮ್ ಮೋಹನ್‌ರಾಯ್ ಈ ನೇತಾರರ ಮುಖ್ಯ ಹೋರಾಟ ಈ ಸಂಸ್ಕೃತಿಯ ಪುನರ್ ರಚನೆಯ ಗುರಿಯನ್ನೇ ಪ್ರಧಾನವಾಗಿ ಹೊಂದಿತ್ತು.

ಅಖಿಲ ಭಾರತದ ಮಟ್ಟದಲ್ಲಿ ಉಂಟಾದ ಈ ರೆನೆಸಾನ್ಸ್ (ನವೋದಯ) ಚಳುವಳಿಯ ಪ್ರಭಾವವೇ ಇಪ್ಪತ್ತನೆಯ ಶತಮಾನದ ಅಡಿಯಲ್ಲಿ ಕರ್ನಾಟಕದ ಚರಿತ್ರೆಯನ್ನೂ ರೂಪಿಸತ್ತು. ಇಪ್ಪತ್ತನೆಯ ಶತಮಾನದ ಮೊದಲ ದಶಕದಲ್ಲಿ ಭಾರತದ ಬದುಕಿನ ಎಲ್ಲ ಕ್ಷೇತ್ರಗಳಲ್ಲಿ ತುಂಬಿದ್ದ ಅದಮ್ಯ ಉತ್ಸಾಹ ತುಂಬು ಹೃದಯವಂತಿಕೆ ಹೊಸದನ್ನು ಕಟ್ಟುವ ಹಠ,ಹಳೆಯ ಕೊಳಕನ್ನು ನಾಶಮಾಡುವ ರೊಚ್ಚು - ಇದೆಲ್ಲದರ ಹಿನ್ನೆಲೆಯಲ್ಲಿ ಹೊಸ ಭಾರತದ ಬಗ್ಗೆ ಪ್ರೀತಿ ಬೆರೆತ ನಿರೀಕ್ಷೆ ಈ ಅಖಿಲ ಭಾರತದಮಟ್ಟದ ಸಂವೇದನೆ ನಮ್ಮ ಕರ್ನಾಟಕದಲ್ಲಿ ನಾಡು-ನುಡಿಯ ಅಭಿಮಾನವನೂ ಜಾಗೃತಗೊಳಿಸಿ ನಾಡನ್ನೂ ಹೊಸ ಯುಗಕ್ಕೆ ಪಾದಾರ್ಪಣ ಮಾಡಿಸಿದ್ದವು. ಹೀಗೆ ಇಪ್ಪತ್ತನೆ ಶತಮಾನದ ಆದಿಯಲ್ಲಿ ಕರ್ನಾಟಕದ ಚರಿತ್ರೆ ಹೊಸಯುಗಕ್ಕೆ ಕಾಲಿಟ್ಟ ಹಾಗೆಯೇ ನಮ್ಮ ಕನ್ನಡ ಕಾವ್ಯಕೂಡ ಹೊಸದಿಕ್ಕಿಗೆ ಹಬ್ಬಿತು. ಕಾವ್ಯದ ನೋಟ, ಬಂಧ, ದೃಶ್ಚಿಕ ಜಗತ್ತು ಕಂಡ ಕ್ರಾಂತಿಕಾರಕ ಬದಲಾವಣೆಯೇ ನವೋದಯ ಸಾಹಿತ್ಯವಾಗಿ ರೂಪುಗೊಂಡಿತು.

ಭಾರತದ ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ, ಇಂಗ್ಲೆಂಡಿನಲ್ಲಿ ರೌಂಡ್‌ಟೇಬಲ್ ಕಾನ್ಫರೆನ್ಸ್ ನಡೆದದ್ದು ಸರ್ವವಿದಿತ. ಅದನ್ನು ಕುರತು ಬೇಂದ್ರೆಯವರು "ಶೂನ್ಯ" ಎಂಬ ಮಾರ್ಮಿಕ ಕವನ ರಚಿಸಿದ್ದಾರೆ. ಅಂತಾರಾಷ್ಟ್ರೀಯಮಟ್ಟದ ಒಂದು ಗಂಭೀರ ಘಟನೆ ಹರಿತವಾದ ಚುಚ್ಚುಮಾತಿಗೆ ಇಲ್ಲಿ ಒಳಗಾಗಿದೆ.

ಬಂಡೀಗಾಲಿ ಹೊಟ್ಟೆಗೆ

ಗುಂಡುಕಲ್ಲ ತಲೆಯು

ಗುಂಡುಕಲ್ಲ್ಯ ತಲೆಗೆ

ಸೊನ್ನೆ ಸುತ್ತಿದೆ ಮಿದುಳು!

ದುಂಡುಮೇಜಿನ ಸುತ್ತ ಕುಳಿತ ದುಂಡು ದುಂಡು ಮಂದಿಯನ್ನು ಕವಿ ಇಲ್ಲಿ ವಿಡಂಬಿಸಿದ್ದಾನೆ. ಈ ಚಿತ್ರಗೋಷ್ಠಿಯ ಕೃತಿಮತೆ, ನಿಷ್ಫಲತೆ, ವೈಫಲ್ಯ ಮೊದಲಾದ ನಿಷೇಧಾತ್ಮಕ ಮೌಲ್ಯಗಳನ್ನು ಈ ಕವಿತೆ ತುಂಬ ಪ್ರಭಾವಶಾಲಿಯಾಗಿ ಚಿತ್ರಿಸುತ್ತದೆ.

ಬೇಂದ್ರೆಯವರು ಬರೆದ ಮೊದಲ ಕವನವಾದ ತುತ್ತೂರಿಯೇ ನಾಡು ನುಡಿಯ ಅಭಿಮಾನವನ್ನು ತುತ್ತೂರಿ ಊದಿ ಕೂಗಿ ಎಬ್ಬಿಸುವ ದೃಷ್ಟಿಕೋನವನ್ನು ಹೊಂದಿರುವಂತಹದು. ಸ್ವತಃ ತಾನು ಮಾರಾಠಿ ಭಾಷೆಯ ತೀವ್ರ ಸಂಪರ್ಕದಲ್ಲಿದ್ದು ಮರಾಠಿ ಕವಿಗಳಿಂದ ಪ್ರಭಾವಿತನಾಗಿ ಮರಾಠಿ ಭಾಷೆಯಲ್ಲಿ ಮೊದಲು ಕವನ ರಚಿಸಿಯೂ ಕನ್ನಡ-ನಾಡು-ನುಡಿಯ ಅಭಿಮಾನವನ್ನು ಕುರತು ಈ ಕವಿ ರಚಿಸಿರುವ ಕವನಗಳು ಈ ಹಿನ್ನೆಲೆಯಿಂದ ವಿಶಿಷ್ಟವಾಗಿ ಕಾಣುತ್ತದೆ. ವಾಸ್ತವವಾಗಿ ಬೇಂದ್ರೆಯವರ ಮೊದಲ ಕವನ ಮರಾಠಿ ಭಾಷೆಯಲ್ಲಿ ರಚಿತವಾದದ್ದು. "ನನ್ನ ಮೊದಲ ಕವನ ಕನ್ನಡದಲ್ಲಿಯಲ್ಲ ಮರಾಠಿ ಭಾಷೆಯಲ್ಲಿ "ಝೂಲೀ ವೀಸವಯಾಸ ಅಜತರಿ ಹೀ ಝೂಲೀನ ಕಾರ್ಯೇ ಆಶಿ' ಎಂದು ಪ್ರಾರಂಭವಾಗುತ್ತದೆ" ಎಂದು ಬೇಂದ್ರೆಯವರು ಹೇಳಿಕೊಂಡಿದ್ದಾರೆ. ಇಂತಹ ಕವಿ ಕನ್ನಡಿಗರು ಮರಾಠಿಗಳ ವಿರುದ್ಧ ದನಿ ಎತ್ತಿದಾಗ ಅಂತಹ ಪರಿಸರಕ್ಕೆ ಸ್ಪಂದಿಸಿ ನಾಡು-ನುಡಿಯ ಅಭಿಮಾನದ ಗೀತೆಗಳನ್ನು ರಚಿಸಿದ್ದು ಒಂದು ವೈಶಿಷ್ಟ್ಯ. 'ಗರಿ' ಸಂಕಲನದಲ್ಲಿ 'ಅಹಹ ಸ್ವಾತಂತ್ರ್ಯದೇವಿ', 'ತರುಣತಪಸ್ವಿ', 'ಕನಸಿನೊಳಗೊಂದು ಕಣಸು', '೩೩,೦೦೦೦೦೦೦', 'ನರಬಲಿ' 'ಹರಕೆ', ಹಂಪಿ ವಿಜಯನಗರದರ್ಶನ' - ಭಾವಗೀತೆಗಳು ಸ್ವಾತಂತ್ರ್ಯ ಹೋರಾಟ ಮತ್ತು ನಾಡುನುಡಿ ಅಭಿಮಾನಕ್ಕೆ ಸಂಬಂಧಪಟ್ಟ ಭಾವಗೀತೆಗಳಾಗಿವೆ.

ಬೇಂದ್ರೆಯವರು ಈ ಭಾವಗೀತೆಗಳನ್ನು ರಚಿಸುವಾಗ ಸ್ವಾತಂತ್ರ್ಯ ಹೋರಾಟ ಮತ್ತು ನಾಡು-ನುಡಿಯ ಮಹತ್ವವನ್ನು ಎತ್ತಿಹಿಡಿಯುವಾಗ ಒಂದು ವಿಶಿಷ್ಟವಾದ ದೃಷ್ಟಿಕೋನ ಪ್ರಚಲಿತವಾಗಿತ್ತು. ಅದು ವರ್ತಮಾನ ಕಾಲ ತನ್ನ ಸಸ್ವರೂಪ ಜ್ಞಾನವನ್ನು ಮರೆತದ್ದರ ದುರ್ವಿಪಾಕ ಎಂಬ ಪ್ರಲಬವಾದ ಭಾವನೆಯಿಂದಾಗಿ ನಮ್ಮ ಸಂಸ್ಕೃತಿಯ ಭೂತಕಾಲೆದೆಡೆ ಆಸೆಯಿಂದ ನೋಡುವಂತಹ, ದೃಷ್ಟಿಕೋನ ಅಂದರೆ ಸ್ವಾತಂತ್ರ್ಯಕ್ಕಾಗಿ

ಹೋರಾಡಲು ನಾಡು-ನುಡಿಯ ಅಭಿಮಾನವನ್ನು ಮರೆಸಲು ಬೇಕಾದ ಚೈತನ್ಯ ನೆಲೆಗಳನ್ನು ತಮ್ಮ ಪ್ರಾಚೀನ ಬದುಕಿನಿಂದ ಪಡೆಯುವ ಹವಣಿಕೆ ಅಂದು ಕಂಡುಬರುತ್ತಿದ್ದಿತು. ತಮ್ಮ ಆತ್ಮಪ್ರತ್ಯಯವನ್ನು, ಆತ್ಮಾಭಿಮಾನವನ್ನು ಮರೆಸಲು ನಮ್ಮ ಈ ಸಂಸ್ಕೃತಿ ಹಿಂದೊಮ್ಮೆ ಬಹುಚೆನ್ನಾಗಿ ಬಾಳಿದ ಕಾಲವೊಂದಿತ್ತೆಂದು ವರ್ತಮಾನ ಕಾಲಕ್ಕೆ ಬೇಕಾದ ಚಾರಿತ್ರಿಕ, ಆಧ್ಯಾತ್ಮಿಕ, ಧಾರ್ಮಿಕ ಮೌಲ್ಯಗಳನ್ನು ನಮ್ಮ ಪ್ರಾಚೀನ ಬದುಕಿನಿಂದ ಮರಳಿ ಪಡೆಯುವ ದೃಷ್ಟಿ ಅವರದಾಗಿತ್ತು. ನಮ್ಮ ನವೋದಯ ಕವಿಗಳನ್ನು ಪ್ರಧಾನವಾಗಿ ಪ್ರಭಾವಿಸಿದ ವಿವೇಕಾನಂದ, ಅರವಿಂದರು ತಮ್ಮ ಪ್ರಾಚೀನ ಆಧ್ಯಾತ್ಮಿಕ ಮೌಲ್ಯ ಬಹು ಎತ್ತರದ ದನಿಯಲ್ಲಿ ಎತ್ತಿಹಿಡಿದವರು, ಈ ಸನ್ನಿವೇಶವನ್ನು ಡಿ.ಆರ್.ನಾಗರಾಜು ಅವರ ಮಾತುಗಳಲ್ಲಿ ಹೆಚ್ಚು ಸ್ಪಷ್ಟವಾಗಿ ತಿಳಿಯಬಹುದು.

"ವಸಾಹತುಶಾಹೀ ಆ ಗಮನಕ್ಕೆ ಉಂಟಾದ ಪ್ರತಿಕ್ರಿಯೆಗಳೇ ಕನ್ನಡ ನವೋದಯದ ಮೂಲಕಾರಣ. ಅಖಿಲ ಭಾರತದ ಮಟ್ಟದಲ್ಲಿ ಉಂಟಾದ ಭಾರತೀಯ ನವೋದಯಕ್ಕೂ ಕೂಡ ಈ ಪ್ರತಿಕ್ರಿಯೆಯೇ ಕಾರಣ, ಪರಕೀಯರ ಆಳ್ವಿಕೆಗೆ ತುತ್ತಾದ ನಾಡಿನ ಸಂಸ್ಕೃತಿಯಲ್ಲಿ ಒಂದು ನಿರ್ದಿಷ್ಟ ಘಟ್ಟದಲ್ಲಿ ಪರಕೀಯ ಶಿಕ್ಷಣದ ಕಾರಣಕ್ಕಾಗಿಯೇ ಸ್ವ-ಪ್ರಜ್ಞೆ ಉಂಟಾಗುತ್ತದೆ. ತಮ್ಮನ್ನು ಆಳುತ್ತಿರುವ ಜನರ ಸಂಸ್ಕೃತಿ ತಮ್ಮ ಸಂಸ್ಕೃತಿಗಿಂತ ಶ್ರೇಷ್ಟವಾದದ್ದು ಎಂಬ ಅಂತರ್ಗತ ಅರಿವಿನಿಂದಲೇ ಈ ಪ್ರಕ್ರಿಯೆ ಪ್ರಾರಂಭವಾಗುತ್ತದೆ. ಆದರೆ ಇದು ರಾಷ್ಟ್ರೀಯ ಸ್ವಾಭಿಮಾನದ ಘಟ್ಟ ಕೂಡಾ ಹೌದು. ಆದ್ದರಿಂದ ತಮ್ಮ ಸಂಸ್ಕೃತಿಯು ಕೂಡ ಘನತೆಯಿಂದ ಬಾಳಿದ ಸಂಭ್ರಮದಿಂದ ಮೆರೆದ ಘಟ್ಟವೊಂದಿತ್ತು ಎಂದು ತಮ್ಮ ಸಂಸ್ಕೃತಿಯ ಭೂತಕಾಲದ ಕಡೆಗೆ ಆಸೆಯಿಂದ ನೋಡುತ್ತಾರೆ. ವರ್ತಮಾನದ ಘೋರ ಅಪಮಾನವನ್ನು ಮರೆಯಲು ಭೂತದ ಕಡೆಗೆ ಮರೆಹೋಗುವ ವಿಷಾದಮಯ ಪ್ರಯತ್ನ ಇದು. ನಿಧಾನಕ್ಕೆ ಈ ರೀತಿಯ ಆತ್ಮಾಭಿಮಾನದ ಮೂಲಕ ಹೊಸಸಂಸ್ಕೃತಿಯೊಂದನ್ನು ಕಟ್ಟಿಕೊಳ್ಳಲು ಯತ್ನಿಸುತ್ತಾರೆ. ತಮ್ಮನ್ನು ಆಳುವ ಜನಗಳ ಸಂಸ್ಕೃತಿಯ ಹಲವು ಮುಖ್ಯ ಅಂಶಗಳು ಮತ್ತು ತಮ್ಮ ಸಂಸ್ಕೃತಿಯ ಹಲವು ಮುಖ್ಯ ಅಂಶಗಳು ಮತ್ತು ತಮ್ಮ ಸಂಸ್ಕೃತಿಯ ಮೂಲಾಧಾರಗಳನ್ನು ಬೆರಸಿ ಈ ಹೊಸ ಸಂಸ್ಕೃತಿಯನ್ನು ನಿರ್ಮಿಸುತ್ತಾರೆ. ಆದರೆ ಈ ಸಂಸ್ಕೃತಿ ನಿರ್ಮಾಣದ ಪ್ರಕ್ರಿಯೆಯಲ್ಲಿ ತುಂಬಾ ಸ್ವಾರಸ್ಯಕರ ಅಂಶವೊಂದಿದೆ. ಅದೇಂದರೆ ಸಂಸ್ಕೃತಿಯೊಂದು ಇಲ್ಲಿ ಬರೀ ಮೌಲ್ಯಗಳ ಹಂತದಲ್ಲಿರುವುದಿಲ್ಲ.

ಇದೊಂದು ಹೋರಾಟದ ಸಾಧನವೂ ಹೌದು ರಾಷ್ಟ್ರೀಯ ಸ್ವಾತಂತ್ರ್ಯ ಹೋರಾಟದಲ್ಲಿ ಈ ಸಂಸ್ಕೃತಿ-ನಿರ್ಮಾಣ ಅತ್ಯಂತ ದೊಡ್ಡ ಹೋರಾಟದ ಸಾಧನವೂ ಹೌದು"[೧]

ಇಷ್ಟೆಲ್ಲ ವಿವರಗಳನ್ನು ಇಲ್ಲಿ ನೀಡಲು ಕಾರಣವೆಂದರೆ ಈ ಸಂಸ್ಕೃತಿ ನಿರ್ಮಾಣದ ಪ್ರಕ್ರಿಯೆಯ ಪ್ರಧಾನ ಧಾರೆಗೆ ಬೇಂದ್ರೆಯವರೂ ಹೊರತಾಗಿಲ್ಲ ಎಂಬ ಕಾರಣಕ್ಕಾಗಿ, ಬೇಂದ್ರೆಯವರ ಸ್ವಾತಂತ್ರ ಹೋರಾಟ ಮತ್ತು ನಾಡು-ನುಡಿಯ ಅಭಿಮಾನಕ್ಕೆ ಸಂಬಂಧಿಸಿದ ಭಾವಗೀತೆಗಳು ವರ್ತಮಾನ ಕಾಲತನ್ನ ಸಸ್ವರೂಪ ಜ್ಞಾನವನ್ನು ಮರೆತಿದ್ದರ ದುರ್ವಿಪಾಕ ಎಂಬ ನೆಲೆಯಿಂದ ತಮ್ಮ ಆತ್ಮಾಭಿಮಾನವನ್ನು ಆತ್ಮ ಪ್ರತ್ಯಯವನ್ನು ಮೆರೆಸಲು, ತಮ್ಮ ಭೂತದೆಡೆ ನೋಡುವ ಗತಕಾಲದಿಂದ ಚಾರಿತ್ರಿಕ, ಧಾರ್ಮಿಕ, ಆಧ್ಯಾತ್ಮಿಕ ಮೌಲ್ಯಗಳನ್ನು ಮರಳಿ ಪಡೆಯುವ ಹವಣಿಕೆಯ ಅಡಿಪಾಯದ ಮೇಲೆಯೆ ಕಟ್ಟಲ್ಪಟ್ಟಿವೆ.

"ಅಹಹ ಸ್ವಾತಂತ್ರ್ಯ ದೇವಿ ಬಹುಶಃ ಬೇಂದ್ರೆಯವರು ಸ್ವಾತಂತ್ರ್ಯವನ್ನು ಕುರಿತು ಬರೆದ ಮೊದಲನೆ ಭಾವಗೀತೆ ಇಲ್ಲಿ ಸ್ವಾತಂತ್ರ್ಯವನ್ನು ಕುರಿತು.

"ದೇವಮಾನವರೆಲ್ಲ ಕಂಡ ಕನಸೇ
ಬಾರೆ, ಮನಸಿನೊಳು ನೆಲಸು ನನಸೇ
ನೆನಸುತಿಹೆ ಹಸಿದ ಚೇತನಯ ತಿನಿಸೇ
ಬಾರೆ, ನನ್ನ ಎದೆಯೊಳಗೆ ಜನಿಸೇ
ಜೇನುಹನಿ ಜಿನುಗಾಗಿ ಹನಿವ ಜಗವೇ
ಬಾರೆ, ಮುಗಿಲನೀಸುತಿಹ ಖಗವೇ
ಜಿಂಕೆಯೊಲು ದಿಂಕಿಡುವ ಸೊಂಕು ಸೊಗವೇ
ಬಾರೆ, ನಗೆಯಾಗಿಸಿ ನಗುವ ಮೊಗವೇ

ಮರಣವನು ಸಟಿಗೊಳಿಸುವಂಥ ಕಾವೇ
ಬಾರೆ, ನಂದಿನಭ್ರಮರ ಭಾವೇ
ಸಮರದೊಳಗವತರಿಪ ವಿಶ್ವಜೀವೇ
ಬಾರೆ, ಸೊಗಸುಳ್ಳ ಸುರರ ಸಾವೇ"[೨]

---

೧. ಶಕ್ತಿ ಶಾರದೆಯ ಮೇಳ, ಡಿ.ಆರ್.ನಾಗರಾಜ.
೨. ಗರಿ – ದ.ರಾ.ಬೇಂದ್ರೆ ೧೯೧೮, ಧಾರವಾಡ, ಪು. ೪.

ಹೀಗೆ ಮೇಲಿನಂತೆ ಸ್ವಾತಂತ್ರ್ಯವನ್ನು ಕುರಿತು ಹಸಿದ ಚೇತನೆಯ ತಿನಿಸೆ, 'ಜೇನುಹನಿ' ಜಿಂಕೆಯೊಲು, ನಂದನ–ಭ್ರಮರ–ಭಾವೇ ವಿಶ್ವಜೀವೇ ಎಂದು ವಿವಿಧ ರೂಪಗಳಲ್ಲಿ ವರ್ಣಿಸುತ್ತಾ ಬರುತ್ತಾರೆ.

ಅಂತಿಮವಾಗಿ

"ಕಲೆಯೊಳಗೆ ಸೆಲೆಯಾಗಿ ಹರಿದ ನೀರೇ
ಬಾರೆ, ಕಂಡ ಕಣಿಯನ್ನು ಸಾರೇ
ಕೃತಯುಗದ ಸಾಮ್ರಾಜ್ಯ ನೆಲಸೀ ತೋರೇ
ಕಣ್ಣ–ಕಟ್ಟಿರುವ ಧ್ರುವನ ತಾರೇ"[೧]

ಎಂದು ಮತ್ತೆ ಕೃತಯುಗದ ಸಾಮ್ರಾಜ್ಯ ನೆಲಸುವುದಕ್ಕಾಗಿ ಸ್ವಾತಂತ್ರ್ಯವನ್ನು ಅದರ ವಿವಿಧ ಸುಂದರ ಮುಖಗಳ ವರ್ಣನೆಯನ್ನು ಕವಿ ಇಷ್ಟು ಹಂಬಲಿಕೆಯಿಂದ ಮಾಡುತ್ತಿದ್ದಾರೆ. 'ಹಂಪಿ ವಿಜಯನಗರದರ್ಶನ' ಕವಿತೆ ಗತಕಾಲದಲ್ಲಿ ಉದ್ಬುದ್ದವಾಗಿದ್ದ ರಾಜ್ಯವೊಂದು ಇಂದು ಹಾಳಾಗಿ ಹುಡಿಗೂಡಿ ಹೋದದಕ್ಕಾಗಿ ಸಂಕಟ ವಿಷಾದಗಳಿಂದ ಮರುಗುವ ಕವಿತೆ, ಕೊನೆಗೆ ಈ ತಾತ್ವಿಕ ನಿಲುವಿನಲ್ಲಿ ಕೊನೆಗೊಳ್ಳುತ್ತದೆ.

"ಬಿದ್ದ ರಾಜ್ಯವಿದಲ್ಲಿ, ಉದ್ಬುದ್ಧವಾಗಿದ್ದು
ಎದ್ದ ರಾಜ್ಯದ ಮೊಳಕೆಯಿದು, ಇದರ ಬಳಿಯಲ್ಲಿ
ಇದ್ದು ಸಂಜೀವನದ ಜಪಿಸುವಂತಹಯೋಗಿ
ಕೊಂಪೆ ಹಂಪೆಯು ಇದಲ್ಲ
ಬುದ್ದಿಯೆಣಿಸಿತು. ಅಂತರಂಗದಧಿನಾಯಕನು
.. ..
.. ..
ಶುದ್ಧ ಮುಂಡಿಗೆಯಿದೆಂದು
ಕರ್ಮಯೋಗಿಯ ಬಳಿಗೆ ಯೋಗೀಶ್ವರನು ನಿಂದು
ಕರ್ಮದ ಅಕರ್ಮದೊಳಮರ್ಮಮಂ ತಿಳಿಸಿಸದ್
ಧರ್ಮಮಂ ಸತತ ನಡೆಸಿದರೆ, ಧ್ರುವವಿಜಯವೆಂ
ದಂದು ತೋರಿಸಿದ ತೆರದಿ

೧. ಗರಿ – ದ.ರಾ.ಬೇಂದ್ರೆ ೧೯೧೮, ಧಾರವಾಡ, ಪು. ೪.

ಧರ್ಮ-ಕರ್ಮದ ಪುರಾತನ ಪುರಗಳಿವು ಪೂರ್ವ
ಧರ್ಮ ಬಲದಿಂದೇರಿ ಕರ್ಮಬಲದಿಂದಿಳಿದು
ಮರ್ಮದೊಳು ನೆಡುವಂತೆ ಸಪ್ರಯೋಗಿಕವಾಗಿ
ಕಲಸುವುವು ತತ್ವವೆಂದು"[೧]

ಒಂದು ಸಾಮ್ರಾಜ್ಯ ಏಳ್ಗೆ ಹೊಂದಲು 'ಸದ್‌ಧರ್ಮ' ಮತ್ತು 'ಕರ್ಮದ ಅಕರ್ಮ' ಒಂದುಗೂಡಬೇಕೆಂಬ ತತ್ತ್ವವನ್ನು 'ಹಂಪಿ ವಿಜಯನಗರದದರ್ಶನ' ತೋರುತ್ತಿದೆ. ಈ ತಾತ್ವಿಕತೆಯಲ್ಲಿ ಕವಿತೆ ಮುಕ್ತಾಯ ಹೊಂದುವುದರಿಂದ ಅಂತಹ 'ಸದ್‌ಧರ್ಮ' ಮತ್ತು ಕರ್ಮದ ಅಕರ್ಮ' (ಅಂದರೆ ವಿದ್ಯಾರಣ್ಯರಂತಹ ಯೋಗಿಗಳು ಕರ್ಮ ಮಾಡಿಯೂ ಅಕರ್ಮದಲ್ಲಿರುವಂತಹ ನಿಲುವು) ಇಂದು ನಮ್ಮ ನಾಡಿಗೂ ಅವಶ್ಯಕವಾಗಿದೆ ಎಂಬ ಧ್ವನಿಯಲ್ಲಿ ಕವನ ಮುಕ್ತಾಯ ಹೊಂದುತ್ತದೆ.

ಇಲ್ಲಿ ತನ್ನ ನಾಡು-ನುಡಿಯನ್ನು ಕಟ್ಟಿಕೊಳ್ಳಲು ತನ್ನ ಪ್ರಾಚೀನ ಬದುಕಿಗೆ ಮೊರೆ ಹೋಗಿ ಅಲ್ಲಿಯ ಚಾರಿತ್ರಿಕ ಧಾರ್ಮಿಕ ಮೌಲ್ಯಗಳನ್ನು ಮರಳಿಪಡೆಯುತ್ತಿರುವ ಹವಣಿಕೆ ಕಂಡುಬರುತ್ತಿದೆ ಎಂದು ಮತ್ತೊಮ್ಮೆ ಹೇಳಬೇಕಾಗಿಲ್ಲ.

'ಪಂಪನೆನದು' ಕವನ ಕೂಡ ಪಂಪನ ಮತ್ತು ಪಂಪನ ಕಾಲದ ಚಾರಿತ್ರಿಕ, ಆಧ್ಯಾತ್ಮಿಕ, ಧಾರ್ಮಿಕಮೌಲ್ಯಗಳನ್ನು ಕೀರ್ತಿಸಿ ಆ ಮೌಲ್ಯಗಳು ಮತ್ತೆ - ಮರಳಬೇಕೆಂಬ ನೆಲೆಯಲ್ಲಿಯೇ ವಿಹರಿಸುವಂತಹ ಕವನವಾಗಿದೆ.

"ಒಬ್ಬ ಇಬ್ಬರೇನು ತ್ಯಾಗಿಭೋಗಿಯಾಗಿ ಹೋದರು?
ಒಬ್ಬನಿಂದ ಒಬ್ಬ ಮೇಲು ವೀರ ಕವಿಗಳಾದರು
ಶ್ರೀ ಸರಸ್ವತೀಯು ದುರ್ಗೆವರದ ಹಸ್ತವಿಟ್ಟರೆ?
ಈ ಸಕಾಲದಲ್ಲಿ ಪಂಪನಾಥ ಜನರು ಹುಟ್ಟರೆ?"[೨]

ಕನ್ನಡನಾಡು, ನಾಡದೇವಿಯಂತೆ ಕನ್ನಡದ ಆದಿಕವಿಯ ಬಗೆಗೆ ಹೆಮ್ಮೆ ಅಭಿಮಾನದಿಂದ ಪಂಪನ ನೆನೆದು, ಹಾಗೆಯೇ ಹೊಸಗನ್ನಡದ ನವೋದಯ ಕವಿ 'ಮುದ್ದಣ'ನ ಬಗೆಗೆ ಆದರದಿಂದ ನುಡಿದಿದ್ದಾರೆ.

---

೧. ಗರಿ - ದ.ರಾ.ಬೇಂದ್ರೆ ೧೯೩೩, ಧಾರವಾಡ, ಪು. ೧೪.
೨. ಗರಿ - ದ.ರಾ.ಬೇಂದ್ರೆ ೧೯೨೮, ಧಾರವಾಡ, ಪು. ೪೨.

ಸಂಜೆ ಸೇರಿತು ಬಂದು ಕನ್ನಡ ನಾಡಿನೊಳು
ಮಂಜು ಮುಸುಗಿದ ಕತ್ತಲೆಯ ಗೂಡಿಸಿತೋ?
ನಂಜೇರಿ ನಿದ್ದೆಗೈದಿತೋ? ಸತ್ತಿತೋ ಜೀವ?
ಮಿಡುಕಿಲ್ಲದಾಯಿತಾಗ
ಮುಂಜಾವಿನವಳ ತಂಬೆಲರೊಡನೆ ಮುದ್ದಣನ
ಹುಂಜವೆಕ್ಕಿಕ್ಕಿ ಕೂಗಿದ ಮೇಲೆ ಆ ದನಿಯ
ಸಜೀವವೆಬ್ಬಿಸಿತು ಸಾಸಿಗರ ಹಿಂಜರಿಯ
ದಂಥ ಚೈತನ್ಯವನ್ನು

ಹೀಗೆ ಮುದ್ದಣನ ಮೂಲಕ ಕನ್ನಡನಾಡು–ನುಡಿಯ ಬಗ್ಗೆ ಕವಿ ಬೇಂದ್ರೆಯವರು ಹೇಳಿದ್ದಾರೆ.

ಹಾಗೆಯೇ ಕರ್ನಾಟಕದ ಗತವೈಭವವನ್ನು ನೆನೆದು ಅಂದಿನ ದುರ್ಗತಿಗೆ ಮರುಗಿದ ಕವಿ ಮುಂದಿನ ಏಳ್ಗೆಗಾಗಿ ಯೋಚಿಸದೆ ಇಲ್ಲ.

"ಹೋಗೋಣ ಬಾ। ಇನ್ನೂ ಸೀಮೆಯನು ದಾಟಿ॥
ಪಂಗಡವ ಪಂಗಡವ ವಿಂಗಡಿಸಿ ಕೆಟ್ಟು
ಸಂಗಡಿಸಿ ಕೂಡಿರುವ ಬಾಳುವೆಯ ಗುಟ್ಟು
ಕಂಗೊಳಿಸೆ ಹಾಗಿರುವ ಬಿರುದನ್ನು ತೊಟ್ಟು
ಹೋಗೋಣ ಬಾ ಇನ್ನು ಸೀಮೆಯನುದಾಟಿ"[೧]

ಕನ್ನಡ ನಾಡಹಬ್ಬದ ಉಗ್ಗಡಣೆಗಾಗಿ ಬರೆದದ್ದು, ಛಲ, ಹಠವನ್ನು ಮತ್ತು ಪಂಗಡವನ್ನು ಬಿಟ್ಟು ಒಂದಾಗಿ "ಸೀಮೋಲ್ಲಂಘನ' ಮಾಡೋಣವೆಂದು ಸಂಗಡಿಗರಿಗೆ ಕರೆಯುತ್ತಾರೆ.

ಹೀಗೆ ಮೊದಲ ಹಂತದಲ್ಲಿ ಕಾಲಮಾನದ ಪ್ರಧಾನಧಾರೆಯೊಂದಿಗೆ ಹೆಜ್ಜೆ ಹಾಕಿದ ಕವಿ ಸರಳವಾದ ವರ್ಣನೆಗಳೊಂದಿಗೆ, ಸರಳವಾದ ತಾತ್ವಿಕ ನಿಲುವುಗಳನ್ನು ತಳೆದು ಈ ವಸ್ತುವನ್ನು ನಿರ್ವಹಿಸಿರುವುದು ಕಂಡುಬರುತ್ತದೆ. ಕಾವ್ಯಸತ್ವವನ್ನು ತನ್ನತನವನ್ನು ಮೈಗೂಡಿಸಿಕೊಂಡು ಭಾಷೆ–ಭಾವಗಳ ಸಾಮರಸ್ಯ ಸಾಧಿಸುತ್ತ ಮುಂದೆ ಅಂದರೆ ಕವಿಯ ಮುಂದಿನ ಘಟ್ಟದಲ್ಲಿ ರಚಿತವಾಗಿರುವ "ಕನಸಿನೊಳಗೊಂದು

---

೧. ಬೇಂದ್ರೆಸಾಹಿತ್ಯ ವಿಹಾರ – ಜಿ.ಎಸ್.ಭಟ್ಟ್, ಪ್ರ.ಮು. ೧೯೯೯, ಪು. ೩೬.

ಕಣಸು" ಮತ್ತು "೩೩,೦೦೦೦೦೦೦", ಭಾವಗೀತೆಗಳು ಈ ವಸ್ತುವಿನ ದೃಷ್ಟಿಯಿಂದ ಸತ್ವಶಾಲೀ ಭಾವಗೀತೆಗಳಾಗಿವೆ. ವಾಸ್ತವವಾಗಿ ಈ ವಸ್ತುವನ್ನು ಕುರಿತು ಅಂದರೆ 'ಸ್ವಾತಂತ್ರ್ಯಹೋರಾಟ' ಮತ್ತು ನಾಡು-ನುಡಿಯ ಅಭಿಮಾನವನ್ನು ಮೆರೆಸುವ ವಸ್ತುಗಳನ್ನು ಕುರಿತು ಬೇಂದ್ರೆಯವರು ರಚಿಸಿರುವ ಮಹತ್ವಪೂರ್ಣ ಭಾವಗೀತೆಗಳೂ ಈ ಎರಡು ಆಗಿವೆ. ಬೇಂದ್ರೆಯವರು ರಚಿಸಿದ 'ನರಬಲಿ' ಕವನದಿಂದಾಗಿ ಅವರು ಸೆರೆಮನೆ ವಾಸವನ್ನು ಅನುಭವಿಸಬೇಕಾಯಿತು. ೧೯೩೨ರಲ್ಲಿ ಜಯಕರ್ನಾಟಕದಲ್ಲಿ ಪ್ರಕಟವಾದ 'ನರಬಲಿ' ಕವನದಿಂದಾಗಿ ೧೯೩೨ರಲ್ಲಿ ಹಿಂಡಲಗಾಲದಲ್ಲಿ ಮತ್ತು ಮುಗದದಲ್ಲಿ ಕವಿ ಜೈಲುವಾಸವನ್ನು ಅನುಭವಿಸಿದರೆಂಬ ಐತಿಹಾಸಿಕ ಪ್ರಾಮುಖ್ಯತೆಯನ್ನು ದಾರ್ಷ್ಟ್ಯದಿಂದ ಮಂಡಿಸುವ ಕವನವಾಗಿದೆ.

"ನಿಂದಿಹರಿದೊ ಇಗೊ!
ಎಕ್ಕಡ ಮೆಟ್ಟಿಹ ಎಕ್ಕಲ ಬಂಟರು
ಉಕ್ಕಡ ಗಾತ್ರದ ಉಕ್ಕಡದವರು
ಕನ್ನಡ ಹೊತ್ತಿಸಿ ಕಣ್ಣುಗಳಲ್ಲಿ
ಮಂಡಿಸಿ ಕೆನ್ನೀರ್ ಜಳಕವನು
ಏರಿಸೆ ರುಂಡದ ಹೂವುಗಳ
ಹಾಕಲು ಮದ್ದಿನ ಧೂಪವನು
ಬಾರಿಸೆ ಗುಂಡಿನ ಗಂಟೆಗಳ
ಬಂದಿತು ಬಂದಿತು ನೈವೇದ್ಯ
ನೀತಿಯ ಭೂತವೆ ಹೊರಡಿಲ್ಲಂದೆ
ದಯೆಯ ದೆವ್ವವೇ ನೀ ಹೊರಡು
ಕರುಳಿನ ಮರುಳೇ ಓಡಿಲ್ಲಿಂದ
ನ್ಯಾಯರಾಕ್ಷಸನೆ ನೀನೋಡು
ಬಲಗಾಲ್ ಬುಡದಿಂ' ಬಿಡುಗಡೆ ಬಿಡಿಸಲು
ನರಬಲಿಯೋ ಬೇಕು!
ಇದುವೆ ಕಾಳಿಯ ಪೂಜೆಯು ಶುದ್ಧ!
ಇದಕ್ಕೆ ಹುಂಬರು ಎಂಬರು ಯುದ್ಧ"[೧]

---

೧. ಗರಿ – ಸಂ. ವಾಮನ ಬೇಂದ್ರೆ, ಪು. ೬೪, ಮುದ್ರಣ – ೧೯೩೨.

ಬ್ರಿಟಿಷರ ವರ್ಣನೆಯನ್ನು ವ್ಯಂಗ್ಯವಾಗಿ ನಿರೂಪಿಸಿ, 'ನರಬಲಿ'ಯ ಅವಶ್ಯಕತೆಯನ್ನು ದಾರ್ಷ್ಟ್ಯದಿಂದ ಗಂಟೆ ಹೊಡೆದು ಸಾರುವ ಇಲ್ಲಿಯ ನಿಷ್ಠೂರ ನುಡಿಗಳು ಬಹುಷಃ ಬೇಂದ್ರೆಯವರ ಬಂಧನಕ್ಕೆ ಕಾರಣವಾಗಿರಬಹುದು. ಈ ರೀತಿಯ ಬಂಧನಕ್ಕೆ ಅವರು ಒಳಗಾಗಿದ್ದಾರೆಂಬ ಕಾರಣದಿಂದ ಬೇಂದ್ರೆಯವರು ತಾವೇ ಸ್ವತಃ ಸ್ವಾತಂತ್ರ ಹೋರಾಟದಲ್ಲಿ ಭಾಗವಹಿಸುವ ಉತ್ಸಾಹವನ್ನು ತೋರಿದ್ದರು ಎಂದೇನು ಭಾವಿಸಬೇಕಿಲ್ಲ. ಇಂತಹ ಹೋರಾಟಕ್ಕೆ ತೀವ್ರವಾಗಿ ಪ್ರತಿಸ್ಪಂದಿಸುತ್ತಿದ್ದ ಉತ್ತರ ಕರ್ನಾಟಕದ ಪರಿಸರದಲ್ಲಿದ್ದೂ ಕವಿ ಯಾವ ಚಳವಳಿಯೂ ವ್ಯಕ್ತಿಶಃ ಭಾಗವಹಿಸುವ ಉಮೇದನ್ನು ತೋರಲಿಲ್ಲ. ಬಹುಷಃ ತಮ್ಮ ವೈಯಕ್ತಿಕ ಜೀವನದ ಏರಿಳಿತಗಳ ಕಾರಣದಿಂದಲೋ 'ನರಬಲಿ' ಕವನದಿಂದ ಅನುಭವಿಸಬೇಕಾಗಿ ಬಂದ ಸೆರೆಮನೆವಾಸ ಉದ್ಯೋಗನಾಶ (ಈ ಶಿಕ್ಷೆಯ ಕಾರಣದಿಂದ ಧಾರವಾಡದ ವಿಕ್ಟೋರಿಯಾ ಹೈಸ್ಕೂಲಿನಲ್ಲಿ ತಮ್ಮ ವೃತ್ತಿಯನ್ನು ಬೇಂದ್ರೆಯವರು ಕಳೆದುಕೊಳ್ಳಬೇಕಾಯಿತು) ಇದಕ್ಕೆ ಕಾರಣವಿರಬಹುದು. ಬಹುಷಃ ಈ ಕಹಿ ಅನುಭವದ ಕಾರಣವಾಗಿಯೇ ಬೇಂದ್ರೆಯವರು ತಮ್ಮ ಮುಂದಿನ ಹಂತದಲ್ಲಿ ಸ್ವಾತಂತ್ರ್ಯ ಹೋರಾಟ ಮತ್ತು ನಾಡು-ನುಡಿಯ ಅಭಿಮಾನವನ್ನು ಕುರಿತು ಮಹತ್ವದ ಕವಿತೆಗಳಾವುವನ್ನು ರಚಿಸಲಿಲ್ಲ. ಈ ವಿಷಯವನ್ನು ಕುರಿತು ಎಚ್.ಎಸ್.ರಾಘವೇಂದ್ರರಾವ್ ತೌಲನಿಕವಾಗಿ ಈ ರೀತಿ ಅಭಿಪ್ರಾಯ ನೀಡುತ್ತಾರೆ.

"ತಮ್ಮ ವೈಯಕ್ತಿಕ ಜೀವನದ ಹಲವು ಏರಿಳಿತಗಳ ನಡುವೆ ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸುವ ಉಮೇದನ್ನು ಬೇಂದ್ರೆಯವರು ತೋರಿಸಲಿಲ್ಲ. ಅರವಿಂದರು ತಮ್ಮ ಜೀವನಪಥದಿಂದ ಹಾಕಿಕೊಟ್ಟ ಮಾದರಿಯ ಫಲವಾಗಿಯೋ ಏನೋ ಬೇಂದ್ರೆ ಕಾವ್ಯವು ಈ ಬಗ್ಗೆ ಪು.ತಿ.ನ.ರಂತೆ ತೀವ್ರ ಪಶ್ಚಾತ್ತಾಪದ ಭಾವನೆಯನ್ನು ಅನುಭವಿಸಲಿಲ್ಲ ತನ್ನ ಕವಿತೆಯು ರಾಷ್ಟ್ರಭಕ್ತಿಯ ಉದ್ದೀಪನ ಮಾಡುವುದರಿಂದ ತಾನು ಕೃತಾರ್ಥನೆಂದು ಅವರು ಭಾವಿಸಿದರು. 'ಸಖಿಗೀತ'ದಲ್ಲಿ ಬರುವ

'ನರಬಲಿ ಕವನವು ಬಲಿಮಾಡಿತೆನ್ನನು
ಹೆಳವನಿದ್ದಲ್ಲಿಗೆ ಹೊಳೆ ಬಂದಿತು
ಮನೆಯನು ಮುರಿದಿತುಹಾರು ವಿಹಂಗಮ
ಜಂಗಮ ದೀಕ್ಷೆಯು ನಿನಗೆಂದಿತು"

(ಸಖೀಗೀತ, ಪು. ೨೪)

ಎಂಬ ಸಾಲುಗಳಲ್ಲಿಯ ಹೆಳವನೆಂದರೆ ಚಳವಳಿಯಲ್ಲಿ ನೇರವಾಗಿ ಭಾಗವಹಿಸಿದ ಕವಿಯೇ ಆಗಿದ್ದಾರೆ. ಆದರೆ 'ನರಬಲಿ' ಕವನವನ್ನು ತಪ್ಪಾಗಿ ಗ್ರಹಿಸುವುದರ ಫಲವಾದ ಸೆರೆಮನೆವಾಸ ಹಾಗೂ ಉದ್ಯೋಗನಾಶ ತನ್ನ ಮನೆಯನ್ನೇ ಮುರಿಯಿತೆಂದು ಕವಿ ಹೇಳುತ್ತಾರೆ. ಹೀಗೆ ಅನಿರೀಕ್ಷಿತವಾದ ಶಿಕ್ಷೆಯು ಅವರ ಉತ್ಸಾಹವನ್ನು ಕತ್ತರಿಸಿದ್ದರಿಂದಲೊ ಏನೋ ಸ್ವಾತಂತ್ರ್ಯ ಹೋರಾಟವನ್ನು ಕುರಿತಂಥ ಕಾವ್ಯಗಳೂ ಅವರಲ್ಲಿ ಅಪರೂಪವೇ, ಈ ಮಾತಿಗೆ ಅಪವಾದವೆನ್ನಬಹುದಾದ ಗಾಂಧೀಗೀತೆಗಳಲ್ಲಿ ಬಹುಪಾಲು, ಅವರ ಮರಣಾನಂತರ ಎಂದರೆ ಬ್ರಿಟಿಷರ ನಿರ್ಗಮನದ ನಂತರ ಬಂದಿವೆಯೆಂಬ ಸಂಗತಿಯು ಗಮನೀಯವಾಗಿದೆ. ಅದರಲ್ಲಿಯೂ ಗಾಂಧೀಯವರ ವ್ಯಕ್ತಿತ್ವದ ಘನತೆ ಮತ್ತು ತ್ಯಾಗಗಳು ಬೀರಿದಂಥ ಪರಿಣಾಮವನ್ನು ಗಾಂಧೀವಾದದ ಮೂಲತತ್ವಗಳು ಬೀರಿವೆಯೆಂದು ತೋರುವುದಿಲ್ಲ. ಇದರಿಂದ ಅವರ ಕವಿತೆಯು ಒಂದು ಯುಗದ ದಾಖಲೆಯಾಗುವ ಅವಕಾಶವನ್ನು ಕಳೆದುಕೊಂಡಿತೆಂದೇ ತೋರುತ್ತದೆ".[೧]

ಈ ಮಾತುಗಳಿಂದ ಬೇಂದ್ರೆಯವರು ಸ್ವಾತಂತ್ರ್ಯ ಚಳುವಳಿಯಲ್ಲಿ ಮುಖ್ಯವಾಗಿ ಭಾಗವಹಿಸದಿರಲು ವೈಯಕ್ತಿಕ ಏರಿಳಿತಗಳಂತೆ ಅರವಿಂದರಿಂದ ಪಡೆದ ಜೀವನ ದೃಷ್ಟಿಕೋನ ತನ್ನ ಕವಿತೆಯೇ ಜನತೆಯಲ್ಲಿ ಎಬ್ಬಿಸಬಹುದಾದ ಎಚ್ಚರಿಕೆಯಲ್ಲಿ ಕೃತಾರ್ಥನಾಗಿರಬಹುದಾದ ಸಾಂದ್ರತೆ ಕಂಡುಬರುತ್ತದೆ. ಇದರೊಂದಿಗೆ ಈ ವಸ್ತು ವಿಷಯವನ್ನು ಕುರಿತು ಬೇಂದ್ರೆಯವರು ಮುಂದಿನ ಹಂತದಲ್ಲಿಯೂ ಗಾಂಧಿ ಬಗ್ಗೆ ಕವಿತೆ ರಚಿಸಿದ್ದರೂ ಮಹತ್ವದ ಕವಿತೆ ರಚಿಸಲಿಲ್ಲವೆಂಬ ಒಂದು ಪೂರ್ಣನೋಟ ದೊರೆಯುತ್ತದೆ.

ಈ ಹಿನ್ನೆಲೆಯಲ್ಲಿ ಈ ವಸ್ತುವನ್ನು ಕುರಿತು ಬೇಂದ್ರೆಯವರು ರಚಿಸಿರುವ ಸತ್ವದೃಷ್ಟಿಯಿಂದ ಮಹತ್ವವಾದ "ಕನಸಿನೊಳಗೊಂದು ಕಣಸು" ಮತ್ತು "೩೩,೦೦೦೦೦೦೦", ಭಾವಗೀತೆಗಳ ವೈಶಿಷ್ಟ್ಯವೆಂದು ಗುರುತಿಸಬೇಕಿದೆ. ಬೇಂದ್ರೆಯವರ ಭಾವಗೀತೆಗಳಲ್ಲಿ ಅದು 'ಗರಿ' ಸಂಕಲನದಲ್ಲಿಯೂ ಮುಂದಿನ ಹಂತದ ಸಂಕಲನಗಳಲ್ಲಿಯೂ ಪ್ರಧಾನವಾಗಿ ಕಂಡುಬರುವ ಗುಣವೆಂದರೆ ವಾಕ್‌ಚಮತ್ಕಾರದಿಂದ ಕಾವ್ಯ ಶಿಲ್ಪವನ್ನು ಕಟ್ಟುವಿಕೆ ಮತ್ತು ನಾಟಕೀಯ ಸನ್ನೀವೇಶಗಳ ನಿರ್ಮಾಣ, ಬೇಂದ್ರೆಯವರ ಈ ಕವನಗಳೂ ರೂಪುತಳೆದಿವೆ. ಇಲ್ಲಿ ನಾಟಕೀಯತೆಯೆಂದರೆ

೧. ಎಚ್.ಎಸ್.ರಾಘವೇಂದ್ರರಾವ್, 'ಹಾಡೇ ಹಾದಿಯ ತೋರಿತು', ಪು.

ಕೇವಲ ಸಂಭಾಷಣೆ ಎಂದು ಮಾತ್ರ ಅರ್ಥವಲ್ಲ. ಬೇಂದ್ರೆಯವರ ಕವನಗಳ ನಾಟಕೀಯತೆ ಈ ಸೀಮಿತಾರ್ಥವನ್ನು ಒಳಗೊಂಡಿದ್ದಾರೆ. ಅವುಗಳ ಈ ಗುಣಕ್ಕೆ ಇಷ್ಟೊಂದು ಮಹತ್ವವೂ ಪ್ರಾಪ್ತವಾಗುತ್ತಿರಲಿಲ್ಲ. ಬೇಂದ್ರೆಯವರ ಕವನಗಳಲ್ಲಿ ನಾಟಕೀಯತೆಯೆಂದರೆ ಅದು ಒಂದೇ ಕವಿತೆಯ ಒಡಲೊಳಗೆ ಹಲವಾರು ದೃಷ್ಟಿಕೋನಗಳನ್ನು ಅಳವಡಿಸಕೊಳ್ಳುವುದರ ಮೂಲಕ ಕವನದಲ್ಲಿ ಕವಿ ತಾನು ನಿರ್ವಹಿಸುತ್ತಿರುವ ವಸ್ತುವಿನ ವಸ್ತುನಿಷ್ಠತೆಯ ಕಡೆ ಸರಿಯುವ ತಂತ್ರವೂ ಆಗಿರುತ್ತದೆ. ಇದರಿಂದ ಆ ವಸ್ತುವಿನ ಹಲವಾರು ಮಗ್ಗುಲುಗಳ ಅನುಭವವನ್ನು, ವಸ್ತುನಿಷ್ಠತೆಯನ್ನೂ ಕವಿ ಏಕಕಾಲದಲ್ಲಿ ಕಾಯ್ದುಕೊಳ್ಳುವುದು ಸಾಧ್ಯವಾಗುತ್ತದೆ.

'ಕನಸಿನೊಳಗೊಂದು ಕಣಸು' ಕವನದ ಶಿಲ್ಪವೂ ಇಲ್ಲಿ ಮಾತಿನ ಚಮತ್ಕಾರ ಮತ್ತು ನಾಟಕೀಯತೆ ಗುಣಗಳಿಂದಲೇ ಕಟ್ಟಲ್ಪಟ್ಟಿದೆ. ಕನ್ನಡವನ್ನು ಮತ್ತು ಕನ್ನಡಿಗ ಇಲ್ಲಿ ತಾಯಿ-ಮಗನ ನೆಲೆಯಲ್ಲಿ ನಿಂತು ಮಾತಿಗೆ ತೊಡಗುತ್ತಾರೆ. ಕವನಕ್ಕೆ ಕವಿ ಕೊಟ್ಟಿರುವ ಸೂಚನೆಯಲ್ಲಿಯೂ ಈ ಅಂಶವೇ ಇದೆ. ಬೇಂದ್ರೆಯವರು ಈ ರೀತಿ ತಮ್ಮ ಕವನಗಳಿಗೆ ತಾವೇ ನೀಡುವ ಸೂಚನೆಗಳು ಅವರ ಕವನಗಳನ್ನು ಅರ್ಥೈಸುವಲ್ಲಿ ಬಹು ಸಹಾಯಕಾರಿಯಾಗಿರುತ್ತದೆಂದು ವಿಮರ್ಶಕರು ಭಾವಿಸುತ್ತಾರೆ.

"ಯಾರು ನಿಂದವರಲ್ಲಿ ತಾಯೆ ಎಂಬೆ
ಯಾರು ಕೇಳುವರೆನೆಗೆ, ಯಾಕೆ ತಂದೆ?
ಬೇಸರದ ದನಿಯೇಕೆ ಹೆಸರ ಹೇಳಲ್ಲ
ಹೆಸರಾಗಿಯೂ ಕೂಡ ಹೇಳ ಹೆಸರಿಲ್ಲ"
ನೀನಾರ ಮನೆಯವಳು ಮುತ್ತೈದೆ ಹೇಳು
ನಾನಾರ ಮನೆಯವಳೋ ಬಯಲನ್ನೆ ಕೇಳು"

ಹೀಗೆ ಅಜ್ಞಾತವಾಗಿ ಕಾಣಿಸಿಕೊಳ್ಳುವ ಈ ತಾಯಿ ಮೊದಮೊದಲು ಮಗನ ಕಣ್ಣಿಗೆ ದಿಕ್ಕಿಲ್ಲದ ಪರದೇಶಿಯಂತೆ, ಸಾಮಾನ್ಯವಾದ ತಾಯಿಯಂತೆ ಕಾಣಿಸಿಕೊಂಡಿರುತ್ತಾಳೆ.

"ಇರುವರೆ ಇದ್ದರೆ ಮಕ್ಕಳೆಂಬುವರು?
ಇರುವರೆಂದರು ಕೂಡ ಯಾರು ನಂಬುವರು?

[illegible]

മ

ಮನೆಯಿಲ್ಲವೆ ಇರಲು ಪರದೇಶಿಯೇನು?
ಮನೆಯು ಮುನಿದೆದ್ದಿರಲು ಯಾ ದೇಶವೇನು?"[೧]

ಇಲ್ಲಿ ತನ್ನ ತಾಯಿಯ ಅರಿವೇ ಮಗನಿಗೆ ಇಲ್ಲ, ಈ ಸ್ಥಿತಿಗೆ ಅಂದು ಕನ್ನಡಿಗರು ಇಳಿದಿದ್ದಾರೆ. ಕನ್ನಡ ನಾಡಿನ ಅಂದಿನ ದುರ್ಗತಿಯ ಸ್ಥಿತಿಯಲ್ಲಿ ಈ ವ್ಯಂಗ್ಯ ಎಷ್ಟು ನಿರ್ದಯವಾಗಿ ಕನ್ನಡಿಗರನ್ನು ಎಚ್ಚರಿಸಬಲ್ಲದೆಂಬ ದೃಷ್ಟಿಯಿಂದ ಈ ಮಾತುಗಳನ್ನು ಗಮನಿಸಬೇಕು. "ಬೇಂದ್ರೆಯವರ ಕಾವ್ಯ ಶೈಲಿ ತನ್ನದೇ ಆದ ಒಂದು ಕ್ಲಿಷ್ಟ ಸ್ವರೂಪವನ್ನು ಹೊಂದಿದೆ. ಮಾತಿನ ಚಮತ್ಕಾರ ಅದರ ಸಾಮಾನ್ಯ ಸಂಗತಿ. ಆದರೆ ಕೋಲ್‌ರಿಜ್ ಹೇಳಿದಂತೆ ಮಾತಿನ ಚಮತ್ಕಾರ ಕಾವ್ಯವನ್ನು ಉದಾತ್ತ ಶಿಖರಕ್ಕೇರಿಸಬಹುದು. ಮಾತಿನ ಚಮತ್ಕಾರ, ಅನಿರೀಕ್ಷಿತ ಪ್ರಾಸಗಳು ಹಾಗೂ ಭಾರತ ಪಾಶ್ಚಾತ್ಯ ರಾಷ್ಟ್ರಗಳ ಪೌರಾಣಿಕ ಮತ್ತು ತಾತ್ವಿಕ ಉಲ್ಲೇಖಗಳು, ಪದಗಳು ಗಂಟೆಯಂತೆ ಮೊಳಗುವ ಒಂದು ಹೊಸ ವಾತಾವರಣವನ್ನೇ ಕಲ್ಪಿಸಿವೆ"[೨] ಎಂಬ ವಿದ್ವಾಂಸರ ಅಭಿಪ್ರಾಯಬರುವುದು ಕನವದಲ್ಲಿ ಮಾತಿನ ಚಮತ್ಕಾರ ಇಷ್ಟು ತೀಕ್ಷ್ಣವಾದ ಅರ್ಥ ಪ್ರತೀತಿಯನ್ನುಂಟುಮಾಡುವುದು ಸಾಧ್ಯಮಾಡಿ ತೋರಿಸಿರುವುದರಿಂದಲೇ. ಹೀಗೆ ಪರದೇಶಿಯಂತೆ ದಿಕ್ಕುದೆಸೆಯಿಲ್ಲದವಳಂತಿದ್ದ ತಾಯಿ ತನ್ನ ಮಾತಿನಲ್ಲಿ 'ಒಡಪಿನಿಂದ' ಮತ್ತು ತನ್ನ ಮುಖದಲ್ಲಿಯ 'ರಾಜಕಳೆ'ಗಳಿಂದ ನಿಧಾನವಾಗಿ ಹೆಚ್ಚು ಶಕ್ತಗಳಾಗಿ ತೋರುತ್ತಾ ಹೋಗುತ್ತಾಳೆ. ಕವನದ ಆರಂಭದಲ್ಲಿ ತಾಯಿ ಇಲ್ಲಿ ಕನ್ನಡಿಗನ ಕಣ್ಣಿಗೆ ಸ್ಪಷ್ಟವಾಗಿ ಕಾಣಿಸಿರುವುದಿಲ್ಲ ಎಂಬುದನ್ನು ನೆನಪಿಡಬೇಕು "ಯಾರು ನಿಂದವರಲ್ಲ ತಾಯೆ' ಎಂದೆ, ಎನ್ನುತ್ತಿದ್ದಂತೆ ಸ್ವಲ್ಪ ದೂರದಲ್ಲಿ ಅಸ್ಪಷ್ಟವಾದ ಹೆಣ್ಣಿನ ಆಕೃತಿ ಮಂತ್ರ ಕನ್ನಡಿಗನ ಕಣ್ಣಿಗೆ ಕಂಡಿರುತ್ತದೆಂಬ ಅಂಶದ ಹಿನ್ನೆಲೆಯೂ ಇಲ್ಲಿ ಮುಖ್ಯ. ಹೀಗೆ ಬೆಳೆಯುತ್ತಾ ಹೋಗುವ ತಾಯಿಮಗನು ತಾಯಿಗಾಗಿ ತಾನೇನು ಮಾಡಬೇಕೆಂದು ಪ್ರೇರೇಪಿಸುವ ಶಕ್ತಿಯನ್ನು ಪಡೆಯುತ್ತಾಳೆ.

"ರಾಜಮುಖಿ ನಿನ್ನಲ್ಲಿ ರಾಜಕಳೆಯಿಹುದು!"
"ಸಾಜಮಾದರೂ ಪಕ್ಷವಿದು ವದ್ಯವಹುದು!"
"ಯಾವುದಾದರೂ ನಾಡದೇವಿಯೇ ನೀನು"?
"ಭಾವುಕರ ಕಂಗಳಿಗೆ ದೇವಿಯೇ ನಾನು",

---

೧. ಗರಿ – ವಾಮನ ಬೇಂದ್ರೆ, ಪು. ೩೪.
೨. ವಿ.ಕೃ.ಗೋಕಾಕ: ಇಳಿದು ಬಾ ತಾಯಿ.

ಈಗ ಬಂದಿಹುದೇಕೆ ಏನು ಬೇಸನ?"

"ಯೋಗವಿಲ್ಲದೆ ತಿಳಿಯದೆನ್ನ ವ್ಯಸನ"![೧]

ಕೊನೆಗೆ ಮಗ ತನ್ನ ಅಂಜಿಕೆ ಹಿಂಜರಿಕೆಗಳನ್ನೆಲ್ಲಾ ತೊರೆದು ತಾಯಿಯ ಬೆಸನವನ್ನು ನಡೆಸಬೇಕೆಂಬ ಸ್ಥಿತಿಯನ್ನು ಮುಟ್ಟುತ್ತಾನೆ. ಪರದೇಶಿಯಳಾದ ಈ ತಾಯಿ ಮಗನ ಬಲಿಯನ್ನೇ ಅಪೇಕ್ಷಿಸುವ ಮಟ್ಟ ಮುಟ್ಟುತ್ತಾಳೆ.

"ಚಂಡಿ ಚಾಮಂಡಿ ಪೇಳ್ ಬೇಕಾದುದೇನು?"

ಗಂಡಸಾದರೆ ನಿನ್ನ ಬಲಿಕೊಡುವೆಯೇನು"

ಇಲ್ಲಿ ಮಾತಿನ ಹಿಂದೆ ಮತ್ತು ಮಗನ ಸ್ಥಿತಿಗಳು ನಾಡಿನ ಅಂದಿನ ಸ್ಥಿತಿಯನ್ನು ಬಹುಸಮರ್ಥವಾಗಿ ಮನಗಾಣಿಸುತ್ತಿರುತ್ತದೆ.

ತನ್ನ ತಾಯಿನೆಲದ ಸ್ಥಿತಿಗತಿಗಳೇನು, ಅದಕ್ಕೆ ಬೇಕಾಗಿರುವ ಮಗನ ಕರ್ತವ್ಯವೇನು ಎಂದು ತಿಳಿಯಲಾರದ ಸ್ಥಿತಿಯಲ್ಲಿ ಕನ್ನಡಿಗರಿದ್ದಾರೆ. ಇದರಿಂದ ತನ್ನ ತಾಯಿಯ ಅಂತಿಮ ಬೆಸನಕ್ಕೆ ಅವನಲ್ಲಿ ಉತ್ತರವಿಲ್ಲ. ಇಲ್ಲಿ ತಾಯಿ ಕೂಡ ಅಂದರೆ ಮಕ್ಕಳಿದ್ದೂ "ಇರುವರೆಂದರೂ ಕೂಡ ಯಾರು ನಂಬುವರು" ಎಂಬ ಸ್ಥಿತಿಯಲ್ಲಿ ಅಂದು ಕನ್ನಡ ನಾಡು ಇದೆ. ಇಲ್ಲಿ ತಾಯಿಯದೂ ಕೂಡ ತನ್ನ ಮಗನ ಬಲಿಯನ್ನೇ ಕೇಳದೆ ಗತ್ಯಂತರವಿಲ್ಲವೆಂಬಂತಹ ಸ್ಥಿತಿ. ಅಂದರೆ ಅಂದು ನಾಡಿಗೆ ಅವಶ್ಯಕ-ವಾಗಿದ್ದುದು ಕೂಡ ಪ್ರತಿಯೊಬ್ಬ ಕನ್ನಡಿಗನೂ ತನ್ನ ಪ್ರಾಣವನ್ನು ತಾನು ಒತ್ತೆಯಿಟ್ಟು ನಡೆಸಬೇಕಾಗಿದ್ದ ಹೋರಾಟವೇ.

ಇಲ್ಲಿ ಮಗ ನಾಡಿನ ಅಂದಿನ ಈ ಸ್ಥಿತಿಗೆ ಇಲ್ಲಿ ತಾಯಿಯನಾಡಿನ ಸ್ಥಿತಿಯನ್ನೇ ಅವನು ಮರೆತಿದ್ದರಿಂದ ತಾಯಿಯ ನಾಡಿನ ಬೇಡಿಕೆ ಅವನಿಗೆ ಅನಿರೀಕ್ಷಿತ ಕೂಡ ಆದ್ದರಿಂದಲೇ ಕವನದ ಅಂತಿಮ ವಾಕ್ಯಗಳು.

"ಮನವು ನಡುಗಿತು ತನವು ನವಿರಿಗೊಳಗಾಯ್ತು.

ನೆನವು ನುಗ್ಗಿತು – ಹೊರಗೆ ಕಂಡೆ ಬೆಳಗಾಯ್ತು"[೨]

---

೧. ಜಯಕರ್ನಾಟಕ – ೧೯೨೫, 'ಜೀವನ' – ೧೯೨೬ ಜನವರಿ ಸಂಚಿಕೆಯಲ್ಲಿ ಪ್ರಕಟ, ಪು. ೩೫. (ಗರಿ – ದ.ರಾ.ಬೇಂದ್ರೆ)

೨. ಗರಿ – ಬೇಂದ್ರೆ, ಪು. ೩೫.

ಕವನದ ಈ ಅಂತಿಮ ವಾಕ್ಯಗಳನ್ನು ವಾಚ್ಯಾರ್ಥದಲ್ಲಿ ಅರ್ಥೈಸದೆ ಕವನದಿಂದ ಇದುವರೆಗೆ ಪಡೆಯುತ್ತಿರುವ ಧ್ವನ್ಯಾರ್ಥದಲ್ಲಿಯೇ ಸಾಗಬೇಕು. ಆಗ ತಾಯಿಯನಾಡಿನ ಈ ಬೇಡಿಕೆಯನ್ನು ಮಗ ಪೂರೈಸುವ ಸ್ಥಿತಿಯಲ್ಲಿಲ್ಲವೆಂಬ ಅರ್ಥದಿಂದ ಕವನ ಮುಕ್ತಾಯವಾಗುತ್ತದೆಂಬುದು ಅರಿವಿಗೆ ಬರುತ್ತದೆ. 'ಬೆಳಗಾಯ್ತು' ಎಂಬ ಪದ ಕೂಡ ಇದೇ ಧ್ವನ್ಯಾರ್ಥದಲ್ಲಿ ಸಾಗಿ ಇದರಿಂದ ಹೊಸ ಅರಿವನ್ನು, ಜ್ಞಾನವನ್ನು ಪಡೆದದ್ದನ್ನು ಸೂಚಿಸುತ್ತದೆ.

ಹೀಗೆ ನಾಡಿನ ಅಂದಿನ ಸ್ಥಿತಿಯನ್ನು ಬಹುಶಕ್ತವಾಗಿ ಕಟ್ಟಿಕೊಡುವ ಈ ಕವಿತೆಯ ಶಕ್ತಿಯೇನು ಎಂಬುದನ್ನು ಅನಂತಮೂರ್ತಿಯವರ ಮಾತುಗಳಲ್ಲಿಯೇ ಗಮನಿಸಬಹುದು;

ಬೇಂದ್ರೆಯವರು ತಮ್ಮ ಸಮಕಾಲೀನರಲ್ಲೆಲ್ಲ ಅತ್ಯಂತ ವಿಶಿಷ್ಟ ಪ್ರತಿಭೆಯ ಕವಿ ಎಂಬುದು ಗೊತ್ತಿರುವಂತಹದ್ದು. ಬಿ.ಎಂ.ಶ್ರೀಯವರ ಕನ್ನಡ ಪ್ರೇಮದ ಪದ್ಯ ಒಂದನ್ನು ಬೇಂದ್ರೆಯವರ ಪದ್ಯ ಒಂದರ ಜೊತೆ ಹೋಲಿಸಿ ನೋಡಿದಾಗ, ಏಕಕಾಲದಲ್ಲಿ ಶ್ರೀಯವರ 'ಮಾರ್ಗ' ಮತ್ತು ಬೇಂದ್ರೆಯವರ 'ದೇಸಿ' ಪ್ರಧಾನವಾದ ರಚನಾ ರೀತಿಗಳು ಹುಟ್ಟಿಕೊಂಡದ್ದು ಕನ್ನಡದ ಮುಂದಿನ ಇತಿಹಾಸಕ್ಕೆ ಮಹತ್ವದ ಸಂಗತಿ. ಬಿ.ಎಂ.ಶ್ರೀಯವರ ಲೌಕಿಕ ಪ್ರಧಾನವಾದ 'ಮಾರ್ಗ' ದುರ್ಬಲವಾದಾಗ ಏನಾಗುತ್ತದೆಂಬುದನ್ನು ಈ ಹೋಲಿಕೆಯಿಂದ ತಿಳಿಯಬಹುದು. ಬಿ.ಎಂ.ಶ್ರೀ ಪದ್ಯದಲ್ಲಿ ಕನ್ನಡ ತಾಯಿ ಹಿರಿಯ ಮುತ್ತೈದೆ, ತನ್ನ ಮಕ್ಕಳು ಹಿಂದುಳಿದಿದ್ದಾರೆಂದು ದುಃಖಿಸುತ್ತಾಳೆ. ಅಕ್ಕಪಕ್ಕದ ಮನೆಯವರಂತೆ ತನ್ನ ಮಕ್ಕಳಿಲ್ಲವಲ್ಲ ಎಂಬ ಕೊರಗು ಇವಳಿಗೆ. ಬೇಂದ್ರೆಯವರ ಪದ್ಯ "ಯಾರು ನಿಂದವರಲ್ಲಿ ತಾಯೇ? ಎಂದೆ, ಎಂದು ಪ್ರಾರಂಭವಾಗುತ್ತದೆ. ಬಿ.ಎಂ.ಶ್ರೀ ಪದ್ಯದಲ್ಲಿ ತಾಯಿ ಸಂಸಾರಿ ಬೇಂದ್ರೆಯಲ್ಲಿ ಅವಳು ಶಕ್ತಿದೇವತೆ, ಬಿ.ಎಂ.ಶ್ರೀ. ಪದ್ಯದ ತಾಯಿ ಕನ್ನಡಿಗರಿಗೆ ಮೆಚ್ಚಿಗೆಯಾಗಬಲ್ಲಳು. ಅದು ರಾಜಕೀಯ ಪದ್ಯ ಕನ್ನಡ ಚಳವಳಿಗಾರರನ್ನು ಉದ್ರೇಕಗೊಳಿಸಬಲ್ಲಂಥದ್ದು. ಆದರೆ ಬೇಂದ್ರೆಯದು ಸಾರ್ವಕಾಲಿಕಾವಾದ ಭಾವವನ್ನು ಸೃಷ್ಟಿಸುತ್ತದೆ. ಜಾನಪದ ಮತ್ತು ಆರ್ಷೇಯ ಪರಂಪರೆಗಳ ಸಂಗಮವಾಗಿ ಶಕ್ತಿ ದೇವತೆಯಾಗಿ ಬೇಂದ್ರೆಯಲ್ಲಿ ಬರುವ 'ತಾಯಿ' ಪದ್ಯದ ಪ್ರಾರಂಭದಲ್ಲಿ ಕೇವಲ ಒಂದು ಹೆಣ್ಣು. ಅವಳನ್ನು ಮಾತನಾಡಿಸುವವನ ದೃಷ್ಟಿ ಬೆಳೆದಂತೆ ಅವಳೂ ಬೆಳೆಯುತ್ತಾ ಹೋಗುತ್ತಾಳೆ. ಕೊನೆಯಲ್ಲಿ "ಗಂಡಸಾದರೆ ನಿನ್ನ ಬಲಿಕೊಡುವೆಯೇನು?" ಎಂದು ಕೇಳಬಲ್ಲ ಅವಳು

ಕಾಳಿಯಾಗುತ್ತಾಳೆ. ಪ್ರಶ್ನೆ ಕೇಳಿದವನು ಕೊನೆಯಲ್ಲಿ ಸಮರ್ಪಣ ಭಾವದಲ್ಲಿ ದೀನನಾಗಿ ತನ್ನ ಯೋಗ್ಯತೆಯನ್ನು ಪ್ರಶ್ನಿಸಿ ಕೊಳ್ಳುವ ಸ್ಥಿತಿ ತಲುಪುತ್ತಾನೆ. ಪ್ರಾರಂಭದ ಅಸಡ್ಡೆ ಅವನಲ್ಲಿಲ್ಲ. ತಾಯಿ ಮೊಗದಲ್ಲಿ ದಿವ್ಯವನ್ನು ಕಂಡಿದ್ದಾನೆ ಅವನು. ಆದರೆ ಅವಳೆನ್ನುವಂತೆ ಸಾಜಮಾದರು ಪಕ್ಷ ವದ್ಯಮಹುದು. 'ಇಲ್ಲಿ ಚಕ್ರಾನುಸಾರಿಯಾದ ಚರಿತ್ರೆಯ ಕಲ್ಪನೆಯಿದೆ. ಅವಳಲ್ಲಿ ರಾಜಕಳೆ ಸಹಜವಾಗಿದ್ದರೂ ಈಗಿನದು ಅವಳಿಗೆ ಕೃಷ್ಣಪಕ್ಷ. ಅಂದರೆ ಕಾಲಬದಲಾಗಲೂಬಹುದು. ಪದ್ಯದ ತಾಯಿ ಮತ್ತು ಪ್ರಶ್ನೆ ಕೇಳುವ ಕನ್ನಡಿಗ ಒಬ್ಬರನ್ನೊಬ್ಬರು ಬಗೆಯುವ ಈ ನಾಟಕ, ಅಂತರ್ಗತವಾದ ಶಕ್ತಿ ಹೀಗೆ ಅನಾವರಣಗೊಳ್ಳುತ್ತದೆ ಎಂಬುದರ ಡಯಲೆಕ್ಟಿಕ್ ಆಗಿದೆ. ಬಿ.ಎಂ.ಶ್ರೀ ಪದ್ಯ ತಮಿಳರಿಗೂ ತೆಲುಗರಿಗೂ ಇಷ್ಟವಾಗುವಂಥದಲ್ಲ ಬೇಂದ್ರೆಯದು ಐರ್‌ಲ್ಯಾಂಡಿನ ರಾಷ್ಟ್ರಗೀತೆಯೂ ಆಗಬಹುದು.

ಬೇಂದ್ರೆಯವರ ಕವನಗಳು ವಿಶ್ವಾಸಮಟ್ಟದ್ದು ಎನ್ನುವುದು ಹೀಗೆ. ಒಬ್ಬ ಕವಿ ಸಾಹಿತ್ಯ ಕೃತಿಯಲ್ಲಿ ತೋರುವ ಜೀವನದರ್ಶನ. ಅದು ಯಾವ ವಸ್ತುವನ್ನು ಕುರಿತದ್ದೆ ಆಗಲಿ ಅದು ಪ್ರಪಂಚದ ಯಾವುದೇ ಓದುಗನಿಗೂ ಯಥಾರ್ಥವಾಗುವಂತಹದಾದರೆ ಅಂತಹ ಸಾಹಿತ್ಯ ವಿಶ್ವಮಟ್ಟದ ಸಾಹಿತ್ಯವಾಗಬಲ್ಲ ಯೋಗ್ಯತೆಯನ್ನು, ಅರ್ಹತೆಯನ್ನು ಪಡೆದಿರುತ್ತದೆ. ತಮ್ಮ ಆರಂಭ ಹಂತದ ಕವನಗಳಲ್ಲಿಯೇ ಭಾಷೆ – ಭಾವಗಳ ಈ ಅದ್ಭುತ ಸಾಮಾರಸ್ಯವನ್ನು ತೋರಿದ ಬೇಂದ್ರೆಯವರು ಮುಂದಿನ ಹಂತದ ಸಖಿಗೀತ, ನಾದಲೀಲೆ, ಅರಳು–ಮರಳು ಸಂಕಲನದಲ್ಲಿ ನೃತ್ಯಯಜ್ಞ, ನಾದಲೀಲೆ, ಅರಳು–ಮರಳು ಸಂಕಲನದಲ್ಲಿ ನೃತ್ಯಯಜ್ಞ, ನಾದಲೀಲೆ, ಪ್ರಳಯಸೃಷ್ಟಿ, ಗಿರಿಶಿಖರ, ಭೂಮಿತಾಯಿ, ಪ್ರೇಮ ಬೀಜಗಳಂತ ಹಲವಾರು ಶ್ರೇಷ್ಠ ಗೀತೆಗಳನ್ನು ರಚಿಸಿದರು. ಜೀವನದ ಹಲವು ಮೌಲ್ಯಗಳನ್ನು ಶೋಧಿಸುವಲ್ಲಿ ಅವರು ತೋರುವ ಭಾಷೆಯ ಬಳಕೆಯ ಸಾಮಾರ್ಥ್ಯದಿಂದಾಗಿ ಅವು ಉತ್ತಮ ಕಲಾಕೃತಿಯ ಮಟ್ಟಕ್ಕೇರಿವೆ. ಈ ದಿಸೆಯಲ್ಲಿ ಬೇಂದ್ರೆಯವರನ್ನು ಐರಿಷ್ ಕವಿ ಡಬ್ಲ್ಯು ಬಿ.ಯೇಟ್ಸ್‌ನೊಂದಿಗೂ ವ್ಹಿಟಮನ್ ಕವಿಗಳ ಸಾಧನೆಯೊಂದಿಗೂ ಸಮೀಕರಿಸುವುದುಂಟು.

ಪ್ರಸ್ತುತ ಅನಂತಮೂರ್ತಿಯವರ ಅಭಿಪ್ರಾಯದಲ್ಲಿ ಹೆಸರಿಸಿರುವ ಬಿ.ಎಂ.ಶ್ರೀ ಅವರ ಕವನ 'ಕನ್ನಡ ತಾಯಿನೋಟ' ಇದರ ಆರಂಭದ ಸಾಲುಗಳು ಹೀಗಿವೆ.

'ಹಿರಿಯರ, ಕಿರಿಯರಿರ, ಅಕ್ಕತಂಗಿಯರಿರಾ, ಅಣ್ಣತಮ್ಮಂದಿರಾ
ಬಸುಗೆನುಡಿ ತಂದಿಹೆನು ನಾನೊಂದ, ತಾಯಿಂದ ಸಿರಿಯ ತಾಯಿಂದ

ಕೇಳುವಿರ ಕಿವಿಗೊಟ್ಟು, ತಾಳುವಿರ ಎದೆನೆಟ್ಟು, ತಾಳಿಬಾಳುವಿರಾ?
ಕಣ್ಣಾರ ಕಂಡೆನವಳನು – ಕಂಡು ತಂದಿಹೆನು, ಕೇಳಿ?
ಅವಳೆನ್ನೊಳುಡಿದಂದ ನಾಡುವೆನು ನಿಮ್ಮಲ್ಲಿ ಕೇಳಿ''

ಇಂತಹ ತೌಲನಿಕ ಅಧ್ಯಾಯದಿಂದ ಬೇಂದ್ರೆಯವರ ಆರಂಭ ಹಂತದ ಪದ್ಯಗಳಾದ 'ಕನಸಿನೊಳಗೊಂದು ಕಣಸು' 'ಬೆಳಗು', ಪಾತಾರಗಿತ್ತಿ ಪಕ್ಕ' ಕುಣಿಯೋಣು ಬಾರ, ಹಕ್ಕಿ ಹಾರುತಿದೆ ನೋಡಿದಿರಾ' ಈ ಕವನಗಳನ್ನು ಪರೀಕ್ಷಿಸಿದಾಗ ಹುಟ್ಟು ಪ್ರತಿಭೆಯಿರುವಂತಹ ಕವಿಯಿಂದ ಮಾತ್ರ ಇಂತಹ ಉತ್ತಮ ಭಾವಗೀತಗಳು ಮೂಡಿಬರುವುದು ಸಾಧ್ಯವೆನಿಸುತ್ತದೆ.

'ಕನಸಿನೊಳಗೊಮದು ಕನಸು' ಕವನದಲ್ಲಿ ಕನ್ನಡನಾಡು ಕನ್ನಡ ತಾಯಿಯಾಗಿರುವಂತೆ 'ಮೂವತ್ತುಮೂರುಕೋಟಿ' ಕವನದಲ್ಲಿ ಭಾರತದೇಶ ಭಾರತಾಂಬೆಯಾಗಿದ್ದಾಳೆ. ಇಲ್ಲಿ ಭಾರತಾಂಬೆ ಏಕ ವ್ಯಕ್ತಿಯಾಗಿ ತನ್ನ ಮಕ್ಕಳನ್ನು ಉದ್ದೇಶಿಸಿ ತನ್ನ ಸ್ಥಿತಿಯನ್ನು ಶೋಕ ರೋಷಗಳನ್ನು ತೋಡಿಕೊಳ್ಳುತ್ತಾಳೆ.

''ಮಕ್ಕಳಿವರೇನಮ್ಮ? ಮಕ್ಕಳವರೇನಮ್ಮ
ಮೂವತ್ತು ಮೂರುಕೋಟಿ ॥ಪ॥
ಮೂವತ್ತುಮುರುಕೋಟಿ, ಮೂವತ್ತುಮೂರುಕೋಟಿ!
ಮಕ್ಕಳಿವರೇನಮ್ಮ? ಮಕ್ಕಳಿವರೇನಮ್ಮ
ಮೂವತ್ತು ಮೂರುಕೋಟಿ!
ನಾ ಹಡೆದ
ಮೂವತ್ತುಮೂರು ಕೋಟಿ ॥ಪ॥''[೧]

ಹೀಗೆ 'ಮೂವತ್ತುಮೂರು ಕೋಟಿ' ಎಂಬ ನಾಚಿಕೆ ಹುಟ್ಟಿಸುವ ಪಲ್ಲವಿಯ ಪುನರಾವರ್ತನೆ. ಕರಳು ಚುಚ್ಚುವ ದನಿಯಲ್ಲಿ ಮಕ್ಕಳನ್ನು ಭಾರತೀಯರನ್ನು ತಮ್ಮನ್ನು ತಾವು ಮುಟ್ಟಿ ನೋಡುಕೊಳ್ಳುವಂತೆ ನಾಚಿಕೆ ಹುಟ್ಟಿಸುವಂತೆ ಬರುತ್ತದೆ. ಇಲ್ಲಿ 'ಮೂವತ್ತುಮೂರುಕೋಟಿ' ಮಕ್ಕಳಿದ್ದೂ ಕೂಡ ಅವರು ತಾಯಿಯ ಮಕ್ಕಳಾಗಿಲ್ಲ. ಅವರು ನಿಜವಾದ ಮಕ್ಕಳಾಗಿ ಬರಬೇಕೆಂಬುದೇ ಕವನದ ಸಂದೇಶ 'ಕನಸಿನೊಳಗೊಂದು ಕನಸು' ಮತ್ತು '೩೩,೦೦೦೦೦೦೦' ಈ ಕವನಗಳೆರಡಲ್ಲೂ ತಾಯಿಯ ಪೌರಾಣಿಕ ಪ್ರತಿಮೆಯನ್ನು ಬಳಸಿದ್ದರೂ, ಆಧ್ಯಾತ್ಮಿಕ, ಧಾರ್ಮಿಕ

---

೧. ಗರಿ – ದ.ರಾ.ಬೇಂದ್ರೆ ೧೯೧೮, ಧಾರವಾಡ, ಪು. ೪೯.

ಮೌಲ್ಯಗಳನ್ನು ಕೀರ್ತಿಸುತ್ತಿದ್ದರೂ ಕೂಡ, ನಾಡಿನ ಅಂದಿನ ಸ್ಥಿತಿಯೊಂದಿಗೆ ವರ್ತಮಾನದ ಹೋರಾಟದೊಂದಿಗೆ ತೀವ್ರವಾಗಿ ಪ್ರತಿಕ್ರಿಯಿಸುವುದರಿಂದ ಹೆಚ್ಚು ಸತ್ವಶಾಲಿ ಕೃತಿಗಳಾಗಿ ಕಾಣುತ್ತದೆ. 'ಮೂವತ್ತಮೂರು ಕೋಟಿ! ಮೂವತ್ತು ಮೂರುಕೋಟಿ!' ಎಂದು ಸಂಖ್ಯೆಯ ಭಾರದ ಮುಂದೆ ಸ್ವರವನ್ನು ದೀರ್ಘವಾಗಿ ಎಳೆಯುವುದರ ಮೂಲಕ ತಿರಸ್ಕಾರ, ಉದ್ವೇಗ, ಸಂತಾಪದ ವಿವಿಧ ಭಾವಗಳನ್ನು ಕವನ ಶ್ಲೇಷೆಯ ಮೂಲಕ ಹೊಸ ಹೊಸ ಅರ್ಥ ಸಾಧ್ಯತೆಯನ್ನು ತೆರೆಯುತ್ತಾ ಸಾಗುತ್ತದೆ.

ಹಲ ಕೆಲವು ಹುಳುಗಳೆನ್ನಿ! ಹಲ ಕೆಲವು ಕುರುಡುಕುನ್ನಿ
ಕೆಲಕೆಲವು ಹುಚ್ಚು ಕುರಿ! ಕೆಲವು ಹೊಸ ಹೊಚ್ಚ ಮರಿ!
ಗಂಡುತನಕೇ ಸೋ ಸೊನ್ನೆ
ಲೆಕ್ಕಕ್ಕೆ
ಮೂವತ್ತುಮೂರು ಕೋಟಿ

ಎನ್ನುವ ಮಾತುಗಳಲ್ಲಿ ಭಾರತೀಯರ ಗಂಡಸುತನವನ್ನೇ ಕೊಡುವ ಧ್ವನಿಯನ್ನು ಕಾಣಬಹುದು ಮುಂದೆ.

"ಹಡೆದೊಡಲು ಬಂಜೆಯಾಯ್ತೆ ಬಾಳ್ಮೊದಲೆ ಸಂಜೆಯಾಯ್ತೆ?
ಭಾರತಿಗೆ ತಲೆಬಾರ ಇರುವಳೆಂಬ ವಿಚಾರ
ಬಾಳ್ವಣ್ಣು ಗಿಂಜು ಆಯ್ತೆ?
ಬರಿಶೂನ್ಯ
ಮೂವತ್ತುಮೂರು ಕೋಟಿ!!"[೧]

ಎನ್ನುವಲ್ಲಿ ಭಾರತಾಂಬೆ ನೋವು ಮಡುಗಟ್ಟಿ ನಿಂತಿದೆ ಮುಂದೆ ಆಕೆ ನೀಡುವ ಆಹ್ವಾನವಿದು.

ಬಸುರಿನಲಿ ಪಡೆದುದೇನು? ಹೊರಗಿಲ್ಲ ಹಡೆದುದೇನು?
ಅರರೆ! ಬಡ ಒಡಲುಗಳು ಸೆರೆಮನೆಗಳಾದವೊ!
ನನ್ನಳಲು ಕೇಳದೇನೋ
ಎಲೆಲೇ
ಮೂವತ್ತು ಮೂರು ಕೋಟಿ!!

೧. ಗರಿ – ದ.ರಾ.ಬೇಂದ್ರೆ, ಪು. ೫೧.

"ಡಿಂಭಗಳನೊಡೆದು ಬನ್ನಿ! ಕಂಬಗಳನೊಡೆದು ಬನ್ನಿ!
ಮೈಯಲ್ಲಿ ಮಡಗದಿರಿ! ಮನದಲ್ಲಿ ಅಡಗದಿರಿ
ತಾಯಿ ಇದೋ ಬಂದೆವೆನ್ನಿ!
ನಾ ಪಡೆದ
ಮೂವತ್ತು ಮೂರು ಕೋಟಿ!!"[೧]

ಇಲ್ಲಿ ಮೂವತ್ತುಮೂರು ಕೋಟಿ ಮಕ್ಕಳಿದ್ದರೂ ಕೂಡ ಅವರು ತಾಯಿಯ ಮಕ್ಕಳಾಗಿಲ್ಲ, ಅವರು ನಿಜವಾದ ಮಕ್ಕಳಾಗಿ ಬರಬೇಕೆಂಬುದು. ಮೂವತ್ತು ಮೂರು ಕೋಟಿ ಈಗ ನೂರು ಕೋಟಿಯೋ ಹೆಚ್ಚೋ ಕಡಿಮೆಯೋ ಆಗಿದ್ದರೂ 'ಅದೇ ಹಾಡು: ಅದೇ ಪಾಡು ಆಗಿದೆ' ಎಂಬುದನ್ನು ತಿಳಿಸುತ್ತದೆ.

ಬೇಂದ್ರೆಯವರ ಭಾವಗೀತೆಗಳ ಮತ್ತೊಂದು ವಿಶಿಷ್ಟತೆ ಶ್ಲೇಷಾಲಂಕಾರಗಳ ಬಾಹುಳ್ಯತೆಯೇ ಆಗಿದೆ. ಇದರಿಂದ ಒಂದು ಪದಕ್ಕಿರುವ ಎರಡು ಅರ್ಥಗಳನ್ನು ಮಾತ್ರವಲ್ಲ, ಬೇರೆ ಬೇರೆ ಅರ್ಥವಿರುವ ಎರಡು ಪದಗಳನ್ನು ಸೇರಿಸಿ ಮೂರನೆಯ ಅರ್ಥವನ್ನು ಸಮರ್ಥವಾಗಿ ಕಾಣಿಸುವುದು ಬೇಂದ್ರೆಯವರಿಗೆ ಸಾಧ್ಯವಾಗಿದೆ. ಕವಿತೆಯ ಒಂದು ಸಾಲಿನಲ್ಲಿ ಒಂದೇ ಪದವನ್ನು ಮತ್ತೆ ಮತ್ತೆ ಆದರೆ ಬೇರೆ ಬೇರೆ ಅರ್ಥಗಳಲ್ಲಿ ಬಳಸುವುದರ ಮೂಲಕ ಶ್ಲೇಷೆಯ ಹೊರಗೊಂದು ಸಾಧ್ಯತೆಯನ್ನು ಅವರು ಕಂಡುಕೊಳ್ಳುತ್ತಾರೆ. ಬೇಂದ್ರೆಯವರು ಆಧುನಿಕ ಕನ್ನಡದ ಸಾರ ಸರ್ವಸ್ವವನ್ನು ಬಳಸಿಕೊಳ್ಳುವುದನ್ನು ನಾವು ಅವರ ಸಾಹಿತ್ಯದಲ್ಲ ಕಾಣಬಹುದಾಗಿದೆ. ಬೇಂದ್ರೆಯವರು ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ನರಬಲಿ ಬರೆದು ಸೆರೆಮನೆ ವಾಸವನ್ನು ಹಿಂಡಲಗಿನಲ್ಲಿ ಹಾಗೂ ಮುಗದದಲ್ಲಿ ಕಳೆದಿರುವ ಸ್ಥಾನಬದ್ಧತೆಯಲ್ಲಿ ಬೇಂದ್ರೆಯವರ ಕಾವ್ಯ ಶಕ್ತಿ ಕುಗ್ಗಲಿಲ್ಲ ಎನ್ನುವುದಕ್ಕೆ ಈ ರೀತಿ ಹೇಳುತ್ತಾರೆ.

"ಮಣೆಯಲ್ಲಿ ಕಳೆದಂಥ ಅಜ್ಞಾತವಾಸವ
ನೆನೆದರು ಮೈಯಲ್ಲಿ ಜುಮ್ಮೆನ್ನುತ
ಮುಗದದ ದಿನಗಳ ಮರೆಯಿಸಿ ಬಿಡುವವು
ನಿನ್ನ ನಿರಾಶೆಯು ಕೊನೆ ಮುಟ್ಟಿತು"[೨].

---

೧. ಬೇಂದ್ರೆ ಸಾಹಿತ್ಯ ವಿಹಾರ – ಸಂ. ಜಿ.ಎಸ್.ಭಟ್, ಪು. ೩೭.
೨. ಗರಿ – ದ.ರಾ.ಬೇಂದ್ರೆ ೧೯೧೮, ಧಾರವಾಡ, ಪು. ೪.

ಹೀಗೆ ಸಖೀಗೀತದಲ್ಲಿ ತಾವು ಸೆರೆಮನೆ ವಾಸವನ್ನು ಅನುಭವಿಸಿದ ರೀತಿಯನ್ನು ಈ ಮೇಲಿನಂತೆ ಕಾವ್ಯದಲ್ಲಿ ಬರೆಯುತ್ತಾರೆ.

ಸ್ವಾತಂತ್ರ್ಯದ ವರ್ಧಂತಿ ಕವನವನ್ನು ಭಾರತದ ಸ್ವಾತಂತ್ರ್ಯದ ಹುಟ್ಟು ಹಬ್ಬಕ್ಕಾಗಿ ಬೇಂದ್ರೆಯವರು ಬರೆದರು. ಸ್ವಾತಂತ್ರ್ಯದ ಬಗ್ಗೆ ಈ ಕವನದಲ್ಲಿ ಅಭಿವ್ಯಕ್ತವಾಗಿರುವ ಚಿಂತನೆಗಳನ್ನು ಅವರು ೧೯೮೧ರಲ್ಲಿ ನಿಧನರಾಗುವ ಮುನ್ನ ವ್ಯಕ್ತಪಡಿಸಿದ ವಿಚಾರಗಳೊಡನೆ ಕ್ರೋಢೀಕರಿಸ ಅರ್ಥಮಾಡಿಕೊಳ್ಳಬೇಕು.

"ಹೋರಾಟವು ಇನ್ನೂ ಇದೆ; ಇನ್ನೂ ಇದೆ ಸಾಧನಾ
ಮುಕ್ತರಾದ ಪ್ರಜೆಗಳಿಗೂ ಧರ್ಮದ ಆರಾಧನಾ
ಸ್ವೈರತೆಗೂ ಸ್ವಾತಂತ್ರ್ಯಕು ಇಹುದು ಅಜಗಜಾಂತರಾ
ಸುವ್ಯವಸ್ಥೆ ಮಹಾತಂತ್ರ, ಬದ್ಧತೆ ಬರಿ ಯಂತರಾ"
"ಹುಟ್ಟು ದಿನವೂ, ಬೆಳೆದ ದಿನವೂ, ಮತ್ತೆ ಬಂತು ಈ ದಿನಾ
ದುಡಿಯಬೇಕು, ಕಟ್ಟಬೇಕು ಪ್ರಜಾರಾಜ್ಯ ಜನಮನಾ
ಕೊಲ್ಲಬೇಕು ಸಾಯಬೇಕು ಎನುವಗೋ ರಣಾಂಗಣಾ
ಬದುಕುವವಗೆ ಕೋಲನಾಟ ಬಾಳು ಜೀವ ರಿಂಗಣಾ"[೧]

ಎನ್ನುತ್ತಾರೆ. ಸ್ವಾತಂತ್ರ್ಯ ಪಡೆದರೇ ಕೆಲಸ ಮುಗಿಯಲಿಲ್ಲ. ಕಟ್ಟುವಿಕೆಯು ನಿರಂತರವಾಗಿ ಸಾಗಬೇಕು. ಸಾಧನೆಗೆ ಅಂತ್ಯವಿಲ್ಲ. ಸ್ವಾತಂತ್ರ್ಯಕ್ಕೂ ಸ್ವೈರತೆಗೂ ಇರುವ ಅಂತರವನ್ನು ಅರಿತು ಬಾಳಬೇಕು, ದುಡಿಯಬೇಕು. ಕಟ್ಟಬೇಕು, ಪ್ರಜಾರಾಜ್ಯ ಜನಮನಾ ಎಂಬ ಅಮರ ಸಂದೇಶವನ್ನು ನೀಡುತ್ತಾರೆ. ೧೯೮೧ರಲ್ಲಿ ಬೇಂದ್ರೆಯವರು ಬರೆದ "ಇದು ಬರಿಬೆಳಗಲ್ಲೋ ಅಣ್ಣಾ" ಎಂಬ ಕವನದಲ್ಲಿ ಅವರು ಹೇಳುತ್ತಾರೆ. Freedom at any cost ಎಂಬುವವರನ್ನು ಮಾಡಬೇಕಾದೀತು? Shoot at sight ವಜ್ರದ ಕಡಲೆ" ಎಂದು ಸ್ವಾತಂತ್ರ್ಯವು ಸ್ವೇಚ್ಛಾಚಾರವಲ್ಲ; ಅದು ಶಾಂತಿ ಸ್ಥಾಪನೆಗೆ ಒಂದು ಸಾಧನ ಮಾತ್ರ.

---

೧. ಅಂಬಿಕಾತನಯದತ್ತರು ಕಂಡ ಭಾರತದರ್ಶನ, ಸಂ. ವಾಮನಬೇಂದ್ರೆ, ಪು. ೯.

"ಶಾಂತಿ ರಸವೇ
ಪ್ರೀತಿಯಿಂದ ಮೈದೋರಿತಣ್ಣಾ
ಇದು ಬರೀ ಬೆಳಗಲ್ಲೋ ಅಣ್ಣಾ"

ಶಾಂತಿ ಸ್ಥಾಪನೆಯಿಂದ ನಿಜವಾದ ಬೆಳಗು ಮೂಡುತ್ತದೆ ಎಂದು ಅಮರ ಸಂದೇಶವನ್ನು ಬೇಂದ್ರೆ ನೀಡುತ್ತಾರೆ. ಅವರು ಹೇಳುತ್ತಾರೆ.

"ಸ್ವಾತಂತ್ರ್ಯದ ಮುದ್ರೆ ಕಂಡು ಅವ್ಯವಸ್ಥೆ ಓಡಲಿ
ಸ್ವೈರ – ವಯರ ಇಂಗಿ ಹೋಗಿ ಸುವ್ಯವಸ್ಥೆ ಮೂಡಲಿ"[೧]

ಎಂದು ಅವ್ಯವಸ್ಥೆಯನ್ನು ಓಡಿಸಿ ಸುವ್ಯವಸ್ಥೆಯನ್ನು ಸ್ಥಾಪಿಸುವ ಸ್ವಾತಂತ್ರ್ಯ ಮೂಡ ಬರಬೇಕು ಎಂಬುದೇ 'ಸ್ವಾತಂತ್ರ್ಯದವರ್ದಂತಿ'ಯ ಆಚರಣೆಯ ಅಭಿಲಾಷೆ.

ಬೇಂದ್ರೆಯವರು ರಾಷ್ಟ್ರೀಯ ಚಳುವಳಿಯ ಕಾಲಕ್ಕೆ 'ನರಬಲಿ' ಎಂಬ ಕವನವನ್ನು ರಚಿಸಿ, ೧೯೩೧-೩೨ರಲ್ಲಿ ಜೇಲುವಾಸ ಹಾಗೂ ನಜರಬಂದಿ ಶಿಕ್ಷೆ ಅನುಭವಿಸಿದವರು ಬೇಂದ್ರೆ.

"ಮುಗಿ ಲೊಳಗೂ ಹಕ್ಕಿಗೆ ಹಾದಿ
ಕಡ। ಲೊಳಗೂ ಮೀನಕೆ ಬೀದಿ
ಮಲೆ। ಗಳೊಳೂ ಹೊಳೆಗೂ ಕೋಡಿ
ನಮ ಗಷ್ಟೇ ಏಕೀ ಬೇಡಿ?"

ಎಂಬ ತಳಮಳ ಬೇಂದ್ರೆಯವರದು. ಭಾರತದ ಪಾರತಂತ್ರ್ಯ ಹಾಗೂ ಬ್ರಿಟಿಷರ ದಬ್ಬಾಳಿಕೆಯನ್ನು –

"ಗೋಣಿನೊಳಿದೆ ಬಿಟ್ಟಿಯ ನೊಗವು
ಕೆಳ। ಗೊಗೆವುದೆ ಜೀವಕೆ ಸೊಗವು
ಅಂ। ದರಳ್ವುದು ತಾಯಿಯ ಮೊಗವು
ಅದು।ವರೆಗೂ ಸೆರೆಮನೆ ಜಗವು"[೨]

---

೧. ಅಂಬಿಕಾತನಯದತ್ತರು ಕಂಡ ಭಾರತದರ್ಶನ, ಸಂ. ವಾಮನಬೇಂದ್ರೆ, ಪು. xxviii.
೨. ಅಂಬಿಕಾತನಯದತ್ತರು ಕಂಡ 'ಭಾರತದರ್ಶನ' ಸಂ. ವಾ. ಬೇಂದ್ರೆ, ಪು. xi.

ಎಂದು ಬೇಂದ್ರೆಯವರು ವರ್ಣಿಸಿದ್ದಾರೆ. ಪಾರತಂತ್ರ್ಯದಿಂದ ಪಾರಾಗಲು, "ಇಗೋ ಹೊರಟೆವು ಬಿಡುಗಡೆಗಾಗಿ" ಎಂದು ಸಾರಿದ್ದರು. ಭಾರತದ ರಾಷ್ಟ್ರಧ್ವಜವನ್ನು ಅಭಿಮಾನದಿಂದೆತ್ತಿ ಜಯ ಜಯಕಾರ ಮಾಡುವುದನ್ನು ಬಯಸಿದರು, ಜನತೆಗೆ ಕರೆಕೊಟ್ಟರು.

ಅಹಿಂಸಾಪ್ರಾಯರಾದ ಮಹಾತ್ಮಾಗಾಂಧಿಯವರು ೧೯೪೨ಕ್ಕೆ ಚಲೇಜಾವ ಚಳವಳಿಯ ನಿಮಿತ್ತವಾಗಿ "ಮಾಡು ಅಥವಾ ಮಡಿ" ಎಂಬ ಆದೇಶಕೊಟ್ಟರು. ಬೇಂದ್ರೆಯವರು "ಯುದ್ಧ ಬಂತು ಮನೆಯವರೆಗೆ" ಬನ್ನಿ ಒಂದಾಗಿರಿ ಎಂದು ಎಚ್ಚರಿಸಿದ್ದಾರೆ. ಯುದ್ಧ ಮತ್ತು ಶಾಂತಿ ಜಾಗತಿಕ ಸಮಸ್ಯೆಗಳು. ಶಾಂತಿಪ್ರಿಯ ಭಾರತದವರು ಯುದ್ಧ ಮಾಡುವ ಪರಿಸ್ಥಿತಿ ನಿರ್ಮಾಣಗೊಂಡಿತು. ಆಗ ಬೇಂದ್ರೆ ಕೊಟ್ಟ ಎಚ್ಚರಿಕೆ.

"ಒಳ ಜಗಳವ ಕ್ಷಣವೆ ನಿಲಿಸಿ
ನಮ್ಮ ಜನವ ಒಲಿದು ಒಲಿಸಿ
ತಾಯಿ ನೆಲಕೆ ಸೇವೆ ಸಲಿಸಿ
ನಿಮ್ಮ ಹಗೆಯ ತಾಗಿರಿ"

ಎಂದಿದೆ. ಯುದ್ದ ಮೈಮೇಲೆ ಏರಿ ಬಂದಾಗ ಯುದ್ಧಮಾಡಲೇಬೇಕಾಗುತ್ತದೆ ಎಂದು ಬೇಂದ್ರೆ ಯುದ್ದವನ್ನು ಬೆಂಬಲಿಸಿದ್ದಾರೆ. ಬೇಂದ್ರೆ ಬಯಸುವುದು ಸ್ಮಶಾನ ಶಾಂತಿಯಲ್ಲ. ಆದರೆ ಪ್ರಸಂಗ ಮೈಮೇಲೆ ಬಂದಾಗ ಕಾದಾಟಬೇಕಾಗುತ್ತದೆ.

"ಕೊಲೆಯಿಂದಲು ಕಾಯಿರಿ
ಅಮೃತರಾಗಿ ಸಾಯಿರಿ"[೧]

ಎಂದಿದ್ದಾರೆ. ಬೇಂದ್ರೆಯವರು ಕೊಡುವ ಕರೆ (೧) ದೇವಜಾತಿಯಾಗಿರಿ (೨) ಎದೆಗಳನ್ನು ತೊಳೆಯಿರಿ (೩) ಮಿಂಚಿನಂತೆ ಹೊಳೆಯಿರಿ (೪) ಒಲವಿನೊಳವ ಬೆಳೆಯಿರಿ ಎಂಬುದಾಗಿದೆ.

"ಸಮರದಲ್ಲಿ ಅಮರರಾದ" ವೀರಶೂರರ ಬಗ್ಗೆ ಬೇಂದ್ರೆಯವರಲ್ಲಿ ಅಪಾರ ಗೌರವವಿದೆ. ಹೃದಯ ಹೃದಯದಲ್ಲಿ ಅವರ ನೆನಪು ಅಚ್ಚೊತ್ತಿದೆ. "ಬರುವರು, ಬರುವರು, ಬಂದೆ ಬರುವರು" ಎಂದೆ ಹುತಾತ್ಮರನ್ನು ಬೇಂದ್ರೆ ಬಣ್ಣಿಸಿದ್ದಾರೆ.

---

೧. ಅಂಬಿಕಾತನಯದತ್ತರು ಕಂಡ ಭಾರತದರ್ಶನ, ಸಂ. ವಾಮನಬೇಂದ್ರೆ, ಪು. xii.

"ಅವರ ನೆನವಿನಾ ಸುಗಂಧದಿಂದ
ಬಂದ ಜೀವನಾ
ಆಯಿತಿಂದು ಪಾವನಾ
ಆಡುತಿರಲಿ, ಒಳಗೆ ಹೊರಗೆ ಅದೇ ಉಸಿರು
ಬಾಯಿ ತೆರೆದು ಆಡಲೇಕೆ ಅವರ ಇವರ ಹೆಸರು
ಅವರ ಸಂಖ್ಯೆ ಕೋಟಿ, ಲಕ್ಷ
ಭರತಖಂಡ ಕಾರ್ಯದಕ್ಷ"[೧]

ಎಂದು ಭಾರತೀಯ ಕ್ಷಾತ್ರವನ್ನು ಸ್ಮರಿಸಿಕೊಂಡಿದ್ದಾರೆ. ಹೀಗಿದ್ದೂ "ವೈರಬೇಡ, ಸ್ಥೈರಬೇಡ"; ವೀರರ ಯುಗ, ವೈರದ ಯುಗ ಮುಗಿಯಬೇಕು ಎಂಬುದೇ ಬೇಂದ್ರೆ ಅಭೀಪ್ಸೆ. ಧೀರರ ಮತ್ತು ಧೈರ್ಯದ ಯುಗವನ್ನು ಬೇಂದ್ರೆ ಸ್ವಾಗತಿಸುತ್ತಾರೆ.

"ವಿರಸ ವಿಷವ ತೊಳೆಯುವಾ
ವೀರ ಧರ್ಮಸಾರ ಅಮೃತವೆಂದು ಬೆಳೆಯುವಾ"

ಎಂಬ ಸಾಲುಗಳಲ್ಲಿ ಬೇಂದ್ರೆಯವರು ಅಪೇಕ್ಷಿಸುವ ವರರ ನಡತೆಯ ಬಗ್ಗೆ ಸ್ಪಷ್ಟಿಕರಣವಿದೆ.

೧೯೪೭ರಲ್ಲಿ ನಮಗೆ ದೊರೆತ ಸ್ವಾತಂತ್ರ್ಯ, ಯುದ್ಧರಹಿತ ಸ್ವಾತಂತ್ರ್ಯವಾಗಿದ್ದರೂ, ಸ್ವಾತಂತ್ರ್ಯಕ್ಕಾಗಿ ನಡೆದ ಚಳುವಳಿಯ ಹೋರಾಟಗಳಲ್ಲಿ ಮಡಿದವರು ಅನೇಕರು. ಇಂಥ ಹುತಾತ್ಮರನ್ನು ನೆನೆಯಲೇ ಬೇಕು ಎಂದಿದ್ದಾರೆ ಬೇಂದ್ರೆ. ಯುದ್ಧದ ಅಂಜಿಕೆ ತಪ್ಪಿಲ್ಲವಲ್ಲ ಎಂಬುದು ಬೇಂದ್ರೆಯವರ ಚಿಂತೆ. ಇದು ಸಂಪೂರ್ಣ ಇಲ್ಲವಾಗಬೇಕಾದರೆ, ಪ್ರೇಮ ಪರಿಪಾಕದ ಪ್ರಜೆಗಳು ನಿರ್ಮಾಣವಾಗಬೇಕು. ಇದು ಕೆಲವರದೇ ಅಪೇಕ್ಷೆಯಾಗಿ ಉಪಯೋಗವಿಲ್ಲ. ಸಕಲರ ಅಪೇಕ್ಷೆಯಾದಾಗ ಮಾತ್ರ ವಿಶ್ವಕಲ್ಯಾಣ ಸಾಧ್ಯ. ದ್ವೇಷ ಎಂಬ ಭಾವನೆಯನ್ನೇ ಕೊನೆಗೊಳಿಸಿ, ಕೀರ್ತಿತರುವಂಥ ವೀರರು ಹುಟ್ಟುವರು ಎಂಬಲ್ಲಿ ಬೇಂದ್ರೆಯವರಿಗೆ ವಿಶ್ವಾಸ. ಅಂಥ ವೀರರು "ಬರುವರ್ು, ಬರುವರ್ು, ಬಂದೆ ಬರುವರ್ು" ಎಂಬ ಆತ್ಮವಿಶ್ವಾಸದಿಂದ, ಪ್ರತೀಕ್ಷೆಯಲ್ಲಿ ಇದ್ದವರು ಬೇಂದ್ರೆಯವರು.[೨]

---

೧. ಅಂಬಿಕಾತನಯದತ್ತರು ಕಂಡ ಭಾರತದರ್ಶನ, ಸಂ. ವಾಮನಬೇಂದ್ರೆ, ಪು. xiii.

೨. ಅಂಬಿಕಾತನಯದತ್ತರು ಕಂಡ ಭಾರತದರ್ಶನ, ಸಂ. ವಾಮನಬೇಂದ್ರೆ, ಪು. xxviii.

"ನವಯುಗಾರಂಭ" ಕವನವು ಮಹತ್ವದ ಗೀತೆಯಾಗಿದೆ.

"ಮಾತೆ ಕೃತಿಯ ರೂಪತಾಳಿ
ಘೋಷ ಸಿದ್ಧಿಯಾಗಿ ಬಾಳಿ
ತಮ್ಮ ತಾವೆ ಮೊದಲು ಆಳಿ
ಏಳಲಿ ಜನವು"[೧]

ಇಲ್ಲಿ ಪಾಂಡಿಚೇರಿಯ ಶ್ರೀಮಾತೆ ಹಾಗೂ ಶ್ರೀ ಅರವಿಂದ ಘೋಷರ ಸದ್ಬೋಧ ಕೃತಿಗಿಳಿದು, ಸಿದ್ಧಿಯಾಗಿ ಬಾಳಲೆಂಬ ಅಭೀಪ್ಸೆಯನ್ನು ವ್ಯಕ್ತಪಡಿಸಿ, ಸ್ವಾತಂತ್ರ್ಯ ಪಡೆದ ಜನರು ಸ್ವ-ಆಳ್ವಿಕೆಯನ್ನು ಸಾಧಿಸಬೇಕೆಂದು ಬಯಸುತ್ತಾರೆ.

"ಹಳ್ಳಿ ಹಳ್ಳಿ ಸಕಲ ಭೋಜ್ಯ
ಭಾರತವಿದು ಅವಿಭಾಜ್ಯ
ಜಗತ್ತೆಲ್ಲ ಏಕರಾಜ್ಯ
ಸಾರಲಿ ಶ್ರುತಿಗೆ"

ಎನ್ನುತ್ತಾರೆ. ಭಾರತದ ಏಕತೆಯು ಜಾಗತಿಕ ಏಕರಾಜ್ಯಕ್ಕೆ ಅಣಿಮಾಡಲಿ ಎಂಬ ಮಹದೇಚ್ಛೆ ಇಲ್ಲಿದೆ.

"ಹೃದಯಸಮತೆ ಮೊದಲ ಪಾಠ
ಬಾಂಧವ್ಯವೆ ಜೀವದಾಟ
ಮೂರು ಮುಖಕು ಒಂದೇ ಪೀಠ
ಸಿಂಹದ ದಾರಿ"[೨]

ಇದು ರಾಷ್ಟ್ರ ಲಾಂಛನದಲ್ಲಿಯ ಮೂರು ಸಿಂಹಮುಖಗಳು ಒಂದೇ ಪೀಠದ ಮೇಲಿದ್ದು ಏಕತೆಯ ಸಂದೇಶವನ್ನು ಹೃದಯ ಸಮತೆಯ, ಬಾಂಧವ್ಯದ ಜೀವದಾಟದ ಪಥವನ್ನು ತೋರುತ್ತಿರುವುದನ್ನು ಬಿಂಬಿಸುತ್ತದೆ.

೧.. ಅಂಬಿಕಾತನಯದತ್ತರು ಕಂಡ "ಭಾರತದರ್ಶನ"-ಸಂ.ವಾಮನಬೇಂದ್ರೆ- ಪು. xxvii
೨.. ಅಂಬಿಕಾತನಯದತ್ತರು ಕಂಡ "ಭಾರತದರ್ಶನ"-ಸಂ.ವಾಮನಬೇಂದ್ರೆ- ಪು. xxviii

"ಅರಳಿಸು ಹೃದಯಾರವಿಂದ

ಸಾವಿರದೀ ಏಕಬಂಧ

ಕುಣಿಯಲಿಸ್ವಚ್ಛಂದದಿಂದ

ನವಯುಗದಿಂದ"[೧]

ಹೃದಯಾರವಿಂದವು ಅರಳಿ, ಸಾವಿರದ ಅಮರ ಏಕಬಂಧದಿಂದ, ಸ್ವಚ್ಛಂದದಿ ಕುಣಿದು, ನವಯುಗ ಆರಂಭವಾಗಲಿ ಎಂಬ ಹೆಬ್ಬಯಕೆಯನ್ನು ಇಲ್ಲಿ ಮೂಡಿಸಿದ್ದಾರೆ. ಇದು ನವಯುಗಾರಂಭದ ಸ್ವಾತಂತ್ರ್ಯಗೀತೆಯಾಗಿದೆ.

ಬೇಂದ್ರೆಯವರು 'ನಾದಲೀಲೆ' ಕವನಸಂಕಲನದಲ್ಲಿ ಕೆಲವು ಕವನಗಳನ್ನು ಹಿಂಡಲಗಿ ಜೈನಿನಲ್ಲಿರುವಾಗ ರಚಿಸಿರುತ್ತಾರೆ. 'ಇದೋ ಪಂಜರ' 'ನಿದ್ದೆ' 'ಅದುವರೆಗೂ' ಮತ್ತು 'ಮಲ್ಲಾಡದ ಗಿಣಿಯೇ' ಎಂಬ ಕವನಗಳನ್ನು

"ಈ ಎಚ್ಚರದೀ ಹೆಚ್ಚಳ

ಈ ಸೇರಿತು ಈ ನಿಚ್ಚಳ

ಮೂಡಲಿಲ್ಲ ಅರಸು ತಾನು

ನಿಂತ ನೆಲೆಯ ಲೋಕತಾನು'[೨]

ಬೇಂದ್ರೆಯವರು ಭಾರತ ಮಾತೆಗೆ ಜಯಕಾರವನ್ನು ಹೇಳುವಾಗ

"ಜೈ ಭೂ ಮಾತೆ, ಜೈ ಭಾರತಮಾತೇ

ಆ ಮಾತೇ ಈ ಮಾತೇ

ಸಕಲ ಧೈರ್ಯದಾತೇ"

ಎಂಬ ಪಲ್ಲವಿಯನ್ನು ಹೊಂದಿರುವ ಈ ಕವನ ಭಾರತಮಾತೆಗೆ ಜಯಕಾರವನ್ನು ಘೋಷಿಸುವಾಗ, ಭೂಮಾತೆಗೂ ಜಯಕಾರವನ್ನು ಸಾರುತ್ತದೆ. ಆ ಮಾತೇ, ಈ ಮಾತೇ ಇವರು ಸಕಲ ಧೈರ್ಯವನ್ನು ದಯಪಾಲಿಸುವವರು. ಇದೇ ಮಾತೆಯರ ಮಾತು. ಈ ಕವನದಲ್ಲಿ ಅಂಬಿಕಾತನಯರ ಹೆಬ್ಬಯಕೆ ಈ ರೀತಿಯಾಗಿದೆ.

೧.. ಅಂಬಿಕಾತನಯದತ್ತರು ಕಂಡ "ಭಾರತದರ್ಶನ"–ಸಂ.ವಾಮನಬೇಂದ್ರೆ– ಪು. xxix

೨. ನಾದಲೀಲೆ, ಸಂ. ವಾಮನಬೇಂದ್ರೆ, ಪು. ೪೪.

"ಕೂಡಿ ನಡೆ, ಕೂಡಿ ನುಡಿ
ಮೂಡಿಸು ನೀ ನಮ್ಮಲೆ
ಅದೇ ಸ್ವಂತ ಅದೇ ಪಂಥ
ಅದೇ ಬಾಳಿನಾ ಬೆಲಿ

ಆ ತಾಯಿ ನಮ್ಮೆಲ್ಲರಲ್ಲಿ ಕೂಡಿ ನಡೆಯುವುದು ಹಾಗೂ ಕೂಡಿ ನುಡಿಯುವುದನ್ನು ಮೂಡಿಸಿದರೆ ಆ ಪಥವು ನಮ್ಮೆಲ್ಲರ ಬಾಳಿಗೆ ಬೇಲಿಯನ್ನು ನೀಡುವಂತಾಗುತ್ತದೆ. ಕವನದಲ್ಲಿ ವರಕವಿಗಳು ನೀಡುವ ಸಂದೇಶವು

"ಭೂಮಂಡಲ ಏಕರಾಷ್ಟ್ರ
ಸರ್ವವರ್ಣ ಮಾನವಾ
ಕೃತಯುಗದಾ ಪರ್ವದಲ್ಲಿ
ಕಲಿತನೋ ನವೋನವ"[೧]

ಎಂದು ಭೂಮಂಡಲವೇ ಏಕಾರಾಷ್ಟ್ರವಾಗಿ, ಎಲ್ಲ ವರ್ಣಗಳ ಮಾನವರೂ ಕೂಡಿ ನಡೆಯುವುದನ್ನು ಕಲಿತಾಗ, ನವನವತೆಯು ಮೂಡುತ್ತದೆ; ನವ ಮಾನವತೆಯ ಆವಿರ್ಭಾವವಾಗುತ್ತದೆ. ಆಗ ಕೃತಯುಗದ ಪರ್ವ ಮೂಡುತ್ತದೆ. ಇದು ಬೇಂದ್ರೆಯವರ ವಿಶ್ವದೃಷ್ಟಿ. ಹೊಸ ಜೀವನ ಮೌಲ್ಯದ ಉದಯಗೀತೆ ಇದು.

"ಭಾರತಂ ವಂದೇ' ಕವನವು 'ಭಾರತಂವಂದೇ, ಒಂದೇ ಭಾರತಂ" ಎಂದು ಪಲ್ಲವಿಸುತ್ತಾ ಪ್ರಾರಂಭವಾಗುತ್ತದೆ. ಭಾರತಕ್ಕೆ ನಮನವನ್ನು ಸಲ್ಲಿಸುತ್ತಿದ್ದಂತೆಯೇ, ಭಾರತವು ಒಂದೇ ಎಂಬುದನ್ನು ಇಲ್ಲಿ ಬಿಂಬಿಸಲಾಗಿದೆ. ಇಂಥ ಭಾರತದಲ್ಲಿ ಘಟಘಟದಲ್ಲಿಯೂ ಘನಘನತೇಜ ಸುಳಿಯು ಸುಳಿಸುಳಿದೇಳುತ್ತದೆ ಭಾರತ ಭೂಮಿಯಲ್ಲಿ ಎಂದು ಬಣ್ಣಿಸಿ, ಇಂಥ ಭಾರತಕ್ಕೆ ವಂದನೆಯನ್ನು ಸಲ್ಲಿಸುತ್ತಾರೆ, ವರಕವಿ ಬೇಂದ್ರೆಯವರು.

"ಮನಮನದ ಪೂಜನ।ಮನೆ ಮನೆಗೆ ಕೂಜನ
ತಾಯ್ತಂದೆ ಮಕ್ಕಳೊಕ್ಕೊರಲು
ಸಹಾನ್ವಾವವತು ಎನುತಿರಲು
ವಂದೇ ಭಾರತಂ"[೧]

---

೧. ಅಂಬಿಕಾತನಯದತ್ತರು ಕಂಡ "ಭಾರತದರ್ಶನ"–ಸಂ.ವಾಮನಬೇಂದ್ರೆ– ಪು. ೨೮

ರಾಷ್ಟ್ರದ ಎಲ್ಲ ಜನಮನದಲ್ಲಿ ನಡೆಯುವ ಪೂಜೆಯು ಮನೆ ಮನೆಯಲ್ಲಿಯ ತಾಯಿ-ತಂದೆ-ಮಕ್ಕಳ ಒಕ್ಕೊರಳಿನ 'ಸಹನಾವವತು'. ಈ ಪಠನದ ಘೋಷ ಮೊಳಗುತ್ತಿರುವ ಭಾರತಕ್ಕೆ ವರಕವಿಗಳು ನಮಿಸುತ್ತಾರೆ. ಜನ ಸಮುದಾಯವು ದಿನದಿನವೂ ನವರಾತ್ರಿಯನ್ನು ಆಚರಿಸುತ್ತಾ ನವಪಾತ್ರವನ್ನು ಧರಿಸುತ್ತಾ, ಭಾರತಾಂಭೆಯ ಘನವೆತ್ತ ಮೂರ್ತಿಯನ್ನು ಮನಃಪೂರ್ತಿಯಾಗಿ ಸ್ಮರಿಸಿ, ಆ ಮೂರ್ತಿಯನ್ನು ತಮ್ಮಲ್ಲೇ ಸ್ಮರಿಸುತ್ತಿರುವ ಭಾರತಕ್ಕೆ ನಮನಗಳನ್ನು ಸಲ್ಲಿಸುವ ಪರಿಯು ಅತ್ಯಂತ ವಿಶಿಷ್ಟವಾಗಿದೆ. ಜನ ಜನರಲ್ಲಿಯ ಮನಮನದಲ್ಲಿಯ ಸಹತ್ವವು ಭಾರತದ ನವನವತೆಗೆ ರೂಪುಕೊಟ್ಟಿದೆ ಎಂಬ ಸ್ಫುರಣವು ಚಿತ್ತಾಕರ್ಷಕವಾಗಿದೆ.

ಬೇಂದ್ರೆಯವರು ರಾಷ್ಟ್ರೀಯ ಚಳುವಳಿಯ ಕಾಲದಲ್ಲಿ ನಾಡಗುಡಿ ಕವನವನ್ನು ರಚಿಸುತ್ತಾರೆ.

> "ನನ್ನ ದೇಶದ ಗುಡಿಯ ಸಡಗರಕ್ಕಾಗೀಗೆ
> ಗುಡಿಯನ್ನು ಎತ್ತಿಹಿಡಿದೆ;

ದೇಶದ ಬಿಡುಗಡೆಗಾಗಿ ರಾಷ್ಟ್ರಧ್ವಜವನ್ನು ಎತ್ತಿ ಹಿಡಿದು ಹೋರಾಟಕ್ಕೆ ಸನ್ನದ್ಧರಾಗುವ ಬಗೆಯನ್ನು ಈ ಸಾಲುಗಳು ಬಣ್ಣಿಸುತ್ತವೆ.

> "ಜಯನಾದ ನಾಲಿಗೆಯ ತುದಿಯಲ್ಲಿ ಮೊಳಗುತಿದೆ
> ಭಯವಿಲ್ಲ ಎದೆಯ ಬದಿಯೊಳ್
> ಜಯವೆಂದು ಮುಳುಗಿದೆನುದೇಶಭಕ್ತಿಯ ಪೂರ
> ಬಂದಿರಲು ರಾಷ್ಟ್ರ ನದಿಯೊಳ್"[೨]

ರಾಷ್ಟ್ರನದಿಯಲ್ಲಿ ದೇಶಭಕ್ತಿಯ ಮಹಾಪೂರ ಬಂದಾಗ ಅದರಲ್ಲಿ ಭಯರಹಿತರಾಗಿ ಮುಳುಗಿ ಜಯಬೇರಿಯನ್ನು ಹೊಡೆಯುವ ವರ್ಣನೆ ಇಲ್ಲಿ ಮೂಡಿಬಂದಿದೆ.

೧.. ಅಂಬಿಕಾತನಯದತ್ತರು ಕಂಡ "ಭಾರತದರ್ಶನ"-ಸಂ.ವಾಮನಬೇಂದ್ರೆ- ಪು. ೨೯

೨.. ಅಂಬಿಕಾತನಯದತ್ತರು ಕಂಡ "ಭಾರತದರ್ಶನ"-ಸಂ.ವಾಮನಬೇಂದ್ರೆ, ೨೦೧೦, ಪು. ೧೫

'ಜನವೇ ರಾಷ್ಟ್ರ' ಎಂಬ ಕವನದಲ್ಲಿ ಹೀಗೆ ಹೇಳುತ್ತಾರೆ

"ಶ್ರಾವಣ ಮಾಸಕೆ ಶ್ರವಣಕೆ ಸಾರಿತು
ಭಾರತ ಮಾತೆಯ ಹೊಸಾ ಶ್ರುತೀ
ಜನವೇ ರಾಷ್ಟ್ರ, ರಾಷ್ಟ್ರವೇ ಜನವು
ಸಾರ್ವಭೌಮ ಮಾನವನ ಸ್ತುತೀ"

ಶ್ರಾವಣದ ಕವಿ ಎಂದೇ ಪ್ರಖ್ಯಾತಿಯನ್ನು ಪಡೆದ ವರಕವಿ ಅಂಬಿಕಾತನಯ ದತ್ತರಿಗೆ, ಶ್ರಾವಣ ಮಾಸದಲ್ಲಿ ಭಾರತ ಮಾತೆಯ ಹೊಸ ಶ್ರುತಿಯು ಕೇಳಿಸಿತ್ತು. ಆ ಶ್ರುತಿಯೇ – "ಜನವೇ ರಾಷ್ಟ್ರವು; ರಾಷ್ಟ್ರವೇ ಜನವು" ಎಂಬ ಅಮರ ನುಡಿ.

ತೆಲುಗಿನ ಪ್ರಖ್ಯಾತ ಕ್ರಾಂತಿಕಾರಿ ಕವಿ ಗುರುಜಾಡ ಅಪ್ಪಾರಾವು ಹೀಗೆಂದು ಹಾಡಿದ್ದರು–

"ದೇಶಮುಂಟೇ ಮಟ್ಟಿಗಾದೋಯ್
ದೇಶಮಂಟೇ ಮನುಷುಲೋಯ್

ಎಂದು ಇದರ ಅರ್ಥ "ದೇಶವೆಂದರೆ ಮಣ್ಣಲ್ಲವೋ, ದೇಶವೆಂದರೆ ಮನುಷ್ಯರೋ" ಎಂದು

"ಭಾರತ ಸ್ವಾತಂತ್ರ್ಯದ ವರ್ಧಂತೀ
ಶ್ರಾವಣಮಾಸದ ಮಳೆ – ಬಿಸಿಲು
ಜೀವನ ಚಕ್ರವ ತಿರುಗಿಸುತ್ತಲಿದೆ
ಜೀವನ ತತ್ತ್ವವ ಬಿಂಬಿಸಲು"[೧]

ಎಂಬುದಾಗಿ ಸ್ವಾತಂತ್ರ್ಯದ ವರ್ಧಂತಿಯು "ಜೀವನ ತತ್ತ್ವವ ಬಿಂಬಿಸಲು ಬರುತ್ತಿದೆ ಎಂಬ ಸಂದೇಶವನ್ನು ಸಾರುವ ವರಕವಿ ಅಂಬಿಕಾತನಯದತ್ತರು, ಈ ಕವನದಲ್ಲಿ ಸ್ವಾತಂತ್ರ್ಯಾನಂತರ ರಾಷ್ಟ್ರದ ದುರ್ಗತಿಯ ಚಿತ್ರಣವನ್ನು ನೋಡಿ ನೊಂದು ನುಡಿಯುತ್ತಾರೆ.

ದಾನವ ಶಕ್ತಿಗಳುದಿಸಿವೆ ಜಗದಲಿ
ಮಾನವನೇ ಮಾನವ ವೈರಿ

೧.. ಅಂಬಿಕಾತನಯದತ್ತರು ಕಂಡ "ಭಾರತದರ್ಶನ"–ಸಂ.ವಾಮನಬೇಂದ್ರೆ– ಪು. ೨೭

ಅರ್ಥಕಾಮಗಳ ಸಂಗರದಲ್ಲಿ
ಹೊತ್ತಿಕೊಂಡಿಹುದು ಹೊಟ್ಟೆಯುರಿ
ದೇವಗಣಂಗಳ ಒತ್ತಿಕ್ಕಿಹುದು
ತಮಸ್ಸು ಮತ್ತು ರಾಜಸವು
ಬಾಳುವ ಸತ್ತ್ವವೇ ಹದಗೆಟ್ಟಿಹುದು
ಸಾವಿಗೆ ಆಗಿದೆ ಕೈವಶವು

"ನಾಲ್ಕು ಕಡಲಿನಾ ಭೂಮಿ ಒಡಲಿನಾ

ಒಡೆತನ ಸಹೃದಯ ಜನಕ್ಕಿದೆ

ಕೊಲ್ಲುವ ಸಾಯುವ ಭಾಷೆಯುದುರಳಗೆ

ಬಾಳುವೆ ಮಾನವತನಕ್ಕಿದೆ

. . . .

. . . .

ಸತ್ತ್ವವಿಲ್ಲದಾ ರಾಷ್ಟ್ರಕ್ಕೆ ಬದುಕೇ?
ರಾಜ್ಯ ನಡೆಸದು ಪ್ರಜಾಜನಾ

ಹೊಟ್ಟೆಪಾಡಿಗೇ ಗುಲಾಮರಾಗಿ
ಜೀವ ಹಿಡಿಯುವದು ಎಷ್ಟು ದಿನಾ?
ಕೃತಯುಗ ತೆರಳಿತು, ತ್ರೇತವು ಕೆರಳಿತು

ದ್ವಾಪರ ಮುಗಿದಿತು ಮಸಣದಲಿ
ಕಲಿಯು ಬಂದಿದೆ ಕಲಹವು ತಂದಿದೆ
ವಿಜ್ಞಾನದ ಹೊಸ ತರುಣದಲಿ
ಅಜ್ಞಾನದ ಭರ ಅಹಂಕಾರದ ಜ್ವರ

ನೆತ್ತಿಗೇರದಿರಲಿ
ಹೃದಯ ವಿಕಾಸದ ವಸಂತಹಾಸದ

ನವಯುಗವೇ ಬರಲಿ"[೧]

೧.. ಅಂಬಿಕಾತನಯದತ್ತರು ಕಂಡ "ಭಾರತದರ್ಶನ"-ಸಂ.ವಾಮನಬೇಂದ್ರೆ- ಪು. ೩೧

ಸ್ವಾತಂತ್ರ್ಯೋತ್ತರ ಭಾರತದ ಪ್ರಚಲಿತ ಚಿತ್ರಣವು ಇದಾಗಿದೆ. ಇದರ ವಿವರಣೆಯ ಅಗತ್ಯವಿರುವುದಿಲ್ಲ. ಆದರೆ, ಈ ಲೋಪದೋಷಗಳನ್ನು ನ್ಯೂನತೆಗಳನ್ನು ಅನಿಷ್ಟತೆಗಳನ್ನು ತೊರೆದು ಹಾಕುವ ಅವಶ್ಯಕತೆ ಇದೆ. ಇಲ್ಲದೇ ಹೋದಲ್ಲಿ ಸ್ವಾತಂತ್ರ್ಯವು ಕೇವಲ ಒಂದು ಭ್ರಮೆಯಾಗಿ, ಮಿಥ್ಯೆಯಾಗಿ ನೆಲೆಸುವುದು. ಇಲ್ಲಿ ನೆನಪಿಸಿಕೊಳ್ಳಬೇಕಾದ ಮುಖ್ಯಾಂಶವೆಂದರೆ ವರಕವಿ ಬೇಂದ್ರೆಯವರು ಮರಣಶಯ್ಯೆಯಲ್ಲಿದ್ದಾಗ ಮಾನವ ಕೋಟಿಗೆ ನೀಡಿದ ಸಂದೇಶ – "ಹೃದಯ–ವಿವೇಕ" ಇದು ರಾಷ್ಟ್ರದ ಸಮಸ್ತ ಜನ–ಮನದಲ್ಲಿ ಮೂಡಿ ಬಂದಾಗ ಮಾತ್ರ ನವಯುಗವು ಬರುವುದರಲ್ಲಿ ಸಂದೇಹವಿಲ್ಲ.

"ಜಯ ಭಾರತಕೆ, ಜಯ ಭಾರತಿಗೆ
ಜಯವಾಗಲಿ ವಿಶ್ವತ್ರಾತಾ"

ಆಗ ಭಾರತಕ್ಕೂ ಜಯವಾಗುತ್ತದೆ, ಭಾರತಿಗೂ ಜಯವಾಗುತ್ತದೆ, ವಿಶ್ವ ಸಂರಕ್ಷಣೆಗೂ ಜಯವಾಗುತ್ತದೆ.

ಇದುವೆ "ಅಂಬಿಕಾತನಯದತ್ತರು ಕಂಡ ಭಾರತ ದರ್ಶನ"ದ ಸಾರವಾಗಿದೆ ಎಂದು ಹೇಳಬಹುದು.

ನಮ್ಮ ಈಗಿನ ಎಚ್ಚರದ ಅರಿವು ಹುಚ್ಚರ ಅರಿವಿಗಿಂತ ಬಹಳ ದೂರಿಲ್ಲ. ಈ ಎಚ್ಚರದೊಳಗೆ ಎಚ್ಚರ ಹುಟ್ಟಿಸುವಂತದ್ದನ್ನು ಕಾಣಹುದಾಗಿದೆ.

ಹೀಗೆ ಬೇಂದ್ರೆಯವರ ಸಾಹಿತ್ಯದಲ್ಲಿ ಸ್ವಾತಂತ್ರ ಹೋರಾಟದ ಪರಿಕಲ್ಪನೆಯನ್ನು ನಾವು ಕಾಣುತ್ತೇವೆ. ಅಂದರೆ ಸಂಖ್ಯಾ ದೃಷ್ಟಿಯಿಂದ ಕಡಿಮೆ ಪ್ರಮಾಣದ್ದಾಗಿದ್ದು, ರಚಿತವಾಗಿರುವ ಕವನಗಳಲ್ಲಿ ಸ್ವಾತಂತ್ರ್ಯ ಹೋರಾಟ ಮತ್ತು ನಾಡು–ನುಡಿಯ ಅಭಿಮಾನವನ್ನು ಕುರಿತ ಭಾವಗೀತೆಗಳಲ್ಲಿ ಗೇಯತೆಗಿಂತ ಹೆಚ್ಚಾಗಿ ಅರ್ಥಾಲಂಕಾರಗಳನ್ನು ಹೊಂದಿರುವುದರಿಂದ ಬೇಂದ್ರೆಯವರ ಈ ಭಾವಗೀತಗಳು ಹೆಚ್ಚು ಜನಪ್ರಿಯವಾಗಲಿಲ್ಲ. ಅಂದರೆ ಕುವೆಂಪುರವರ ಕನ್ನಡ ಡಿಂಡಿಮ, ಮೆಟ್ಟುವ ನೆಲ ಕರ್ನಾಟಕ, ಕನ್ನಡಮ್ಮನ ಹರಕೆ, ಭರತಭೂಮಿ ನನ್ನ ತಾಯಿ ಮೊದಲಾದ ಹಲವು ಕವನಗಳು ಜನರ ಬಾಯಲ್ಲಿ ಅಂದೂ – ಇಂದೂ ನಲಿವಂತೆ ಬೇಂದ್ರೆಯವರ ಭಾವಗೀತೆಗಳು ಮುಟ್ಟಲಿಲ್ಲ. ಜನಪ್ರಿಯತೆಯ ದೃಷ್ಟಿಯಿಂದ ಬೇಂದ್ರೆಯವರ ಪ್ರಕೃತಿ ಗೀತೆಗಳು ಮತ್ತು ಪ್ರೇಮಾಗೀತೆಗಳು ಅದೂ ಆರಂಭ ಹಂತದಲ್ಲಿ ರಚಿತವಾದ ಸರಳ

ಭಾವಗೀತೆಗಳು ಮಾತ್ರ ಜನರನ್ನು ತಲುಪಿತೆನ್ನಬಹುದು. ಬೇಂದ್ರೆಯವರ ಭಾವಗೀತೆಗಳು ಹೆಚ್ಚಿನ ಪ್ರಮಾಣದಲ್ಲಿ ಸಂಕೀರ್ಣವಾಗಿರುವುದೂ ಇದಕ್ಕೆ ಮುಖ್ಯ ಕಾರಣವಿರಬಹುದು. ಹೀಗೆ ಬೇಂದ್ರೆ ಸಾಹಿತ್ಯದಲ್ಲಿ ನಾಡು-ನುಡಿ, ಸಂಸ್ಕೃತಿ, ದೇಶಾಭಿಮಾನ, ಸ್ವಾತಂತ್ರ್ಯ ಹೋರಾಟದ ಪರಿಕಲ್ಪನೆಯನ್ನು ನಾವು ಅವರ ಸಾಹಿತ್ಯದಲ್ಲಿ ಕಾಣಬಹುದಾಗಿದೆ.

ಅಧ್ಯಾಯ – ೫

ಉಪಸಂಹಾರ

ಕನ್ನಡ ಸಾಹಿತ್ಯದ ಕವಿಗಳಲ್ಲಿ ವರಕವಿ ಎಂದು ಕರೆಯಲ್ಪಡುವ ಬೇಂದ್ರೆಯವರ ಸಾಧನೆ ಅತ್ಯಾಮೂಲ್ಯವಾದುದಾಗಿದೆ. ಕನ್ನಡ ಸಾಹಿತ್ಯಲೋಕಕ್ಕೆ ಅವರ ಕೊಡುಗೆ ಅಪಾರ, ಅವರ ಜೀವನದ ವಿವಿಧ ಮುಖಗಳನ್ನು, ಏರುಪೇರುಗಳನ್ನು ತಮ್ಮ ಸಾಹಿತ್ಯದಲ್ಲಿ ಪ್ರತಿಬಿಂಬಿಸಿದ್ದಾರೆ. ವ್ಯಷ್ಟಿಪ್ರಜ್ಞೆಯೊಂದಿಗೆ, ಸಾಮಾಜಿಕಪ್ರಜ್ಞೆ, ರಾಷ್ಟ್ರಪ್ರಜ್ಞೆ, ವಿಶ್ವಪ್ರಜ್ಞೆಗಳನ್ನು ಮೆರೆಸಿದ್ದಾರೆ. ಸರ್ವಧರ್ಮಕಾಲಗಳು ಪ್ರತಿಫಲಿಸಿವೆ. ಪ್ರತಿಬಿಂಬಿಸಿವೆ. ಬದುಕಿನ ಎಲ್ಲ ಪರಿಯ ಸ್ತರಗಳೂ ಧ್ವನಿಗೊಂಡಿವೆ. ಇಡೀ ಭಾರತೀಯ ಪರಂಪರೆಯನ್ನು ಜಾನಪದದ ಪ್ರಣಾಳಿಕೆಯಲ್ಲಿ ಹೊನಲು ಹರಿಸಿದ್ದಾರೆ.

ಬೇಂದ್ರೆಯವರು ದರ್ಶನದಲ್ಲೂ, ವರ್ಣನೆಯಲ್ಲೂ ಸಿದ್ದಿಹೊಂದಿದ ಕವಿ. ಅವರು ಆಧ್ಯಾತ್ಮಿಕ ರಚನೆಗಳು ಅವರ ಅಸಾಧಾರಣ ವ್ಯಕ್ತಿತ್ವವನ್ನು ಪ್ರಕಾಶಿಸುತ್ತದೆ. ಆಧುನಿಕ ಕನ್ನಡ ಸಾಹಿತ್ಯ ಲೋಕದಲ್ಲಿ ಕವಿಯಾಗಿ, ಕಥೆಗಾರರಾಗಿ, ಚಿಂತನಶೀಲರಾಗಿ, ವಿಮರ್ಶಕರಾಗಿ, ಸಂಶೋಧಕರಾಗಿ, ಆಧ್ಯಾತ್ಮಿಕರಾಗಿ, ವಿಚಾರವಂತರಾಗಿ – ಹೀಗೆ ಅನೇಕ ಸಾಹಿತ್ಯ ಪ್ರಕಾರಗಳಲ್ಲಿ ಸಾಹಿತ್ಯವನ್ನು ಕೃಷಿಮಾಡಿರುವಂತವರು. ಡಾ. ದತ್ತಾತ್ರೇಯ ರಾಮಚಂದ್ರ ಬೇಂದ್ರೆಯವರು. ಇಷ್ಟಲ್ಲದೆ ದೇಶದ ಸ್ವಾತಂತ್ರ್ಯಕ್ಕಾಗಿ ಕವನಗಳನ್ನು ಬರೆದು ಹುರಿದುಂಬಿಸುವ ಪ್ರಯತ್ನದಲ್ಲಿರುವಾಗ ಸೆರೆಮನೆವಾಸವನ್ನು ಅನುಭವಿಸಿದ ಮಹಾನುಭಾವಿಗಳು ಬೇಂದ್ರೆಯವರು.

"ಬೇಂದ್ರೆಯವರ ಸಾಹಿತ್ಯದಲ್ಲಿ ಸ್ವಾತಂತ್ರ್ಯ ಹೋರಾಟದ ಪರಿಕಲ್ಪನೆ" ಈ ನಿಬಂಧವು ಒಟ್ಟು ಐದು ಅಧ್ಯಾಯಗಳನ್ನು ಒಳಗೊಂಡಿದೆ. ಅದರಲ್ಲಿ ಉಪಸಂಹಾರವಾದ ಈ ಭಾಗವು ಸೇರಿ ರಚನೆಯಾಗಿರುತ್ತದೆ.

ಒಂದನೇ ಅಧ್ಯಾಯವು "ಅಧ್ಯಯನದ ಉದ್ದೇಶ, ಮತ್ತು ವ್ಯಾಪ್ತಿ" ಆಗಿದ್ದು ಕನ್ನಡ ಸಾಹಿತ್ಯದ ನವೋದಯದ ಕಾವ್ಯದ ಬೆಳವಣಿಗೆಯಲ್ಲಿ ಮಹತ್ವದ ಪಾತ್ರವಹಿಸಿ, ಉತ್ತರ ಕರ್ನಾಟಕದಲ್ಲಿ ಗೆಳೆಯರೊಡನೆ ಕೂಡಿ "ಗೆಳೆಯರ ಗುಂಪು" ರೂಪಗೊಂಡದ್ದು. ನವೋದಯ ಸಾಹಿತ್ಯದ ಪ್ರಮುಖಕಾರ್ಯ, ದೇಶದ ಸ್ವಾತಂತ್ರ್ಯ ಚಳವಳಿ, ಗಾಂಧಿವಾದ ಕರ್ನಾಟಕ ಏಕೀಕರಣ, ಭಾಷೆ–ಸಂಸ್ಕೃತಿಗಳ ಪುನರುಜ್ಜೀವನ, ಸುಧಾರಣಾವಾದ, ಹಾಗೂ ಸಾಹಿತ್ಯದಲ್ಲಿ ಎಲ್ಲಾ ರೀತಿಯ ಮಜಲುಗಳನ್ನು ಗುರುತಿಸಿಕೊಂಡಿರುವುದರಿಂದ ಅಧ್ಯಯನಕ್ಕೆ ಪ್ರೇರಣೆಯಾಗುತ್ತದೆ ಎಂದು ತಿಳಿಸಲಾಗಿದೆ.

ಎರಡನೇ ಅಧ್ಯಾಯವು "ಬೇಂದ್ರೆಯವರ ಬದುಕು-ಬರಹ" ಬೇಂದ್ರೆಯವರ ತಮ್ಮ ಜೀವನದಲ್ಲಿ ಏಳು-ಬೀಳುಗಳನ್ನು ಕಂಡುಂಡ ಬಗ್ಗೆ ವಿದ್ವಾಂಸರು ಹೇಳಿದಂತೆ ಬೆಂದು ಬೆಂದು ಬೇಂದ್ರೆಯಾದರು ಎಂಬುದನ್ನು ನಾವು ಇಲ್ಲಿ ಕಾಣಬಹುದು. ಹಾಗೂ ಅವರ ಸಾಹಿತ್ಯದ ಬರಹವನ್ನು ಸಹ ನೋಡಬಹುದು. ದೇಶಪ್ರೇಮದ ಗೀತೆಗಳು ತೀವ್ರವಾದ ಅನುಭಾವದಿಂದ ಭಾವವೇಶದಿಂದ ರಚಿತವಾಗಿರುವುದನ್ನು ನಾಡುನುಡಿಯನ್ನು, ಸಂಸ್ಕೃತಿಯನ್ನು ಕುರಿತ ಕವಿತೆಗಳನ್ನು, ದೇಶಭಕ್ತಿ ಗೀತೆಗಳು, ಪ್ರಕೃತಿಗೀತೆಗಳು ವಿಡಂಬನ, ಆಧ್ಯಾತ್ಮಿಕ ಗೀತಗಳನ್ನು ಒಳಗೊಂಡ ಬರಹಗಳನ್ನು ಕಾಣಬಹುದು.

ಮೂರನೇ ಅಧ್ಯಾಯವು "ಭಾರತೀಯ ಸ್ವಾತಂತ್ರ್ಯ ಹೋರಾಟದ ಒಂದು ಸಂಕ್ಷಿಪ್ತ ಚಿತ್ರಣ"ವನ್ನು ಈ ಅಧ್ಯಾಯದಲ್ಲಿ ನಾವು ನೋಡಬಹುದು. ಭಾರತದೇಶವು ಬ್ರಿಟಿಷರ ಆಳುಗಳಾಗಿ ಕೆಲಸಮಾಡುವಂತಹದ್ದು. ಗಾಂಧೀಜಿಯವರ ಅಹಿಂಸಾ ಮಾರ್ಗದಿಂದ ನಡೆಸಿದ ಹೋರಾಟಗಳು, ಮಂದಗಾಮಿಗಳು ಮತ್ತು ಉಗ್ರಗಾಮಿಗಳಾಗಿ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಮಹಾನ್ ಚೇತನರ ಬಗ್ಗೆ ಉದಾ: ಸುಬಾಸ್‌ಚಂದ್ರಬೋಸ್, ಭಗತ್‌ಸಿಂಗ್, ಗಾಂಧೀಜಿ, ಅಂಬೇಡ್ಕರ್, ಝಾನ್ಸಿರಾಣಿ ಲಕ್ಷ್ಮೀಬಾಯಿ ಇನ್ನೂ ಮುಂತಾದವರನ್ನು ಸಂಕ್ಷಿಪ್ತವಾಗಿ ತಿಳಿಸಲಾಗಿದೆ. ಹಾಗೂ ೧೯೪೨ರ ಕ್ವಿಟ್ ಇಂಡಿಯಾ ಚಳುವಳಿ ಅಥವಾ "ಬ್ರಿಟಿಷರೆ ಭಾರತವನ್ನು ಬಿಟ್ಟು ತೊಲಗಿರಿ" ಎಂಬ ಸಂದೇಶವನ್ನು ಸಾರುವಂತಹ ರೀತಿಯಲ್ಲಿ ನಡೆಸಿದ ಹೋರಾಟಗಳನ್ನು ಮತ್ತು ೧೮೫೭ರ ಸಿಪಾಯಿದಂಗೆಯನ್ನು ಕುರಿತು ಅದರಲ್ಲಿ ಹೋರಾಡಿದ ಮಹಾನ್‌ಚೇತನರ ಬಗ್ಗೆ ಹಾಗೂ ದಂಗೆಯ ಪರಿಣಾಮ ಏನು ಎಂಬುದನ್ನು ಹಾಗೂ ನಮ್ಮ ದೇಶಕ್ಕೆ ಸಿಕ್ಕ ಸ್ವಾತಂತ್ರ್ಯವನ್ನು ಹಾಗೂ ಅದನ್ನು ಆಚರಿಸಿದ ಬಗೆಯನ್ನು ಪ್ರಸ್ತುತ ಅಧ್ಯಾಯದಲ್ಲಿ ಭಾರತ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದವರ ಸಂಕ್ಷಿಪ್ತ ಚಿತ್ರಣವನ್ನು ಕೊಡಲಾಗಿದೆ.

ನಾಲ್ಕನೇ ಅಧ್ಯಾಯವು "ಬೇಂದ್ರೆ ಸಾಹಿತ್ಯದಲ್ಲಿ ಸ್ವಾತಂತ್ರ್ಯ ಹೋರಾಟದ ಪರಿಕಲ್ಪನೆ" ಬಹುಮುಖ್ಯವಾದ ಅಧ್ಯಯನ ಭಾಗ, ಬೇಂದ್ರೆಯವರು ತಮ್ಮ ಸಾಹಿತ್ಯ ಜೀವನದಲ್ಲಿ ಗೆಳೆಯರ ಗುಂಪನ್ನು ಕಟ್ಟಿ ಸಾಹಿತ್ಯ ರಚನೆ, ಗೆಳೆಯರ ಜೊತೆಯಲ್ಲಿ ತುಂಬು ಆಸಕ್ತಿಯಿಂದ ಸಾಹಿತ್ಯ ಕ್ಷೇತ್ರದಲ್ಲಿ ಪಾಲ್ಗೊಂಡು ದೇಶದ ಸ್ವಾತಂತ್ರ್ಯವನ್ನು ಕುರಿತು ರಚಿಸಿದ 'ನರಬಲಿ' ಕವನದಿಂದ ಬ್ರಿಟಿಷರ ಕೆಂಗಣ್ಣಿಗೆ ಗುರಿಯಾಗಿ, 'ಹಿಂಡಲಗಿ ಜೈಲಿನಲ್ಲಿ' ವಾಸ. ಅಲ್ಲಿಂದ ಮುಗದದಲ್ಲಿ ಸೆರೆಮನೆ ವಾಸ. ನಂತರ ತಮ್ಮ

ವೃತ್ತಿಯನ್ನು ಕಳೆದುಕೊಂಡು ಜೀವನಮಾಡಲು ಕಷ್ಟಪಟ್ಟಿದ್ದು ಅವರ ಶ್ರೀಮತಿಯೊಂದಿಗಿನ ವಿರಸ. ಆ ಸಮಯದಲ್ಲಿ ರಚನೆಯಾದ ಕವನಗಳು. ದೇಶದ ಸ್ವಾತಂತ್ರ್ಯವನ್ನು ಹಾಗೂ ಕನ್ನಡ ನಾಡು-ನುಡಿಯ ಸಂಸ್ಕೃತಿಯನ್ನು ಬಿಂಬಿಸುವಂತಹದ್ದನ್ನು ಹಾಗೂ ತಮಗೆ ಇದರಿಂದಾದ ನೋವುಗಳನ್ನು ವ್ಯಕ್ತಪಡಿಸಿದ್ದನ್ನು ಪ್ರಸ್ತುತ ಅಧ್ಯಾಯದಲ್ಲಿ ಕಾಣಬಹುದಾಗಿದೆ.

ಐದನೇ ಅಧ್ಯಾಯವು 'ಉಪಸಂಹಾರ' ಭಾಗವಾಗಿದೆ. ಈ ಅಧ್ಯಾಯ ಈ ಎಲ್ಲಾ ಸಾಹಿತ್ಯದ ಅಧ್ಯಯನದ ವಿಶೇಷತೆಯನ್ನು ಸಂಕ್ಷಿಪ್ತ ಸಮರೋಪವಾಗಿ ವಿಷಯವನ್ನು ಒದಗಿಸುತ್ತದೆ.

"ಬೇಂದ್ರೆ ಸಾಹಿತ್ಯದಲ್ಲಿ ಸ್ವಾತಂತ್ರ್ಯ ಹೋರಾಟದ ಪರಿಕಲ್ಪನೆ" ಅಧ್ಯಯನವು ಬೇಂದ್ರೆಯವರ ವಿಶಿಷ್ಟ ಪ್ರತಿಭೆಯನ್ನು ಗುರುತಿಸುವಂತದ್ದು, ತಮ್ಮ ಗೆಳೆಯರ ಗುಂಪಿನಿಂದ ಉತ್ಸಾಹಭರಿತರಾಗಿ ದೇಶಕ್ಕೆ ಸ್ವಾತಂತ್ರ್ಯವನ್ನು ಕೊಡುವಂತಹ ಕವನಗಳ ರಚನೆ ನಂತರ ಸೆರೆಮನೆ ವಾಸ, ಗೆಳೆಯರ ಗುಂಪು ಚದುರುವಿಕೆ, ಹಿಂಡಲಗಿನಲ್ಲಿ ಮತ್ತು ಮುಗದದಲ್ಲಿ ಸರೆಮನೆ ವಾಸದ ಸಂದರ್ಭದಲ್ಲಿ ಕವನ ರಚನೆ ಬ್ರಿಟಿಷರ ತಪ್ಪುಕಲ್ಪನೆಯಿಂದ ಸೆರೆಮನೆ ಸೇರಿ ತಮ್ಮ ಶಿಕ್ಷಕ ವೃತ್ತಿ ಕಳೆದುಕೊಂಡ ಬಗೆ ಇದರಿಂದ ಪತ್ನಿ ಬೇಸರ ಸೆರೆಮನೆಯಿಂದ ಹೊರಬಂದ ಮೇಲೆ ಸ್ವಾತಂತ್ರ್ಯಕುರಿತ ಕವನಗಳನ್ನು ರಚಿಸದಿರುವುದು. ಬೇಂದ್ರೆಯವರು ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲಿ ಕೃಷಿ ಮಾಡಿರುವುದನ್ನು ನಾವು ಕಾಣುತ್ತೇವೆ. ಹಾಗಾಗಿ ಬೇಂದ್ರೆಯವರನ್ನು "ಆಡುಮುಟ್ಟದ ಸೊಪ್ಪಿಲ್ಲ ಬೇಂದ್ರೆ ತಿಳಿಯದ ವಿಷಯವಿಲ್ಲ" ಎಂದು ತಿಳಿಯಬಹುದಾಗಿದೆ.

ಗ್ರಂಥಋಣ

೧.	ಬೇಂದ್ರೆ ಜೀವನ ಪರಿಚಯ	:	ಡಾ. ವಾಮನಬೇಂದ್ರೆ, ವಿಶಾಖಾ ಪ್ರಕಾಶನ, ಅಂಬಿಕಾತನಯದತ್ತ ವೇದಿಕೆ, ವಿಶ್ವಶ್ರಮಚೇತನ, ಗೋಕುಲ ರಸ್ತೆ, ಹುಬ್ಬಳ್ಳಿ ಐದನೇ ಮುದ್ರಣ, ೧೧-೫-೧೯೯೦
೨.	ಗರಿ	:	'ಸಂಪಾದಕರು: ವಾಮನಬೇಂದ್ರೆ, ಪ್ರಕಾಶಕರು: ಪಾಂಡುರಂಗ ಬೇಂದ್ರೆ, ಶ್ರೀಮಾತಾ ಪ್ರಕಾಶನ - ೧೩, ಶ್ರೀಮಾತಾ' ವರಕವಿ, ಡಾ. ದ.ರಾ.ಬೇಂದ್ರೆ ಮಾರ್ಗ ಸಾಧನಕೇರಿ, ಧಾರವಾಡ ಮುದ್ರಣ: ಆಗಸ್ಟ್೧೭, ೧೯೯೩, ಆವೃತ್ತಿ-೧೦
೩.	ಸಖೀಗೀತ	:	ಸಂ. ವಾಮನಬೇಂದ್ರೆ ಪ್ರಕಾಶಕರು: ಪಾಂಡುರಂಗಬೇಂದ್ರೆ ಶ್ರೀಮಾತಾ ಪ್ರಕಾಶನ ಸಾಧನಕೇರಿ, ಧಾರವಾಡ ಆವೃತ್ತಿ - ೧೧, ೧೨-೪-೧೯೯೫
೪.	ನಾದಲೀಲೆ	:	ಸಂ. ವಾಮನಬೇಂದ್ರೆ ಪ್ರಕಾಶಕರು: ಪಾಂಡುರಂಗಬೇಂದ್ರೆ ಶ್ರೀಮಾತಾ ಪ್ರಕಾಶನ ಸಾಧನಕೇರಿ, ಧಾರವಾಡ ಹನ್ನೆರಡನೇ ಆವೃತ್ತಿ, ೧-೧-೧೯೯೬
೫.	ಅಂಬಿಕಾತನಯದತ್ತರು ಕಂಡ ಭಾರತ ದರ್ಶನ	:	ಸಂ. ವಾಮನಬೇಂದ್ರೆ ಪ್ರಕಾಶಕರು, ಡಾ. ಕೆ.ಎನ್.ಶರ್ಮ ದ.ರಾ.ಬೇಂದ್ರೆ ಸಂ. ಸಂಸ್ಥೆ, ವಿಶ್ವಶ್ರಮ ಚೇತನ, ಗೋಕುಲರಸ್ತೆ, ಬಸವೇಶ್ವರನಗರ ಹುಬ್ಬಳ್ಳಿ, ಮುದ್ರಣ-೨೦೧೦, ಜನವರಿ ೩೧.
೬.	ಬೇಂದ್ರೆಯವರ ಕಾವ್ಯದ ವಿಭಿನ್ನ ನೆಲೆಗಳು	:	ಸುಮತೀಂದ್ರ ನಾಡಿಗ, ಸುವಿದ್ಯಾ ಪ್ರಕಾಶನ ೭ ಸರ್ವೆಯರ್ ರಸ್ತೆ, ಬಸವನಗುಡಿ, ಬೆಂಗಳೂರು, ೧ನೇ ಮುದ್ರಣ, ೧೯೮೯.
೭.	ಬೇಂದ್ರೆ ಸಾಹಿತ್ಯ ಸಮಾಲೋಚನೆ	:	ಸಂ. ರಾಗೌ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಮುದ್ರಣ - ೧೯೯೬, ಪ್ರಸಾರಾಂಗ

೮. ಬೇಂದ್ರೆ ಸಾಹಿತ್ಯ ಚಿಂತನೆ : ಸಂ. ಎನ್.ಚನ್ನಪ್ಪ
ಎಸ್‌ಬಿಎಸ್ ಪಬ್ಲಿಷರ್ಸ್ ಡಿಸ್ಟ್ರಿಬ್ಯೂಟರ್ಸ್
ರೈಲ್ವೆ ಪ್ಯಾರಲಲ್ ರಸ್ತೆ
ಕುಮಾರ ಪಾರ್ಕ್ ಈಸ್ಟ್
ಬೆಂಗಳೂರು.
೧ನೇ ಮುದ್ರಣ, ೧೯೯೭.

೯. 'ಜ್ಞಾನಪೀಠ ಪ್ರಶಸ್ತಿ ವಿಜೇತರು' ಮಾಲೆ ಬೇಂದ್ರೆ : ಡಾ. ಡಿ.ಮಂಗಳಾ ಪ್ರಿಯದರ್ಶಿನಿ
ಪ್ರಕಾಶಕರು: ಮಲ್ಲಿಕಾರ್ಜುನಸ್ವಾಮಿ
ರಿಜಿಸ್ಟ್ರಾರ್, ಕರ್ನಾಟಕ ಸಾಹಿತ್ಯ ಅಕಾಡೆಮಿ
ಕನ್ನಡ ಭವನ, ಬೆಂಗಳೂರು
ಮುದ್ರಣ – ೨೦೦೩.

೧೦. ಬೇಂದ್ರೆ ಸಾಹಿತ್ಯ ವಿಹಾರ : ಸಂ. ಜಿ.ಎಸ್.ಭಟ್ಟ
ಚೇತನಬುಕ್ ಹೌಸ್
ಮೈಸೂರು.
ಮುದ್ರಣ – ೧೯೯೯

೧೧. ಮಹಾತ್ಮಾಗಾಂಧಿ ಜೀವನ ಚರಿತ್ರೆ ಮತ್ತು ಸಾಧನೆಗಳು : ಶರತ ಕಿದಿಯೂರ
ಪಾರು ಪ್ರಕಾಶನ, ಸ್ಟೇಷನ್ ರೋಡ್, ಗದಗ
ಮುದ್ರಣ – ೨೦೦೦

೧೨. ಭಾರತದ ಸ್ವಾತಂತ್ರ್ಯ ಹೋರಾಟಗಾರರು (ಮಹಾಚೇತನಗಳು) : ಡಾ. ಸಿದ್ದಗಂಗಯ್ಯ ಹೊಳತಾಳ್
ಪ್ರ. ಸ್ಟೂಡೆಂಟ್ ಬುಕ್‌ಹೌಸ್
ವಂಶ ತಾಲ್ಲೂಕ್ ಕಚೇರಿ ಎದುರು
ಬಿ.ಸಿ.ರೋಡ್

೧೩. ಆಧುನಿಕ ಭಾರತ ಇತಿಹಾಸದ ಸಂಕ್ಷಿಪ್ತ ಚರಿತ್ರೆ : ಹೆಚ್.ಎಂ.ಬಸವರಾಜ, ಉಮಾಪ್ರಕಾಶನ
ಟೀಚರ್ಸ್ ಲೇ ಔಟ್,
ಮೈಸೂರು –೧೧